epaper - karnatakamalla.com

ಕರ್ನಾಟಕ ಮಲ್ಲ

TEL: 24715208, Fax:24715237 ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ KARNATAKA MALLA, MUMBAI

ಸಂಪುಟ : 35 ಸಂಚಿಕೆ : 152 ಶನಿವಾರ 04-07-2026 ಬೆಲೆ : ₹ 6 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



ಡೀಪ್‌ಫೇಕ್, ಎಐ-ರಚಿತ ಫೋಟೋ ವಿರುದ್ಧ ನಟಿ ಪ್ರೀತಿ ಜಿಂಟಾ ಹೈಕೋರ್ಟ್‌ಗೆ



ಐದು ಖಂಡಗಳ ಜನರು ತಮ್ಮ ದೇಶದಲ್ಲಿ ಆರ್‌ಎಸ್‌ಎಸ್ ಸ್ವಯಂ ಸೇವಕರಿಂದ ತರಬೇತಿ ಬಯಸುತ್ತಾರೆ: ಭಾಗವತ್


ತಾಳ್ಮೆಯಿಂದ ಇರುವವನು ಎಂದಿಗೂ ಸೋಲಲು ಸಾಧ್ಯವಿಲ್ಲ. ಒಮ್ಮೆ ತಾಳ್ಮೆ ವಹಿಸಿ ನೋಡು ಜೀವನ ನಿನಗೆ ಬಹಳಷ್ಟು ಕಲಿಸುತ್ತದೆ.

2 ಠಾಕ್ರೆಸೇನೆ ನಾಯಕಿ ಶುಭಾಂಗಿ ಪಾಟೀಲ್ ಶಿಂದೆಸೇನೆ ಸೇರ್ಪಡೆಗೆ ನಿರ್ಧಾರ

ಪುಣೆ ರಿಯಲ್ ಎಸ್ಟೇಟ್ ಏಜೆಂಟ್ ಕೊಲೆ: ಆರೋಪಿಗಳಾದ ಸಿಯಾ, ಪ್ರಿಯಕರನಿಗೆ ಜು.16 ರವರೆಗೆ ನ್ಯಾಯಂಗ ಬಂಧನ 3

ತುಂಬಾ ನೋವು ತಿಂದು ಕಣ್ಣೀರು ಹಾಕಿ ಬದುಕುವ ಹೆಣ್ಣು ಯಾವತ್ತೂ ಯಾರಿಗೂ ನೋವು ಕೊಡುವುದಕ್ಕೆ ಬಯಸಲ್ಲ.

ಮುಂಬಯಿ: 5 ಗಂಟೆಯಲ್ಲಿ 70 ಮಿಲಿಮೀಟರ್ ಮಳೆ; ಇಂದು, ನಾಳೆ ರೆಡ್ ಅಲರ್ಟ್







ಮುಂಬಯಿ, ಜು. 3- ಮುಂಬಯಿ ನಗರ ಮತ್ತು ಉಪನಗರಗಳು ಮತ್ತು ಉಪ ಜಿಲ್ಲೆಗಳಲ್ಲಿ ಶುಕ್ರವಾರ ಜಡಿ ಮಳೆಯಾಗಿದ್ದು ಮುಂಬಯಿ ನಗರದ ಕೆಲವು ಪ್ರದೇಶಗಳಲ್ಲಿ ಕುಂಭದ್ರೋಣ ಮಳೆಯಾಗಿದ್ದು ಕೇವಲ 5 ಗಂಟೆಗಳ ಅವಧಿಯಲ್ಲಿ 70 ಮಿಲಿಮೀಟರಿಗೂ ಅಧಿಕ ಪ್ರಮಾಣದ ಮಳೆಯಾಗಿದ್ದು, ಮುಂಬಯಿ, ಥಾಣೆ, ಪಾಲ್ಘರ್ ಮತ್ತು ರಾಯಗಢ ಜಿಲ್ಲೆಗಳಲ್ಲಿ ಶನಿವಾರ ಮತ್ತು ರವಿವಾರ ಅತಿಯಾದ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ರೆಡ್ ಅಲರ್ಟ್ ಎಚ್ಚರಿಕೆ ನೀಡಿದೆ.

ಮುಂಬಯಿ ನಗರದ ಬಾಂದ್ರಾದ ಸುಪಾರಿ ಟ್ಯಾಂಕ್ ಮುನ್ಸಿಪಲ್ ಶಾಲೆಯಲ್ಲಿ ಕೇವಲ 5 ಗಂಟೆಯ ಅವಧಿಯಲ್ಲಿ ಅತಿ ಹೆಚ್ಚು 73.8 ಮಿಲಿಮೀಟರ್ ಮಳೆಯಾದರೆ ಪ್ರಭಾದೇವಿಯಲ್ಲಿ 72.2 ಮಿಲಿಮೀಟರ್, ಬಾಂದ್ರಾ ಪಶ್ಚಿಮದಲ್ಲಿ 70.8 ಮಿಲಿಮೀಟರ್ ಮತ್ತು ಪರೇಲಿನಲ್ಲಿ 69.4 ಮಿಲಿಮೀಟರ್ ಮಳೆಯಾಗಿದೆ ಎಂದು ಬಿಎಂಸಿ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬಯಿ ನಗರ ಮತ್ತು ಉಪನಗರಗಳಲ್ಲಿ ಶನಿವಾರ ಮತ್ತು ರವಿವಾರ ಭಾರೀ ಮಳೆಯಾಗಲಿದ್ದು ಕೆಲವು ಪ್ರದೇಶಗಳಲ್ಲಿ ಗಂಟೆಗೆ 50-60 ಕಿಲೋಮೀಟರ್ ವೇಗದ ಗಾಳಿ ಬೀಸಲಿದೆ ಎಂದು ಐಎಂಡಿ ಮುನ್ನೆಚ್ಚರಿಕೆ ನೀಡಿದೆ. ಮುಂಬಯಿ ನಗರದಲ್ಲಿ ಗುರುವಾರ ರಾತ್ರಿಯೂ ಒಂದೇ ಸಮನೆ ಮಳೆಯಾಗಿದ್ದು, ನಗರದ ಹಲವು ಕಡೆಗಳಲ್ಲಿ ಬೆಳಗ್ಗಿನಿಂದ ಜಡಿ ಮಳೆಯಾಗಿದ್ದು ತಗ್ಗು ಪ್ರದೇಶಗಳು ಜಲಾವೃತಗೊಂಡಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದು ಕೆಲವೆಡೆ ಕಾರುಗಳು ಭಾಗಶಃ ಮುಳುಗಡೆಯಾಗಿದ್ದವು. ಮೆಟ್ರೋ, ಉಪನಗರ ರೈಲ್ವೆ ಮತ್ತು ಬೆಸ್ಟ್ ಬಸ್ಸುಗಳ ಸಂಚಾರ ಅಂತಹ ಸಮಸ್ಯೆಯಿಲ್ಲದೆ ಮುಂದುವರಿದಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಗುರುವಾರ ಮಧ್ಯರಾತ್ರಿಯಿಂದ ಧಾರಾಕಾರ ಮಳೆಯಾಗಿದ್ದು ತಗ್ಗು ಪ್ರದೇಶಗಳಾದ ದಾದರ್, ಅಂಧೇರಿ, ಗೋರೆಗಾಂವ್ ಮತ್ತು ಪರೇಲ್ ಪ್ರದೇಶಗಳಲ್ಲಿ ಮಳೆನೀರು ತುಂಬಿ ಹರಿಯಿತು. ಮುಂಜಾನೆ ವೇಳೆಗೆ ಮಳೆ ವಿಶ್ರಾಂತಿ ಪಡೆದರೂ ಬೆಳಿಗ್ಗೆ 8 ಗಂಟೆಯ ಬಳಿಕ ಮುಂಬಯಿಯ ಹಲವು ಭಾಗಗಳಲ್ಲಿ ಬಿರುಸಿನ ಮಳೆಯಾಗಿ ರಸ್ತೆಗಳಲ್ಲಿ ನೀರು ತುಂಬಿ ಹರಿದ ಪರಿಣಾಮವಾಗಿ ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ಗುರುವಾರ ಬೆಳಗ್ಗಿನ 8 ಗಂಟೆಯಿಂದ ಶುಕ್ರವಾರ ಬೆಳಗ್ಗಿನ 8 ಗಂಟೆ ತನಕದ 24 ಗಂಟೆ ಅವಧಿಯಲ್ಲಿ ಮುಂಬಯಿ ನಗರದಲ್ಲಿ 100 ಮಿಲಿ ಮೀಟರಿಗೂ ಹೆಚ್ಚಿನ ಪ್ರಮಾಣದ ಮಳೆಯಾಗಿದೆ ಎಂದು ಬಿಎಂಸಿ ಹೇಳಿದೆ. ಮುಂಬಯಿ ದ್ವೀಪನಗರದಲ್ಲಿ 24 ಗಂಟೆಗಳಲ್ಲಿ ಸರಾಸರಿ 126 ಮಿಲಿಮೀಟರ್ ಮಳೆಯಾದರೆ ಪೂರ್ವ ಉಪನಗರಗಳಲ್ಲಿ ಸರಾಸರಿ 110 ಮಿಲಿಮೀಟರ್ ಮತ್ತು ಪಶ್ಚಿಮ ಉಪನಗರಗಳಲ್ಲಿ ಸರಾಸರಿ 114 ಮಿಲಿಮೀಟರ್ ಮಳೆಯಾಗಿದೆ ಎಂದು ಬಿಎಂಸಿ ಪ್ರಕಟಣೆ ತಿಳಿಸಿದೆ.

5ನೇ ಪುಟಕ್ಕೆ

ರಾಮ ಮಂದಿರ ದೇಣಿಗೆ ಲೂಟಿ; ನಾಳೆಯಿಂದ 'ರಾಮ್ ರಕ್ಷಾ' ಆಂದೋಲನ ; ಉದ್ಧವ್ ಠಾಕ್ರೆ ಘೋಷಣೆ

ಠಾಕ್ರೆ ಒಸಾಮಾ ಬಿನ್ ಲ್ಯಾಡೆನ್ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ - ನಿತೇಶ್ ರಾಣೆ ವಾಗ್ದಾಳಿ

ಮುಂಬಯಿ, ಜು. 3 - ಅಯೋಧ್ಯೆ ರಾಮ ಮಂದಿರದಲ್ಲಿ ದೇಣಿಗೆ ದುರುಪಯೋಗದ ಆರೋಪಕ್ಕೆ ಸಂಬಂಧಿಸಿ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು,ಜು.5 ರಿಂದ ರಾಜ್ಯಾದ್ಯಂತ 'ರಾಮ್ ರಕ್ಷಾ' ಆಂದೋಲನ ಆರಂಭಿಸುವ ನಿರ್ಧಾರವನ್ನು ಘೋಷಿಸಿದ್ದು,ಅವರ ಈ ಕ್ರಮವನ್ನು ಬಿಜೆಪಿ ಕಟುವಾಗಿ ಟೀಕಿಸಿದೆಯಲ್ಲದೆ,ಠಾಕ್ರೆ 'ಪಾಕಿಸ್ತಾನಿ ಏಜೆಂಟ್‌ನಂತೆ ಮಾತನಾಡುತ್ತಿದ್ದಾರೆ' ಎಂದು ಸಚಿವ ನಿತೇಶ್ ರಾಣೆ ಲೇವಡಿ ಮಾಡಿದ್ದಾರೆ.

ಮಧ್ಯ ಮುಂಬಯಿಯ ದಾದರ್‌ನಲ್ಲಿರುವ ಹನುಮಾನ್ ಮಂದಿರದಲ್ಲಿ ರವಿವಾರ ತಮ್ಮ ಪಕ್ಷವು ಪ್ರತಿಭಟನೆಯನ್ನು ಆರಂಭಿಸಲಿದೆ ಎಂದು ಘೋಷಿಸಿದ ಠಾಕ್ರೆ ಅವರು, ಅಲ್ಲಿ ಪ್ರತಿಭಟನಾಕಾರರು ರಾಮಮಂದಿರದ ದೇಣಿಗೆ ಕಳ್ಳತನದ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಬಿಜೆಪಿ ಮೇಲೆ ಒತ್ತಡ ಹೇರಲು ಹನುಮಾನ್ ಸ್ತೋತ್ರ ಮತ್ತು ಹನುಮಾನ್ ಚಾಲೀಸಾವನ್ನು ಪಠಿಸುವುದಾಗಿ ತಿಳಿಸಿದರು.

'ರಾಮ ಮಂದಿರದಲ್ಲಿ ನಡೆದ ಈ ದೊಡ್ಡ ಪ್ರಮಾಣದ ಕಳ್ಳತನದಿಂದ ಆಕ್ರೋಶಗೊಂಡಿರುವ ಎಲ್ಲರೂ ನಮ್ಮೊಂದಿಗೆ ಸೇರಿ ಬಿಜೆಪಿಯನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿ



ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು. ಇದೇ ವೇಳೆ ಶಿವಸೇನಾ (ಯುಬಿಟಿ) ಮುಖ್ಯಸ್ಥರನ್ನು ತೀವ್ರವಾಗಿ ಟೀಕಿಸಿದ ಬಿಜೆಪಿ ಸಚಿವ ನಿತೇಶ್ ರಾಣೆ,ಉದ್ಧವ್ ಠಾಕ್ರೆ ಒಸಾಮಾ ಬಿನ್ ಲ್ಯಾಡೆನ್ (ಅಲ್ ಖೈದಾ ನಾಯಕ)ನ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. 5ನೇ ಪುಟಕ್ಕೆ

ಗುಜರಾತ್ : 8 ಜೈಶ್-ಇ-ಮೊಹಮ್ಮದ್ ಉಗ್ರರ ಬಂಧನ


ಅಹ್ಮದಾಬಾದ್, ಜು. 3- ಗುಜರಾತ್ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಗುಜರಾತಿನ ವಿವಿಧೆಡೆ ಉಗ್ರಗಾಮಿ ಚಟುವಟಿಕೆ ಆರಂಭಿಸಿದ್ದ ಪಾಕಿಸ್ತಾನ ಮೂಲದ ಉಗ್ರಗಾಮಿ ಸಂಘಟನೆ ಜೈಶ್-ಇ-ಮೊಹಮ್ಮದ್ (ಜೆಇಎಮ್)ಗೆ ಸೇರಿದ 8 ಭಯೋತ್ಪಾದಕರನ್ನು ಬಂಧಿಸಿದ್ದು, ಬಂಧಿತರಲ್ಲಿ ಇಬ್ಬರು 18 ಮತ್ತು 19 ವರ್ಷದ ಹದಿಹರೆಯದವರು ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಗುಜರಾತಿನ ವಿವಿಧ ಜಿಲ್ಲೆಗಳು ಮತ್ತು ನೆರೆಯ ಮಧ್ಯಪ್ರದೇಶದಿಂದ ಎಟಿಎಸ್ ಈ ಉಗ್ರರನ್ನು ಬಂಧಿಸಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಗುಜರಾತ್‌ನಲ್ಲಿ ಸಕ್ರಿಯ ಭಯೋತ್ಪಾದಕ ಜಾಲವನ್ನು ಸ್ಥಾಪಿಸಲು ಆರೋಪಿಗಳು ಕಾರ್ಯನಿರತರಾಗಿದ್ದು 7 ಜನರನ್ನು ಗುಜರಾತಿನಲ್ಲಿ ಬಂಧಿಸಲಾದರೆ ಒಬ್ಬನನ್ನು ಮಧ್ಯ ಪ್ರವೇಶದಿಂದ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗುಜರಾತಿನ ವಿವಿಧ ಜಿಲ್ಲೆಗಳು ಮತ್ತು ಮಧ್ಯ ಪ್ರವೇಶದಿಂದ 8 ಆರೋಪಿಗಳನ್ನು ಬಂಧಿಸಲಾಗಿದೆ. ನಿಷೇಧಿತ ಜೈಶ್-ಇ-ಮೊಹಮ್ಮದ್ ಭಯೋತ್ಪಾದಕ ಸಂಘಟನೆಗೆ ಸೇರಿದ ಈ ಉಗ್ರರು ಗುಜರಾತ್‌ನಲ್ಲಿ ಭಯೋತ್ಪಾದಕ ನೆಲೆ ಸ್ಥಾಪಿಸಲು ಯೋಜಿಸಿದ್ದರು ಎಂದು ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರನ್ನು ಪಠಾಣ್ ಜಿಲ್ಲೆಯ ನಿವಾಸಿಗಳಾದ ಝಕಾರಿಯಾ ದುರಾನಿ ಮೊಹಮ್ಮದ್ ಅಮ್ಮರ್ ಫಾಫ (21), ಮುಫ್ತಿ ಫೌಜನ್ ಇಸ್ಮಾಯಿಲ್ ದೌವಾ (40) ಮತ್ತು ಮೊಹಮ್ಮದ್ ಅಮಿನ್ ಶೇರಾ (21), ಬನಾಸ್ಕಾಂತ ಜಿಲ್ಲೆಯ ನಿವಾಸಿಗಳಾದ ಅಹಮ್ಮದ್ ಅಬ್ದುಲ್ಲಾ ಗಾಜಿವಾಲ (19), ಮುದಸ್ಸಿರ್ ಅಬ್ದುಲ್ಲಾ ಘಾಜಿವಾಲ (22) ಮತ್ತು ಇಬ್ರಾಹಿಂ ಮೊಹಮ್ಮದ್ ಹುಸೇನ್ ಫಫಾ (30), ನವಸಾರಿ ಜಿಲ್ಲೆಯ ನಿವಾಸಿ ಮೊಹಮ್ಮದ್ ಅಬ್ದುಲ್ ರಹಮಾನ್ ಸಾವ್ನಿ (22)




ಮತ್ತು ಮಧ್ಯಪ್ರದೇಶದ ನಿವಾಸಿ ಬಿಲಾಲ್ ದುರಾನಿ ಮೊಹಮ್ಮದ್ ಅಮ್ಮರ್ ಫಾಫ (18) ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರ ವಿರುದ್ಧ ಕಾನೂನು ಬಾಹಿರ ಚಟುವಟಿಕೆ ಪಡೆ ಕಾಯ್ದೆಯ ಸೆಕ್ಷನ್‌ಗಳಾದ 13 (ಕಾನೂನು ಬಾಹಿರ ಚಟಿವಟಿಕೆ), 17 (ಉಗ್ರಗಾಮಿ ಕೃತ್ಯಕ್ಕೆ ನಿಧಿ ಸಂಗ್ರಹ), 18 (ಸಂಚು) 38 (ಉಗ್ರಗಾಮಿ ಸಂಘಟನೆಯ ಸದಸ್ಯತ್ವ) ಮತ್ತು 39 (ಭಯೋತ್ಪಾದಕ ಸಂಘಟನೆಗೆ ಬೆಂಬಲ) ಹಾಗೂ ಭಾರತೀಯ ನ್ಯಾಯ ಸಂಹಿತೆ 148 (ದುಷ್ಕೃತ್ಯ ಸಂಚು) 61 (ಕ್ರಿಮಿನಲ್ ಸಂಚು) ಮತ್ತು 147 (ಭಾರತ ಸರಕಾರದ ವಿರುದ್ಧ ಘೋಷಣೆ) ಅನ್ವಯ ಪ್ರಕರಣಗಳನ್ನು ದಾಖಲಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ರಾಮಮಂದಿರ ದೇಣಿಗೆ ಕಳ್ಳತನ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಲಿ : ಆರೆಸ್ಸೆಸ್ ಪ್ರ. ಕಾರ್ಯದರ್ಶಿ ಹೊಸಬಾಳೆ

ಹೊಸದಿಲ್ಲಿ, ಜು. 3- ಅಯೋಧ್ಯೆಯ ರಾಮ ಮಂದಿರದ ದೇಣಿಗೆಗಳ ಕಳ್ಳತನ ಇಡೀ ಸಮಾಜದ ನಂಬಿಕೆಗಳು ಮತ್ತು ಭಾವನೆಗಳ ಮೇಲೆ ''ಆಳವಾದ ನೋವು'' ಉಂಟು ಮಾಡಿದೆ ಎಂದು ಶುಕ್ರವಾರ ಹೇಳಿರುವ ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ, ತನಿಖೆಯಲ್ಲಿ ಅಪರಾಧಿಗಳು ಎಂದು ಪತ್ತೆಯಾದ ಎಲ್ಲರಿಗೂ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು ಎಂದು ಕರೆಯಿತ್ತಿದ್ದಾರೆ.



''ಈ ದುರದೃಷ್ಟಕರ ಘಟನೆಯನ್ನು'' ಹಿಂದೂ ಧರ್ಮಕ್ಕೆ ಅಪಚಾರ ಎಸಗಲು ''ಹಿಂದು ವಿರೋಧಿ ಮತ್ತು ರಾಷ್ಟ್ರೀಯ ವಿರೋಧಿ ಶಕ್ತಿಗಳು'' ಬಳಸಿಕೊಳ್ಳಲಿವೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇಂತಹ ''ಸಂಚುಗಳನ್ನು'' ನಿಗ್ರಹಿಸಲು ''ಈ ಕಠಿಣ ಕ್ಷಣದಲ್ಲಿ'' ಸಂಪೂರ್ಣ ಹಿಂದೂ ಸಮಾಜ ತಾಳ್ಮೆ ಮತ್ತು ಸಂಯಮದಿಂದ ವರ್ತಿಸುವ ಅಗತ್ಯವಿದೆ ಎಂದು ಹೊಸಬಾಳೆ ವಿನಂತಿಸಿಕೊಂಡಿದ್ದಾರೆ.

ಅಯೋಧ್ಯೆಯ ಶ್ರೀರಾಮ ಲಲ್ಲಾ ದೇವಸ್ಥಾನದಲ್ಲಿನ ದೇಣಿಗೆ ಪೆಟ್ಟಿಗೆಗಳಿಂದ ನಡೆದಿರುವ ದುರದೃಷ್ಟಕರ ಕಳ್ಳತನ ಘಟನೆಯು ಇಡೀ ಸಮಾಜ ಮತ್ತು ರಾಮಭಕ್ತರ ಭಾವನೆಗಳು ಮತ್ತು ನಂಬಿಕೆಗೆ ಆಳವಾದ ಆಘಾತ ಉಂಟು ಮಾಡಿದೆ ಎಂದು ಆರೆಸ್ಸೆಸಿನ ಎರಡನೇ ನಾಯಕ ಎಕ್ಸ್‌ನಲ್ಲಿ ಹೇಳಿದ್ದಾರೆ.

ಈ ಘಟನೆಯಿಂದ ನಾವು ಅತ್ಯಂತ ನೋವಿಗೆ ಒಳಗಾಗಿದ್ದೇವೆ ಮತ್ತು ಆಕ್ರೋಶಿತರಾಗಿದ್ದೇವೆ ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಸಹಿತ ಸಂಪೂರ್ಣ ಹಿಂದೂ ಸಮಾಜವು ಈ ''ಅತ್ಯಂತ ಖಂಡನೀಯ'' ಘಟನೆಯನ್ನು ಒಂದು ಅಸಾಮಾನ್ಯ ವಿಷಯ ಒಂದು ಪರಿಗಣಿಸಿ ದೇವಸ್ಥಾವದ ಆಡಳಿತ ಮತ್ತು ನಿರ್ವಹಣೆಯ ಲೋಪವನ್ನು ಸರಿಪಡಿಸಲು ಪರಿಣಾಮಕಾರಿ ಕ್ರಮಗಳನ್ನು ಟ್ರಸ್ಟ್ ಮುಂದಾಗುವುದಾಗಿ ನಿರೀಕ್ಷಿಸುತ್ತಿರುವುದಾಗಿ ಹೊಸಬಾಳೆ ಹೇಳಿದ್ದಾರೆ.

ಅಯೋಧ್ಯೆ ಮಂದಿರದ ಕೋಟ್ಯಾಂತರ ಭಕ್ತರ ನಂಬಿಕೆ ಮತ್ತು ವಿಶ್ವಾಸವನ್ನು ಕಾಯ್ದುಕೊಳ್ಳುವುದು ಅತ್ಯಂತ ಅಗತ್ಯವಾಗಿದ್ದು ಭಕ್ತರ ನಂಬಿಕೆ ಮತ್ತು ವಿಶ್ವಾಸವು ಯಾವುದೇ ರೀತಿಯಲ್ಲೂ ಅಲ್ಲಾಡಬಾರದು ಎಂದು ಆರೆಸ್ಸೆಸ್ ಸಹ ಕಾರ್ಯವಾಹ ಅಭಿಪ್ರಾಯಪಟ್ಟಿದ್ದಾರೆ.

ಉತ್ತರಪ್ರದೇಶ ಸರಕಾರವು ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ)ದ ಶಿಫಾರಸಿನ ನೆಲೆಯಲ್ಲಿ ಶ್ರೀರಾಮ ತೀರ್ಥ ಕ್ಷೇತ್ರ ಟ್ರಸ್ಟ್ ಆದಷ್ಟು ಬೇಗ ಕಾನೂನು ಆಧಾರಿತ ಪ್ರಕ್ರಿಯೆಗೆ ಮುಂದಾಗಬೇಕು ಎಂದು ವಿನಂತಿಸಿಕೊಳ್ಳುವುದಾಗಿ ಅವರು ಹೇಳಿದ್ದಾರೆ.

5ನೇ ಪುಟಕ್ಕೆ

ಮೋದಿ - ಶಾಹ ಆಡಳಿತದಿಂದ ಚುನಾವಣಾ ಪ್ರಜಾಪ್ರಭುತ್ವಕ್ಕೆ ಗಂಭೀರ ಅಪಾಯ ಎದುರಾಗಿದೆ : ಕಾಂಗ್ರೆಸ್ ಆರೋಪ

ಹೊಸದಿಲ್ಲಿ, ಜು.3 - ಚುನಾವಣಾ ಪ್ರಕ್ರಿಯೆಯ ಸಮಗ್ರತೆ ಹಾಗೂ ಹೊಣೆಗಾರಿಕೆಯನ್ನು ಪುನಃಸ್ಥಾಪಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಕೆಲವು ದಿನಗಳ ಹಿಂದೆ ಸುಪ್ರೀಂಕೋರ್ಟ್‌ನ್ನು ಒತ್ತಾಯಿಸಿದ್ದ ವಿರೋಧಪಕ್ಷಗಳು, ಪ್ರಸ್ತುತ ಸರಕಾರದಿಂದ ಪ್ರಜಾಪ್ರಭುತ್ವವು 'ಗಂಭೀರ ಬೆದರಿಕೆಗಳನ್ನು'ಎದುರಿಸುತ್ತಿದೆ ಎಂದು ಆರೋಪಿಸಿದೆ.

ಭಾರತದ ಮುಖ್ಯ ನ್ಯಾಯಮೂರ್ತಿಗೆ ಈ ಸಂಬಂಧ ಪತ್ರವೊಂದನ್ನು ಬರೆದಿರುವ ಹಲವಾರು ವಿರೋಧ ಪಕ್ಷಗಳ ನಾಯಕರು, 'ಸಾಂಸ್ಥಿಕ ಕಾರ್ಯವಿಧಾನ ವಿಫಲವಾದಾಗ ಪ್ರಜಾಪ್ರಭುತ್ವಗಳು ಅರಾಜಕತೆಗೆ ತಿರುಗುತ್ತವೆ ಮತ್ತು ನ್ಯಾಯಾಂಗ ವಿಫಲವಾದಾಗ, ಅದು ಗಣರಾಜ್ಯದ ಸಂಪೂರ್ಣ ಕುಸಿತವನ್ನು ಸೂಚಿಸುತ್ತದೆ' ಎಂದು ತಿಳಿಸಿದ್ದಾರೆ.

ಮುಂದಿನ ವಿಧಾನಸಭಾ ಚುನಾವಣೆಗೆ ಕನಿಷ್ಠ ಐದು ವರ್ಷಗಳಿರುವ ಸಮಯದಲ್ಲಿ ಸಂಪೂರ್ಣ ಎಸ್‌ಐಆರ್(ವಿಶೇಷ ತೀವ್ರ ಪರಿಷ್ಕರಣೆ) ಪ್ರಕ್ರಿಯೆ



ಯನ್ನು ಸ್ಥಗಿತಗೊಳಿಸಿ ಆರಂಭಿಸಬೇಕೆಂದು ವಿರೋಧ ಪಕ್ಷಗಳು ಒತ್ತಾಯಿಸಿ, ಕೇಂದ್ರ ಸಂಸ್ಥೆಗಳ ದುರುಪಯೋಗದ ಆರೋಪವನ್ನು ಎತ್ತಿರುವ ಈ ನಾಯಕರು, ಸೂಕ್ತವಾದಲ್ಲಿ ಮತಪತ್ರಗಳನ್ನು ಮರುಸ್ಥಾಪಿಸುವ ಬಗ್ಗೆ ಗಂಭೀರ ಪರಿಗಣನೆಗಾಗಿ ಕೋರಿದ್ದಾರೆ.

ವಿರೋಧ ಪಕ್ಷಗಳು ಸಿಜೆಐಗೆ ಬರೆದ ಪತ್ರವನ್ನು ಎಕ್ಸ್ ಕುರಿತ ಪೋಸ್ಟ್‌ನಲ್ಲಿ ಹಂಚಿಕೊಂಡ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ ಸಿ ವೇಣುಗೋಪಾಲ್ ಅವರು,ಅನ್ಯಾಯ ನಡೆಯದಂತೆ ಮತ್ತು ಚುನಾವಣೆಗಳ ಮುಕ್ತ ಹಾಗೂ ನ್ಯಾಯಯುತ ಸ್ವರೂಪವನ್ನು ರಕ್ಷಿಸುವ ಜವಾಬ್ದಾರಿಯನ್ನು ಸುಪ್ರೀಂಕೋರ್ಟ್‌ಗೆ ವಹಿಸಲಾಗಿದೆ ಎಂದು ಹೇಳಿದರು.

'ನಮ್ಮ ದೇಶದಲ್ಲಿ ಚುನಾವಣಾ ಪ್ರಜಾಪ್ರಭುತ್ವವು ಮೋದಿ-ಶಾಹ ಆಡಳಿತದಿಂದ ಅತ್ಯಂತ ಗಂಭೀರ ಬೆದರಿಕೆಗಳನ್ನು ಎದುರಿಸುತ್ತಿದೆ' ಎಂದು ಅವರು ತಮ್ಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಜೂ.28ರಂದು 24 ವಿರೋಧ ಪಕ್ಷಗಳು ಸ್ವತಂತ್ರ ಸಂಸದರೊಂದಿಗೆ ದೋಷಪೂರಿತ ಎಸ್‌ಐಆರ್ ಪ್ರಕ್ರಿಯೆ, ಭಾರತೀಯ ಚುನಾವಣಾ ಆಯೋಗದ ಪಕ್ಷಪಾತದ ಪಾತ್ರ ಮತ್ತು ಇತರ ಚುನಾವಣಾ ಸಂಬಂಧಿತ ವಿಷಯಗಳ ಕುರಿತು ಸಿಜೆಐಗೆ ಪತ್ರ ಬರೆದಿವೆ ಎಂದು ವೇಣುಗೋಪಾಲ್ ಹೇಳಿದರು.

'ನಮ್ಮ ಪ್ರಜಾಪ್ರಭುತ್ವವನ್ನು ಕಾರ್ಯಾಂಗದ ಮಿತಿಮೀರಿದ ಕ್ರಮಗಳಿಂದ ರಕ್ಷಿಸುವುದು ನಮ್ಮ ನ್ಯಾಯಾಂಗದ ಪಾತ್ರವಾಗಿದೆ - 5ನೇ ಪುಟಕ್ಕೆ

ಮುಂಬಯಿ ಮ್ಯಾನ್‌ಹೋಲ್ ಸಾವು: ಬಿಎಂಸಿ ಅಧಿಕಾರಿ ದೂರಿನ ಮೇಲೆ ಎಫ್‌ಐಆರ್ ದಾಖಲು

ಮುಂಬಯಿ, ಜು.3 - ಉಪನಗರ ಸಾಕಿನಾಕಾ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ಮ್ಯಾನ್‌ಹೋಲ್‌ಗೆ ಬಿದ್ದು ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಮತ್ತು ಹಲವಾರು ಕಾರ್ಮಿಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮಹಾನಗರದಲ್ಲಿ ಭಾರೀ ಮಳೆಯ ನಡುವೆ ಗುರುವಾರ ಬೆಳಿಗ್ಗೆ ಸಾಕಿನಾಕಾ ನಿವಾಸಿ ಅಸ್ಲಾಂ ಇಸಾಕ್ ಶೇಖ್ (55) ಖೈರಾನಿ ರೋಡ್‌ನಲ್ಲಿರುವ ತೆರೆದ ಮ್ಯಾನ್‌ಹೋಲ್‌ಗೆ ಬಿದ್ದು ಮೃತಪಟ್ಟರು. ನೀರಿನ ಬಲವಾದ ಹರಿವಿನಿಂದಾಗಿ ಆತ ಭೂಗತ ಒಳಚರಂಡಿಗೆ ಬಿದ್ದರು. ಅಗ್ನಿಶಾಮಕ ದಳ ಸೇರಿದಂತೆ ಪೊಲೀಸರು ಮತ್ತು ಪಾಲಿಕೆ ಸಂಸ್ಥೆಗಳು ವ್ಯಾಪಕ ಶೋಧ ನಡೆಸಿದ ಬಳಿಕ ಶೇಖ್‌ನ ಶವವನ್ನು ಸ್ವಲ್ಪ ದೂರದಲ್ಲಿರುವ ಮತ್ತೊಂದು ಮ್ಯಾನ್‌ಹೋಲ್‌ನಿಂದ ಹೊರತೆಗೆಯಲಾಯಿತು.

ಅಧಿಕಾರಿಗಳ ಪ್ರಕಾರ,ಒಳಚರಂಡಿ ದುರಸ್ತಿ ಕಾರ್ಯಕ್ಕಾಗಿ ತೆರೆಯಲಾದ ಮ್ಯಾನ್‌ಹೋಲ್ ಸಂಗ್ರಹವಾದ ನೀರಿನಿಂದ ಮರೆಮಾಡಲ್ಪಟ್ಟಿದೆ. ನಿರ್ವಹಣಾ ಕಾರ್ಯ ನಡೆಯುತ್ತಿದ್ದರೂ ತೆರೆದ ಮ್ಯಾನ್‌ಹೋಲ್ ಸುತ್ತಲೂ ಯಾವುದೇ ಬ್ಯಾರಿಕೇಡ್‌ಗಳು ಅಥವಾ ಎಚ್ಚರಿಕೆ ಫಲಕಗಳನ್ನು ಹಾಕಲಾಗಿಲ್ಲ ಎಂದು ಶೇಖ್ ಅವರ ಸಂಬಂಧಿಕರು ಮತ್ತು ಇತರರು ನಿರ್ಲಕ್ಷ್ಯದ ಆರೋಪ ಹೊರಿಸಿದ್ದರು.

ಬೃಹನ್‌ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್‌ನ ಎಲ್ ವಾರ್ಡ್‌ನ ಸಿಬ್ಬಂದಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ, ಒಳಚರಂಡಿ ದುರಸ್ತಿ ಕೆಲಸಕ್ಕೆ ಸಂಬಂಧಿಸಿದ ಗುತ್ತಿಗೆದಾರ ಮತ್ತು ಹಲವಾರು ಕಾರ್ಮಿಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಸಾಕಿನಾಕಾ ಪೊಲೀಸ್ ಠಾಣೆ ಅಧಿಕಾರಿ ತಿಳಿಸಿದ್ದಾರೆ.

ಶಾಲೆಗಳಿಂದ 500 ಮೀಟರ್ ಒಳಗೆ 'ಸ್ಟಿಂಗ್' ಎನರ್ಜಿ ಡ್ರಿಂಕ್ ಮಾರಾಟ ನಿಷೇಧ : ಸಚಿವ ಜಿರ್ವಾಲ್

ಮುಂಬಯಿ, ಜು. 3 - ಮಕ್ಕಳಿಗೆ ಸೂಕ್ತವಲ್ಲ ಎಂದು ಪರಿಗಣಿಸಲಾದ ಪಾನೀಯದಲ್ಲಿನ ಕೆಲವು ಪದಾರ್ಥಗಳ ಬಗ್ಗೆ ಕಳವಳಗಳು ವ್ಯಕ್ತವಾಗಿರುವ ನಂತರ, ಶಾಲೆಗಳ 500 ಮೀಟರ್ ವ್ಯಾಪ್ತಿಯಲ್ಲಿ 'ಸ್ಟಿಂಗ್' ಎನರ್ಜಿ ಡ್ರಿಂಕ್ ಮತ್ತು ಇತರ ಮಾದಕ ವಸ್ತುಗಳ ಮಾರಾಟವನ್ನು ನಿಷೇಧಿಸಲಾಗುವುದು ಎಂದು ಮಹಾರಾಷ್ಟ್ರ ಸರ್ಕಾರ ಶುಕ್ರವಾರ ಘೋಷಿಸಿದೆ.



ಶಾಲಾ ಮಕ್ಕಳ ಮೇಲೆ ಎನರ್ಜಿ ಡ್ರಿಂಕ್‌ಗಳ ಪರಿಣಾಮದ ಬಗ್ಗೆ ಕಳವಳಗಳ ನಡುವೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆಯೇ ಎಂದು ಬಿಜೆಪಿ ಶಾಸಕ ವಿಕ್ರಮ್ ಪಾಚ್ಪುತೆ ಅವರು ವಿಧಾನಸಭೆಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಆಹಾರ ಮತ್ತು ಔಷಧ ಆಡಳಿತ ಸಚಿವ ನರಹರಿ ಜಿರ್ವಾಲ್, ಎಫ್‌ಡಿಎ ನಿರ್ಬಂಧವನ್ನು ಜಾರಿಗೊಳಿಸಲು ನಿರ್ದೇಶಿಸಲಾಗಿದೆ ಎಂದು ಸಚಿವರು ಹೇಳಿದರು. ಎನರ್ಜಿ ಡ್ರಿಂಕ್‌ಗಳ ಸೇವನೆಯಿಂದ ಉಂಟಾಗುವ ಆರೋಗ್ಯದ ಅಪಾಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಂತೆ ಶಾಲೆಗಳನ್ನು ಕೇಳಲಾಗಿದೆ ಎಂದು ಅವರು ಹೇಳಿದರು. ಆರೋಗ್ಯ ತಜ್ಞರ ಪ್ರಕಾರ, ಎನರ್ಜಿ ಡ್ರಿಂಕ್‌ಗಳಲ್ಲಿ ಹೆಚ್ಚಾಗಿ ಕೆಫೀನ್ ಮತ್ತು ಸಕ್ಕರೆ ಅಧಿಕವಾಗಿರುತ್ತದೆ.

''ಶಾಲಾ ಆವರಣದಲ್ಲಿ ಮತ್ತು ಸುತ್ತಮುತ್ತ 'ಸ್ಟಿಂಗ್' ಎನರ್ಜಿ ಡ್ರಿಂಕ್ ಮಾರಾಟದ ಕುರಿತು ಗೌರವಾನ್ವಿತ ಸದಸ್ಯರು ಎತ್ತಿರುವ ಕಳವಳಗಳು ಸ್ವಲ್ಪ ಮಟ್ಟಿಗೆ ಮಾನ್ಯವಾಗಿವೆ. ಅಂತಹ ಎನರ್ಜಿ ಡ್ರಿಂಕ್‌ಗಳು ಅಥವಾ ಯಾವುದೇ ಇತರ ಮಾದಕ ವಸ್ತುಗಳ ಮಾರಾಟವು ಶಾಲಾ ಆವರಣದಿಂದ 500 ಮೀಟರ್‌ಗಳ ಒಳಗೆ ಕಂಡುಬಂದರೆ, ಅದಕ್ಕೆ ಕಾರಣರಾದವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲಾಗುವುದು'' ಎಂದು ಜಿರ್ವಾಲ್ ಹೇಳಿದರು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಎನರ್ಜಿ ಡ್ರಿಂಕ್ ಮಾರಾಟ ಮಾಡುವುದನ್ನು ನಿಷೇಧಿಸುವ ನಿಯಮವನ್ನು ಸರ್ಕಾರ ಪರಿಚಯಿಸುತ್ತದೆಯೇ ಎಂದು ಪಾಚ್ಪುತೆ ಪ್ರಶ್ನಿದರು. ಚರ್ಚೆಯ ಸಮಯದಲ್ಲಿ ಶಾಸಕರಾದ ರಾಹುಲ್ ಕುಲ್ ಮತ್ತು ವರುಣ್ ಸರ್ದೇಸಾಯಿ ಅವರು, ಮಕ್ಕಳಿಗೆ ಅಂತಹ ಪಾನೀಯಗಳು ಸುಲಭವಾಗಿ ಲಭ್ಯವಾಗದಂತೆ ತಡೆಯಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸಿದರು. ಪ್ರಸ್ತಾವಿತ ನಿರ್ಬಂಧದ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವಾಗ ಸರ್ಕಾರ ಶಾಲಾ ಮಟ್ಟದಲ್ಲಿ ಜಾಗೃತಿ ಅಭಿಯಾನಗಳನ್ನು ಬಲಪಡಿಸುತ್ತದೆ ಎಂದು ಜಿರ್ವಾಲ್ ಹೇಳಿದರು.

ಭಾರತ್ ಬ್ಯಾಂಕ್ ಮಲಾಡ್ ಪಶ್ಚಿಮ ಶಾಖೆ ಸ್ಥಳಾಂತರ

ಮುಂದಿನ ವರ್ಷದೊಳಗೆ 25,000 ಕೋಟಿ ರೂ. ವ್ಯವಹಾರದ ಗುರಿ - ಸೂರ್ಯಕಾಂತ್ ಜಯ ಸುವರ್ಣ











(ಚಿತ್ರ, ವರದಿ : ದಿನೇಶ್ ಕುಲಾಲ್)

ಮುಂಬಯಿ, ಜು. 3- ದೇಶದಪ್ರತಿಷ್ಠಿತಆರ್ಥಿಕಸಂಸ್ಥೆ ಬಿಲ್ಲವಸಮಾಜದಆಡಳಿತದಲ್ಲಿರುವ ಭಾರತ ಕೋ-ಆಪರೇಟಿವ್ ಬ್ಯಾಂಕ್‌ನ ಮಲಾಡ್ ಪಶ್ಚಿಮದ ಶಾಖೆಯು ಜುಲೈ 3ರ ಶುಕ್ರವಾರದಂದು ಮಲಾಡ್ ಪಶ್ಚಿಮದ ಎಸ್. ವಿ. ರೋಡ್‌ನ ರೇಷನ್ ಆಫೀಸಿನ ಬಳಿ ಇರುವ ಹೊಸ ಸಂಕಿರಣ 'ಸೆಲೆಸ್ಟಿಯಲ್ ಹೈಟ್ಸ್'ನ ತಳ ಮಹಡಿಗೆ ಸ್ಥಳಾಂತರಗೊಂಡು ಸತ್ಯನಾರಾಯಣ ಮಹಾಪೂಜೆಯೊಂದಿಗೆ ಶುಭಾರಂಭಗೊಂಡು ವ್ಯವಹಾರ ಪ್ರಾರಂಭಿಸಿದೆ.

ಬ್ಯಾಂಕಿನ ಕಾರ್ಯಾಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ ಶಾಖೆಯನ್ನು ರಿಬ್ಬನ್ ಕತ್ತರಿಸಿ ಉದ್ಘಾಟಿಸಿ ಬಳಿಕ ದೀಪ ಬೆಳಗಿಸಿ ಉದ್ಘಾಟಿಸಿದ ನಂತರ ಮಾತನಾಡುತ್ತಾ, ಜೂನ್ 30ರಂದು 20,000 ಸಾವಿರ ಕೋಟಿ ರೂಪಾಯಿಗಳ ವ್ಯವಹಾರವನ್ನು ದಾಟಿದ್ದೇವೆ. 20,000 ಸಾವಿರ ಕೋಟಿ ರೂಪಾಯಿಗಳ ಗಡಿ ದಾಟಿದ ನಂತರದ ಮೊದಲ ಶಾಖೆ ಇದಾಗಿದೆ. ಮುಂದಿನ ಮೈಲಿಗಲ್ಲು 25,000 ಸಾವಿರ ಕೋಟಿ ರೂಪಾಯಿಗಳು. ಆದ್ದರಿಂದ 2027ರ ವೇಳೆಗೆ ನಾವು ಇದಕ್ಕಿಂತ ಹೆಚ್ಚು ವ್ಯವಹಾರ ಸಾಧಿಸಲಿದ್ದೇವೆ. ಹೆಚ್ಚಾಗಿ ಈ ವರ್ಷದ ಅಂತ್ಯದೊಳಗೆ ಅಥವಾ ಮುಂದಿನ ವರ್ಷದೊಳಗೆ ನಾವು 25,000 ಕೋಟಿ ರೂಪಾಯಿಗಳನ್ನು ದಾಟಲಿದ್ದೇವೆ. ಆದ್ದರಿಂದ ಮಾರ್ಚ್ 2027ರ ಒಳಗೆ 25,000 ಕೋಟಿ ರೂಪಾಯಿಗಳ ಗುರಿಯನ್ನು ನೀಡುತ್ತಿದ್ದೇವೆ. ಭಾರತ್ ಬ್ಯಾಂಕ್ ಕುಟುಂಬದ ಎಲ್ಲಾ ಸದಸ್ಯರಿಗೂ ಅದನ್ನು ಸಾಧಿಸುವ ಸಾಮರ್ಥ್ಯ, ಯೋಗ್ಯತೆ ಮತ್ತು ಸಮರ್ಪಣಾ ಮನೋಭಾವವಿದೆ. 20,000 ಸಾವಿರ ಕೋಟಿ ರೂಪಾಯಿ ಎಂಬುದು ಒಂದು ಯೋಜನೆಯಾಗಿತ್ತು, ಅದನ್ನು ನಾವು ದಾಟಿದ್ದೇವೆ. ಮುಂದಿನ ಗುರಿಯಾಗಿ 2027ರೊಳಗೆ ರೂ. 25,000 ಕೋಟಿ ವ್ಯವಹಾರ ಸಾಧಿಸುವ ಸಂಕಲ್ಪವನ್ನು ವ್ಯಕ್ತಪಡಿಸಿದ ಅವರು, ಬ್ಯಾಂಕಿನ ಬೆಳವಣಿಗೆಯ ಪಯಣವನ್ನು ನೆನಪಿಸಿಕೊಂಡು, ರೂ. 1 ಕೋಟಿಯಿಂದ ರೂ. 100 ಕೋಟಿಗೆ ತಲುಪುವುದು ಕಷ್ಟವಾಗಿತ್ತು. ಆದರೆ ರೂ. 100 ಕೋಟಿ ದಾಟಿದ ಬಳಿಕ ರೂ. 1,000 ಕೋಟಿಗೆ ಸಾಗುವುದು ಸುಲಭವಾಯಿತು. ಈಗ ರೂ. 25,000 ಕೋಟಿ ಮೈಲುಗಲ್ಲು ಸಾಧಿಸುವತ್ತ ಹೆಜ್ಜೆ ಇಡೋಣ. ಪ್ರಯತ್ನ ನಮ್ಮದು ಆದ್ದರಿಂದ ಅದರ ಹಿಂದೆ ಸಾಗಲು ಕೆಲಸ ಮಾಡೋಣ. ನಾನು ಮಲಾಡ್ ಶಾಖೆಯ ವ್ಯವಸ್ಥಾಪಕ ಪ್ರಕಾಶ್ ಸಾಲ್ಯಾನ್ ಮತ್ತವರ ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಶುಭ ಹಾರೈಸಿದರು.

ಮಲಾಡ್ ಪಶ್ಚಿಮದ ಮಹಾವೀರ ಹಾರ್ಡ್‌ವೇರ್‌ನ ಮಾಲಕ ಶಾಂತಿಲಾಲ್ ಜೈನ್ ಶುಭ ಹಾರೈಕೆಯ ಮಾತುಗಳನ್ನಾಡುತ್ತಾ, ಭಾರತ್ ಬ್ಯಾಂಕ್‌ನ ಚೇರ್‌ಮ್ಯಾನ್, ಮ್ಯಾನೇಜರ್ ಮತ್ತು ಇಲ್ಲಿನ ಸಿಬ್ಬಂದಿ ಬ್ಯಾಂಕ್ ವ್ಯವಹಾರದ ಬಗ್ಗೆ ಬಹಳಷ್ಟು ಕಾಳಜಿಯನ್ನು ವಹಿಸಿ ಸೇವೆ ಮಾಡುತ್ತಿದ್ದಾರೆ. ಭಾರತ್ ಬ್ಯಾಂಕ್‌ನಲ್ಲಿ ನಾನು ಮೊದಲ ಲೋನ್ ಪಡೆಯುವುದಕ್ಕಾಗಿ ಹೋಗಿದ್ದೇ. ಸ್ಟುಡಿಯೋ ಮಾಡ್ತಾ ಇದ್ದೇವೆ, ನಮಗೆ ಸಹಾಯ ಮಾಡಿ ಅಂತ. ನಾನು ಮಾರ್ಚ್ 20ರಂದು ಹೋಗಿದ್ದೆ ಮತ್ತು ಮಾರ್ಚ್ 30ರಂದು ನನಗೆ ಸಾಲ ಮಂಜೂರು ಮಾಡಿಕೊಟ್ಟರು. ಸಂಪೂರ್ಣವಾಗಿ ವಿಶ್ವಾಸವಿಟ್ಟು ಕೊಟ್ಟ ಆ ಸಹಾಯದಿಂದ ನಾವು ತುಂಬಾ ಅಭಿವೃದ್ಧಿಗೊಂಡಿದ್ದೇವೆ. ನಾನು ಭಾರತ್ ಬ್ಯಾಂಕ್‌ಗೆ ತುಂಬಾ ಧನ್ಯವಾದಗಳನ್ನು ಅರ್ಪಿಸುತ್ತೇನೆ ಮತ್ತು ದೇವರಲ್ಲಿ ಪ್ರಾರ್ಥಿಸುತ್ತೇನೆಂದರೆ ಬ್ಯಾಂಕ್ ಭದ್ರತೆಯನ್ನು ಹೊಂದಿ ಇನ್ನಷ್ಟು ಪ್ರಗತಿಯನ್ನು ಸಾಗಲಿ ಎಂದು ಶುಭ ಹಾರೈಸಿದರು.

ಉದ್ಯಮಿ ಆನಂದ ಜತ್ತನ್ ಮಾತನಾಡಿ, ನಮ್ಮ ಮತ್ತು ಬ್ಯಾಂಕಿನ ನಡುವಿನ ಸಂಬಂಧವು 1984ರಿಂದಲೂ ಅತ್ಯಂತ ಗಾಢವಾಗಿದೆ. ಆರಂಭದಲ್ಲಿ ನಾವು ಕೇವಲ ಮೂವತ್ತು ಸಾವಿರ ರೂಪಾಯಿಗಳ ಸಣ್ಣ ಉಳಿತಾಯದೊಂದಿಗೆ ಈ ಪ್ರವಾಸವನ್ನು ಶುರು ಮಾಡಿದ್ದೇವು. ಇಂದು ಇಷ್ಟು ವರ್ಷಗಳ ನಂತರ ತಿರುಗಿ ನೋಡಿದಾಗ, ಬ್ಯಾಂಕ್ ನಮಗೆ ನೀಡಿದ ಬೆಂಬಲ ಮತ್ತು ಸಹಕಾರದಿಂದಾಗಿ ನಾವು ಸಾಕಷ್ಟು ಪ್ರಗತಿ ಹೊಂದಿದ್ದೇವೆ ಹಾಗೂ ಒಂದು ಉದ್ಯಮಿಯಾಗಿ ಬೆಳೆದು ನಿಂತಿದ್ದೇವೆ. ನಮ್ಮ ಈ ಯಶಸ್ಸಿನ ಹಾದಿಯಲ್ಲಿ ಬ್ಯಾಂಕ್ ನೀಡಿದ ನಿರಂತರ ಸಹಾಯ ಮತ್ತು ಮಾರ್ಗದರ್ಶನಕ್ಕೆ ನಾವು ಸದಾ ಕೃತಜ್ಞರಾಗಿದ್ದೇವೆ. ಬ್ಯಾಂಕಿನ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು ಎಂದು ನುಡಿದರು.

ಶಂಕರ್ ಮಲ್ಪೆ ಮೀಡಿಯಾದ ಮಾಲಕ ಧರ್ಮೇಶ್ ಸಿಂಗ್ ಬ್ಯಾಂಕಿನ ವ್ಯವಹಾರಗಳ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡುತ್ತಾ, ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ ಮಲಾಡ್ ಶಾಖೆಯು ಹೊಸ ಸೂಕ್ತ ಸ್ಥಳಕ್ಕೆ ಸ್ಥಳಾಂತರಗೊಂಡಿದೆ. ಕಳೆದ ಸುಮಾರು 25 ವರ್ಷಗಳಿಂದ ಶಂಕರ್ ಮಲ್ಪೆ ಮೀಡಿಯಾ ಸಂಸ್ಥೆಯು ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನೊಂದಿಗೆ ನಿರಂತರ ಸಂಪರ್ಕದಲ್ಲಿದೆ. ಮೊದಲಿಗೆ ಶಂಕರ್ ಮಲ್ಪೆ ಮೀಡಿಯಾ ಸಂಸ್ಥೆಗೆ ಈ ಬ್ಯಾಂಕಿನ ಪರಿಚಯವಾಗಿದ್ದು ಅಂದಿನ ಮ್ಯಾನೇಜರ್ ಮತ್ತು ಇಂದಿನ ಹಿರಿಯ ಅಧಿಕಾರಿಯಾದ ಜನಾರ್ದನ್ ಪೂಜಾರಿ ಮೂಲಕ. ಅಂದಿನಿಂದ ಇಂದಿನವರೆಗಿನ ಎಲ್ಲಾ ಪ್ರಬಂಧಕರು ಸಹಕಾರ ನೀಡಿದ್ದಾರೆ. ಈಗಿನ ಮಲಾಡ್ ಶಾಖೆಯ ಮ್ಯಾನೇಜರ್ ಪ್ರಕಾಶ್ ಸಾಲ್ಯಾನ್ ಇರಲಿ ಅಥವಾ ಕಾಂದಿವಲಿ ಪೂರ್ವ ಶಾಖೆಯ ಮ್ಯಾನೇಜರ್ ವೀರೇಂದ್ರ ಕುಂದರ್ ಆಗಲಿ ಬ್ಯಾಂಕಿನ ಎಲ್ಲಾ ಹಿರಿಯ ಅಧಿಕಾರಿಗಳೊಂದಿಗೆ ನಮ್ಮ ಶಂಕರ್ ಮಲ್ಪೆ ಮೀಡಿಯಾದ ಅವಿನಾಭಾವ ಸಂಬಂಧ ಬೆಳೆದುಬಂದಿದೆ. ಮುಂಬಯಿನಂತಹ ಮಹಾನಗರದಲ್ಲಿ ಸರಕಾರಿ ಮತ್ತು ಖಾಸಗಿ ವಲಯದ ಹಲವಾರು ಬ್ಯಾಂಕುಗಳಿದ್ದರೂ, ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನಂತಹ ಮತ್ತೊಂದು ಬ್ಯಾಂಕ್ ನಮ್ಮ ಶಂಕರ್ ಮಲ್ಪೆ ಮೀಡಿಯಾ ಸಂಸ್ಥೆಗೆ ಸಿಗಲು ಸಾಧ್ಯವಿಲ್ಲ. ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ ಬೆಂಬಲದಿಂದಾಗಿಯೇ ಇಂದು ನಮ್ಮ ಶಂಕರ್ ಮಲ್ಪೆ ಮೀಡಿಯಾ ಸಂಸ್ಥೆಯು 15 ಶಾಖೆಗಳನ್ನು ಹಾಗೂ 3 ವಸತಿ ಕೇಂದ್ರಗಳನ್ನು ಹೊಂದಲು ಸಾಧ್ಯವಾಗಿದೆ. ಮಲಾಡ್, ಗೋರೆಗಾಂವ್, ಅಂಧೇರಿ, ಸಾಂತಾಕ್ರೂಜ್, ಘಾಟ್ಕೋಪರ್, ಮುಲುಂಡ್ ಅಥವಾ ನಾಲಾಸೋಪಾರ ಹೀಗೆ ಯಾವುದೇ ಸ್ಥಳವಿರಲಿ, ಪ್ರತಿಯೊಂದು ಕಡೆ ನಮ್ಮ ಸಂಸ್ಥೆಯು ಆರಂಭವಾಗಲು ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ ಸಂಪೂರ್ಣ ಸಹಕಾರವಿದೆ. ಗೋರೆಗಾಂವ್‌ನಲ್ಲಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ ಪ್ರಧಾನ ಕಚೇರಿ ಇರುವಲ್ಲೇ, ಅನುಪಮ್ ಆಕಾರ್ಡ್ ಮತ್ತು ಅನುಪಮ್ ಕ್ಲಾಸಿಕ್‌ನಲ್ಲಿ ನಮ್ಮ 6 ಶಾಖೆಗಳಿವೆ. ಶಂಕರ್ ಮಲ್ಪೆ ಮೀಡಿಯಾ ಪರಿವಾರದವರಾದ ನಾವು ಈ ಬ್ಯಾಂಕಿನ ಉಪಕಾರವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಮುಂಬರುವ ದಿನಗಳಲ್ಲೂ ಭಾರತ್ ಕೋ-ಆಪರೇಟಿವ್ ಬ್ಯಾಂಕ್‌ನ ಸಹಕಾರ ಮತ್ತು ಮಾರ್ಗದರ್ಶನ ನಮಗೆ ಹೀಗೆಯೇ ಸಿಗುತ್ತದೆ ಎಂದು ನಾವು ನಂಬಿದ್ದೇವೆ. ಹೊಸ ಸ್ಥಳದಲ್ಲಿ ಬ್ಯಾಂಕಿನ ಭವಿಷ್ಯ ಮತ್ತಷ್ಟು ಉಜ್ವಲವಾಗಲಿ ಎಂದು ಹಾರೈಸುತ್ತೇವೆ.

ಮ್ಯುಚುವಲ್ ಫಂಡ್ ವಿತರಕ ಸತೀಶ್ ಪೂಜಾರಿ ಮಾತನಾಡಿ, ಬ್ಯಾಂಕ್‌ನ ಸಾಧನೆಯನ್ನು ಅಭಿನಂದಿಸಿ, 2046ರೊಳಗೆ ರೂ. 40,000 ಕೋಟಿ ವ್ಯವಹಾರ ಸಾಧಿಸಲಿ ಎಂದು ಶುಭ ಹಾರೈಸಿ, ಅತ್ಯಂತ ಕ್ರಿಯಾಶೀಲ ಕಾರ್ಯಾಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ ಮತ್ತು ಅವರ ತಂಡ ಅವಿರತವಾಗಿ ಶ್ರಮಿಸುತ್ತಿರುವ ಕಂಡಾಗ ಬ್ಯಾಂಕಿನ ಅಭಿವೃದ್ಧಿಗಾಗಿ ಯಾವುದೇ ರೀತಿಯ ಸಂಕಲ್ಪವನ್ನು ಮಾಡಿಕೊಂಡರೆ ಅದು ಫಲಪ್ರದವಾಗುತ್ತದೆ. ನಾನು ಪತ್ರಿಕೆಯಲ್ಲಿ ಓದಿದ ಮಾಹಿತಿಯ ಪ್ರಕಾರ ಕಳೆದ ಜೂನ್ 31ರ ವೇಳೆಗೆ ನಮ್ಮ ಸಂಸ್ಥೆಯು 20,000 ಕೋಟಿ ರೂಪಾಯಿಗಳಿಗಿಂತಲೂ ಅಧಿಕ ವ್ಯವಹಾರವನ್ನು ದಾಟಿದೆ. ಹೀಗೆಯೇ ಮುಂದುವರಿದು, 2046ರ ವಿಕಸಿತ ಭಾರತದ ಜೊತೆಗೆ ನಾವು 40,000 ಕೋಟಿ ರೂಪಾಯಿಗಳ ಬೃಹತ್ ವ್ಯವಹಾರವನ್ನು ತಲುಪಬೇಕಿದೆ. ಸೂರ್ಯಕಾಂತ್ ಸುವರ್ಣ ಮತ್ತವರ ಆಡಳಿತ ಮಂಡಳಿ ನೀವು ಈಗ ಈ ಗುರಿಯನ್ನು ಸಾಧಿಸಬೇಕಾಗಿದೆ. ನೀವು ನಿಮ್ಮ ಸಿಬ್ಬಂದಿಗೆ ವ್ಯವಹಾರವನ್ನು ಹೆಚ್ಚಿಸಲು, ಆರ್‌ಡಿ ಮತ್ತು ಎಫ್‌ಡಿಗಳನ್ನು ಮಾಡಲು ಹೇಗೆ ಗುರಿಗಳನ್ನು ನೀಡುತ್ತೀರೋ, ಅದೇ ರೀತಿ ಗ್ರಾಹಕರಾದ ನಾವು ನಿಮಗೆ 2046ರ ವೇಳೆಗೆ 40,000 ಕೋಟಿ ರೂಪಾಯಿಗಳ ವ್ಯವಹಾರದ ಗುರಿಯನ್ನು ನೀಡುತ್ತಿದ್ದೇವೆ. ನೀವು ಇದನ್ನು ಖಂಡಿತವಾಗಿಯೂ ಸಾಧಿಸಬೇಕಾಗಿದೆ ಎಂದು ಶಾಖೆಯ ಸಿಬ್ಬಂದಿ ವರ್ಗದವರಿಗೆ ಶುಭ ಹಾರೈಸಿದರು.

ಕಟ್ಟಡದ ಮಾಲಕ ದಿನೇಶ್ ತುಕ್ರಾಲ್ ಅವರು ಬ್ಯಾಂಕ್ ಸಿಬ್ಬಂದಿಯ ಸಹಕಾರವನ್ನು ಶ್ಲಾಘಿಸಿ, ಬ್ಯಾಂಕ್ ಇನ್ನಷ್ಟು ಬೆಳೆಯಲಿ, ನಾವು ಕಳೆದ 20 ವರ್ಷಗಳಿಂದ ಈ ಬ್ಯಾಂಕ್‌ನೊಂದಿಗೆ ವ್ಯವಹರಿಸುತ್ತಿದ್ದೇವೆ. ಇಲ್ಲಿನ ಸಿಬ್ಬಂದಿ ಮತ್ತು ಪ್ರತಿಯೊಬ್ಬರೂ ತುಂಬಾ ಸಹಕಾರ ನೀಡುತ್ತಾರೆ. ನಿಮ್ಮೊಂದಿಗೆ ವ್ಯವಹಾರ ಮಾಡುವುದು ನಮಗೆ ತುಂಬಾ ಸಂತೋಷ ತಂದಿದೆ. ನೀವು ನಿಮ್ಮ 40,000 ಕೋಟಿ ರೂಪಾಯಿಗಳ ಗುರಿಯನ್ನು ತಲುಪುತ್ತೀರಿ ಎಂದು ನಾವು ನಂಬುತ್ತೇವೆ ಮತ್ತು ನಿಮ್ಮೊಂದಿಗೆ ನಾವು ಕೂಡಾ ಬೆಳೆಯುತ್ತೇವೆ ಎಂದು ಆಶಿಸುತ್ತೇವೆ ಎಂದು ಅಭಿನಂದಿಸಿದರು.

ಬ್ಯಾಂಕಿನ ಲಾಕರ್ ಅನ್ನು ಉಪ ಕಾರ್ಯಾಧ್ಯಕ್ಷ ನ್ಯಾಯವಾದಿ ಸೋಮನಾಥ ಅಮೀನ್ ಲೋಕಾರ್ಪಣೆ ಮಾಡಿದರು. ಆಗಮಿಸಿದ ಎಲ್ಲರನ್ನು ಶಾಖೆಯ ಮುಖ್ಯ ಪ್ರಬಂಧಕ ಪ್ರಕಾಶ್ ವಿ. ಸಾಲ್ಯಾನ್ ಸ್ವಾಗತಿಸಿ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ಗ್ರಾಹಕರಾದ ವಿನೋದ್ ತುಕ್ರಾಲ್ (ಕಟ್ಟಡದ ಪಾಲುದಾರು), ಗಂಗಾಧರ ಸಾಹಿಲ್ (ಆಕರ್ ಇಂಡಸ್ಟ್ರೀಸ್), ಆಶಿಶ್ ದೇಸಾಯಿ ಉದ್ಯಮಿ, ರಾಜನ್ ಪೂಜಾರಿ (ಬಾಲಾಜಿ ವೈನ್ಸ್) ಹಿರಿಯ ಗ್ರಾಹಕರುಗಳಾದ ವಿಶ್ವನಾಥ ಪೂಜಾರಿ, ಸಂಜೀವ ಪೂಜಾರಿ, ಶಾಲಿನಿ ಉಪ್ಪಳ, ಅವಿನಾಶ್ ಶೆಟ್ಟಿ (ಭಾರತ್ ರೆಸ್ಟೋರೆಂಟ್), ಅನೀಶ್ ಲಖಾನಿ, ಕರುಣಾಕರ ಪೂಜಾರಿ, ಶಿವ ನಾಯರ್ ಹಾಗೂ ನಿರ್ದೇಶಕರಾದ ಭಾಸ್ಕರ್ ಎಮ್. ಸಾಲ್ಯಾನ್, ಗಂಗಾಧರ್ ಜೆ. ಪೂಜಾರಿ, ಮೋಹನ್‌ದಾಸ್ ಜಿ. ಪೂಜಾರಿ, ಸುರೇಶ್ ಎಸ್. ಸುವರ್ಣ, ಸಂತೋಷ್ ಕೆ. ಪೂಜಾರಿ, ಎಂ.ಡಿ. ಸಿಇಓ ವಿದ್ಯಾನಂದ ಕರ್ಕೇರ, ಜಂಟಿ ಎಂಡಿ ದಿನೇಶ್ ಸಾಲ್ಯಾನ್, ಪ್ರಬಂಧಕ ಜನಾರ್ದನ ಪೂಜಾರಿ, ಸಿಸಿಓ ಶೋಭಾ ದಯಾನಂದ, ಪ್ರಬಂಧಕ ಮಹೇಶ್ ಕೋಟ್ಯಾನ್ ಹಾಗೂ ವಿವಿಧ ಶಾಖೆಗಳ ಪ್ರಬಂಧಕರು, ಹಿತೈಷಿಗಳು ಸಮಾಜ ಬಾಂಧವರು, ತುಳು-ಕನ್ನಡಿಗರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪೂಜಾ ವಿಧಿಗಳನ್ನು ಶೇಖರ್ ಶಾಂತಿ ನಡೆಸಿದರು. ಪೂಜೆಯು ಪ್ರಕಾಶ್ ಪೂಜಾರಿ ಮತ್ತು ಸಂಧ್ಯಾ ಪೂಜಾರಿ ಅವರಿಂದ ನಡೆಯಿತು.

ಜಯ ಸುವರ್ಣರ ಕನಸು ನನಸುಗೊಳಿಸುವ ಐತಿಹಾಸಿಕ ಮೈಲಿಗಲ್ಲಿನಲ್ಲಿ ಬ್ಯಾಂಕ್ ರೂ. 20,000 ಕೋಟಿ ವ್ಯವಹಾರ



ತ್ರೈಮಾಸಿಕ ಅಂತ್ಯದ ವ್ಯವಹಾರದಲ್ಲಿ ರೂ. 20,000 ಕೋಟಿ ದಾಟಿದ ಗಮನಾರ್ಹ ಸಾಧನೆಯನ್ನು ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಮಾಡಿದೆ. ಇದು ಸಾಮಾನ್ಯ ಸಾಧನೆಯಲ್ಲ! ಬಿಲ್ಲವ ಸಮಾಜದ ಮಹಾನ್ ನಾಯಕ, ಭಾರತ ಬ್ಯಾಂಕಿನ ಅಭಿವೃದ್ಧಿಯ ಹರಿಕಾರ ದಿ. ಜಯ ಸಿ. ಸುವರ್ಣ ಕನಸನ್ನು ನನಸುಗೊಳಿಸುವಲ್ಲಿ ಅವರ ಪುತ್ರ ಸೂರ್ಯಕಾಂತ್ ಮತ್ತು ಅವರ ತಂಡ ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರ ಅಪಾರವಾದ ಪರಿಶ್ರಮದ ಫಲವಾಗಿದೆ. ಇದು ಕೇವಲ ಆರ್ಥಿಕ ಮೈಲಿಗಲ್ಲು ಅಲ್ಲ! ಇದು ಬ್ಯಾಂಕಿನ ಸ್ಥಿತಿಸ್ಥಾಪಕತ್ವ, ದೂರದೃಷ್ಟಿಯ ನಾಯಕತ್ವ, ಸಮರ್ಪಿತ ಉದ್ಯೋಗಿಗಳು, ಬಲವಾದ ಆಡಳಿತ ಮತ್ತು ಲಕ್ಷಾಂತರ ಗ್ರಾಹಕರು ಮತ್ತು ಷೇರುದಾರರು ಇಟ್ಟಿರುವ ಅಚಲ ನಂಬಿಕೆಯ ಪ್ರತಿಬಿಂಬವಾಗಿದೆ. ಈ ಐತಿಹಾಸಿಕ ಮೈಲಿಗಲ್ಲನ್ನು ತಲುಪುವುದು ಪ್ರತಿಯೊಬ್ಬ ಉದ್ಯೋಗಿ, ಪ್ರತಿ ಶಾಖೆ, ಆಡಳಿತ ಮಂಡಳಿ, ನಿರ್ದೇಶಕರ ಮಂಡಳಿ ಮತ್ತು ಆಡಳಿತ ಮಂಡಳಿಯ ಅವಿರತ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ. ಅವರ ಬದ್ಧತೆ ಮತ್ತು ಪರಿಶ್ರಮವು ಸವಾಲುಗಳನ್ನು ಅವಕಾಶಗಳಾಗಿ ಮತ್ತು ಆಕಾಂಕ್ಷೆಗಳನ್ನು ಸಾಧನೆಗಳಾಗಿ ಪರಿವರ್ತಿಸಿದೆ. ಬ್ಯಾಂಕಿನ ಸ್ಥಿರ ಬೆಳವಣಿಗೆ ಮತ್ತು ಯಶಸ್ಸಿಗೆ ಅಡಿಪಾಯವಾಗಿರುವ ನಿರಂತರ ವಿಶ್ವಾಸ ಮತ್ತು ಬೆಂಬಲವನ್ನು ಹೊಂದಿರುವ ಮೌಲ್ಯಯುತ ಗ್ರಾಹಕರು ಮತ್ತು ಷೇರುದಾರರು ನಂಬಿಕೆ ಮತ್ತು ವಿಶ್ವಾಸಕ್ಕೆ ಪಾತ್ರವಾಗಿದೆ. ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಈ ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತಿದ್ದಂತೆ, ಅದು ಹೆಚ್ಚಿನ ಮೈಲಿಗಲ್ಲುಗಳನ್ನು ಸಾಧಿಸುವುದನ್ನು ತನ್ನ ಪರಂಪರೆಯನ್ನು ಬಲಪಡಿಸುವುದನ್ನು ಮತ್ತು ಶ್ರೇಷ್ಠತೆ, ಸಮಗ್ರತೆ ಮತ್ತು ನಾವೀನ್ಯತೆಯಿಂದ ಸಮಾಜಕ್ಕೆ ಸೇವೆ ಸಲ್ಲಿಸುವುದನ್ನು ಮುಂದುವರಿಸುತ್ತದೆ ವೆಂಬ ವಿಶ್ವಾಸ ಹೊಂದಿದೆ. ಈ ಹೆಮ್ಮೆಯ ಮತ್ತು ಐತಿಹಾಸಿಕ ಸಾಧನೆ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಕುಟುಂಬಕ್ಕೆ ಸಂದ ಗೌರವವಾಗಿದೆ. ಬ್ಯಾಂಕ್ ಮುಂದಿನ ವರ್ಷಗಳಲ್ಲಿ ಬೆಳವಣಿಗೆ, ಹೆಚ್ಚಿನ ಯಶಸ್ಸು ಮತ್ತು ಇನ್ನೂ ಅನೇಕ ಮೈಲಿಗಲ್ಲುಗಳನ್ನು ಸಾಧಿಸಲಿ.

ಉದ್ಧವ್ ಠಾಕ್ರೆಗೆ ಆರೋಗ್ಯ ಚೆನ್ನಾಗಿಲ್ಲದ ಕಾರಣ ಆದಿತ್ಯ ಠಾಕ್ರೆಗೆ ಮಹಾರಾಷ್ಟ್ರ ಸುತ್ತಲು ಬಿಡುವಂತೆ ಕೇಳಿದ್ದೆ ; ಪರ್ಭಾನಿ ಸಂಸದ

ಪರ್ಭಾನಿ,ಜು.3 - ಶಿವಸೇನೆ (ಯುಬಿಟಿ) ಪಕ್ಷದಲ್ಲಿನ ವಿಭಜನೆಯ ಬಳಿಕ ಪಕ್ಷದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು, ಬಂಡಾಯ ಸಂಸದ ಬಂಡು ಜಾಧವ್ ಅವರ ಪರ್ಭಾನಿ ಕ್ಷೇತ್ರಕ್ಕೆ ಹೋಗಿ ಸಾರ್ವಜನಿಕ ಸಭೆ ನಡೆಸಿದರು. ಈ ಸಮಯದಲ್ಲಿ ಪಕ್ಷದ ನಾಯಕರಾದ ಸಂಜಯ್ ರಾವುತ್ ಮತ್ತು ಆದಿತ್ಯ ಠಾಕ್ರೆ ಕೂಡ ಹಾಜರಿದ್ದರು. ಸಂಜಯ್ ರಾವುತ್ ಎಲ್ಲಾ ಬಂಡಾಯ ಸಂಸದರ ಮೇಲೆ ಟೀಕಾದಾಳಿ ಮಾಡಿದರು.ಉದ್ಧವ್ ಠಾಕ್ರೆ ಕೂಡ ಬಂಡಾಯ ಸಂಸದರನ್ನು ಗುರಿಯಾಗಿಸಿಕೊಂಡು ಅವರನ್ನು ದೇಶದ್ರೋಹಿಗಳು ಎಂದು ಕರೆದರು.

ಆದಾಗ್ಯೂ ಠಾಕ್ರೆಯನ್ನು ತೊರೆದ ಬಳಿಕ ಸಂಜಯ್ ದಿನ ಪಾಟೀಲ್ ಹೊರತುಪಡಿಸಿ ಇತರ ಬಂಡಾಯ ಸಂಸದರು ಠಾಕ್ರೆ ಕುಟುಂಬವನ್ನು ಟೀಕಿಸುವುದನ್ನು ತಪ್ಪಿಸಿದರು. ಈ ಮಧ್ಯೆ ಪರ್ಭಾನಿ ಸಂಸದ ಬಂಡು ಜಾಧವ್ ಮತ್ತು ಸಂಸದ ಓಂರಾಜೆ ನಿಂಬಾಳ್ಕರ್ ಅವರ ನಿರ್ಗಮನವು ಅನೇಕರನ್ನು ಅಚ್ಚರಿಗೊಳಿಸಿತು. ಈಗ ಬಂಡು ಜಾಧವ್ (ಸಂಜಯ್ ಜಾಧವ್) ಮೊದಲ ಬಾರಿಗೆ ಠಾಕ್ರೆಯನ್ನು ತೊರೆಯಲು ಕಾರಣವನ್ನು ಹೇಳಿದ್ದಾರೆ.

'ನಮ್ಮ ಕಣ್ಣೆದುರೇ ಒಬ್ಬೊಬ್ಬರಾಗಿ ಪಕ್ಷ ಬಿಡುವುದನ್ನು ನಾವು ನೋಡುತ್ತಿದ್ದೆವು, ಶಿವಸೇನೆ ವಿಭಜನೆಯಾಯಿತು, ಆಗನಾನೇಉದ್ಧವ್ ಸಾಹೇಬರಿಗೆ, ಸಾಹೇಬ್, ನಿಮ್ಮ ಆರೋಗ್ಯ ಚೆನ್ನಾಗಿಲ್ಲ, ನಿಮಗೆ ಅದು ಸಾಧ್ಯವಾಗುತ್ತಿಲ್ಲ, ಆದರೆ ಕನಿಷ್ಠ ಪಕ್ಷ ಆದಿತ್ಯ ಠಾಕ್ರೆ ಅವರನ್ನು ಮಹಾರಾಷ್ಟ್ರದಾದ್ಯಂತ ಕರೆದುಕೊಂಡು ಹೋಗೋಣ' ಎಂದು ಹೇಳಿದೆ. ಅವರು ಸಂಘಟನೆಯಲ್ಲಿರುವ ಜನರನ್ನು ಭೇಟಿಯಾಗಲಿ, ಕಾರ್ಯಕರ್ತರ ಅಭಿಪ್ರಾಯಗಳನ್ನು ತಿಳಿಸಲಿ, ಆದರೆ ಅವರು ಸುತ್ತಾಡಲಿಲ್ಲ. ಠಾಕ್ರೆ ಇಂದು ಸಂಘಟನೆಯನ್ನು ನಿರ್ಲಕ್ಷಿಸಿದ್ದರಿಂದಲೇ ಎಲ್ಲರೂ ಅವರನ್ನು ತೊರೆಯುತ್ತಿದ್ದಾರೆ ಸಂಸದ ಬಂಡು ಜಾಧವ್ ತಿಳಿಸಿದ್ದಾರೆ. ಪರ್ಭಾನಿ ಸಂಸದ ತಮ್ಮ ಸಾರ್ವಜನಿಕ ಭಾಷಣದಲ್ಲಿ ಠಾಕ್ರೆಸೇನೆ ಬಿಡಲು ಕಾರಣವನ್ನು ನೀಡಿದರು. ಇದಲ್ಲದೇ, ನಾವು ಭಾರವಾದ ಹೃದಯದಿಂದ ಇಂತಹ ನಿರ್ಧಾರ ತೆಗೆದುಕೊಳ್ಳಬೇಕಾಯಿತು. ಏಕೆಂದರೆ, ಬಾಳಾಸಾಹೇಬ್ ಠಾಕ್ರೆ ನೆಟ್ಟ ಶಿವಸೇನೆ ಎಂಬ ಆಲದ ಮರವು ನಮ್ಮನ್ನು ಹಾಗೆಯೇ ಇರಿಸಿಕೊಳ್ಳಲು ಮತ್ತು ಮುಂದಕ್ಕೆ ಕೊಂಡೊಯ್ಯಲು ಬಯಸುತ್ತದೆ. ಅದಕ್ಕಾಗಿಯೇ, ನಾವು ಈ ನಿರ್ಧಾರ ತೆಗೆದುಕೊಂಡಿದ್ದಕ್ಕೆ ಅವರು ವಿಷಾದ ವ್ಯಕ್ತಪಡಿಸಿದರು. ಸೇಲುನಲ್ಲಿ ಆಯೋಜಿಸಲಾದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,ತಾನು ವಾರ್ಕರಿ ಪಂಥಕ್ಕೆ ಸೇರಿದವರಾಗಿದ್ದು, ಪ್ರತಿ ವರ್ಷ ಆಳಂದಿಯಿಂದ ಪಂಢರಿಗೆ ತಪ್ಪದೆ ಪಾದಯಾತ್ರೆ ಮಾಡುತ್ತೇನೆ. ಕಾಲ್ನಡಿಗೆಯಲ್ಲಿ ಹೋಗುವುದಾಗಿ ಹೇಳಿದರು.

ಠಾಕ್ರೆಸೇನೆ ನಾಯಕಿ ಶುಭಾಂಗಿ ಪಾಟೀಲ್ ಶಿಂದೆಸೇನೆ ಸೇರ್ಪಡೆಗೆ ನಿರ್ಧಾರ



ಮುಂಬಯಿ,ಜು.3 - ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಒಂದರ ಹಿಂದೆ ಒಂದರಂತೆ ಹಿನ್ನಡೆಗಳನ್ನು ಎದುರಿಸುತ್ತಿದೆ. ಕೆಲವು ದಿನಗಳ ಹಿಂದೆ, 6 ಸಂಸದರು ಉದ್ಧವ್ ಠಾಕ್ರೆ ಅವರನ್ನು ತೊರೆದು ಏಕನಾಥ್ ಶಿಂದೆ ಅವರ ಶಿವಸೇನೆಗೆ ಸೇರಿದರು. ಅದಾದ ಬಳಿಕ ವಿಧಾನ ಪರಿಷತ್ ಸದಸ್ಯ ಸಚಿನ್ ಅಹಿರ್ ಕೂಡ ಠಾಕ್ರೆ ಸೇನಗೆ ಜೈ ಮಹಾರಾಷ್ಟ್ರ ಎಂದು ಹೇಳುವ ಮೂಲಕ ಶಿಂದೆ ಜೊತೆ ಸೇರಲು ನಿರ್ಧರಿಸಿದರು. ಅದಾದ ಬಳಿಕ ಠಾಕ್ರೆಗೆ ಮತ್ತೊಮ್ಮೆ ದೊಡ್ಡ ಆಘಾತ ಬಿದ್ದಿದೆ.ಈಗ ಪಕ್ಷದ ಮಹಿಳಾ ನಾಯಕಿಯೊಬ್ಬರು ಶಿಂದೆ ನೇತೃತ್ವದ ಶಿವಸೇನೆಗೆ ಸೇರಲು ನಿರ್ಧರಿಸಿದ್ದು,ಆಕೆಯ ಪಕ್ಷ ಪ್ರವೇಶ ಸಮಾರಂಭ ಕೆಲವೇ ದಿನಗಳಲ್ಲಿ ನೂರಾರು ಕಾರ್ಯಕರ್ತರೊಂದಿಗೆ ನಡೆಯಲಿದೆ ಎಂದು ಗೊತ್ತಾಗಿದೆ.

ಸಂಸದರ ವಿಭಜನೆಯ ಬಳಿಕ 'ಆಪರೇಷನ್ ಟೈಗರ್' ಮತ್ತೊಮ್ಮೆ ಸಕ್ರಿಯವಾಗಿರುವಂತೆ ಕಂಡುಬರುತ್ತಿದೆ. ಈಗ ಠಾಕ್ರೆ ಸೇನೆಯ ಉಪ ನಾಯಕಿ ಶುಭಾಂಗಿ ಪಾಟೀಲ್ ಶಿಂದೆಸೇನೆಯತ್ತ ಮುಖ ಮಾಡಿದ್ದಾರೆ. ಲಭ್ಯ ಮಾಹಿತಿಯ ಪ್ರಕಾರ, ಉಪ ನಾಯಕಿ ಶುಭಾಂಗಿ ಪಾಟೀಲ್ ಅವರು ಶಿಂದೆ ಅವರ ಶಿವಸೇನೆಗೆ ಸೇರಲು ಸಾವಿರಾರು ಕಾರ್ಯಕರ್ತರೊಂದಿಗೆ ಧುಳೆಯಿಂದ ಮುಂಬಯಿಗೆ ತೆರಳಿದ್ದಾರೆ. ಶುಭಾಂಗಿ ಪಾಟೀಲ್ ಅವರು ಮುಂಬಯಿನಲ್ಲಿ ಉಪಮುಖ್ಯಮಂತ್ರಿ ಶಿಂದೆ ಅವರ ಸಮ್ಮುಖದಲ್ಲಿ ಪಕ್ಷ ಸೇರಲಿದ್ದಾರೆ ಎಂದು ವರದಿಯಾಗಿದೆ. ಕೆಲವು ಸಮಯದಿಂದ ಶುಭಾಂಗಿ ಪಾಟೀಲ್ ಶಿಂದೆ ಅವರ ಶಿವಸೇನೆಗೆ ಸೇರುತ್ತಾರೆ ಎಂಬ ಮಾತುಗಳು ಕೇಳಿಬರುತ್ತಿವೆ, ಆದರೆ ಶುಭಾಂಗಿ ಪಾಟೀಲ್ ಈ ವರದಿಗಳನ್ನು ನಿರಾಕರಿಸಿದ್ದರು. ಆದರೆ ಈಗ ಶುಭಾಂಗಿ ಪಾಟೀಲ್ ಶಿವಸೇನೆ ಧ್ವಜವನ್ನು ಹಿಡಿಯಲು ನಿರ್ಧರಿಸಿದ್ದಾರೆ. ಈ ಬಗ್ಗೆ ಮಾತನಾಡಿದ ಶುಭಾಂಗಿ ಪಾಟೀಲ್,'ನನಗೆ ಉದ್ಧವ್ ಠಾಕ್ರೆ ವಿರುದ್ಧ ಯಾವುದೇ ಅಸಮಾಧಾನವಿಲ್ಲ, ಆದರೆ ಸಾವಿರಾರು ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಒತ್ತಾಯದ ಮೇರೆಗೆ ನಾನು ಶಿಂದೆ ಅವರ ಶಿವಸೇನೆಗೆ ಸೇರುತ್ತಿದ್ದೇನೆ'ಎಂದು ಸ್ಪಷ್ಟಪಡಿಸಿದ್ದಾರೆ.

ಉದ್ಧವ್ ಠಾಕ್ರೆ ಮೊದಲು ತಾವು ಮಾಡಿದ ತಪ್ಪಿಗಾಗಿ 'ಹನುಮ'ನಲ್ಲಿ ಕ್ಷಮೆಯಾಚಿಸಬೇಕು ; ಸಂಜಯ್ ಶಿರ್ಸಾಟ್



ಮುಂಬಯಿ,ಜು.3 - ರಾಮ ಮಂದಿರ ದೇಣಿಗೆ ಪೆಟ್ಟಿಗೆಯಿಂದ ಕದ್ದ ಹಣವನ್ನು ಪಕ್ಷವನ್ನು ವಿಭಜಿಸಲು ಬಳಸಲಾಗುತ್ತಿದೆ ಎಂಬ ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಆರೋಪಕ್ಕೆ ಪ್ರತಿಕ್ರಿಯಿಸಿರುವ ಶಿವಸೇನೆ ಸಚಿವ ಸಂಜಯ್ ಶಿರ್ಸಾಟ್ ಅವರು,ಮೊದಲು ತಾವು ಮಾಡಿದ ತಪ್ಪುಗಳಿಗಾಗಿ ಹನುಮನಲ್ಲಿ ಕ್ಷಮೆಯಾಚಿಸಿ ಎಂದು ಮಾಜಿ ಮುಖ್ಯಮಂತ್ರಿಗೆ ಸವಾಲು ಹಾಕಿದ್ದಾರೆ. ಜು.5 ರಂದು ಸಂಜೆಯಿಂದ ರಾಜ್ಯಾದ್ಯಂತ ತನ್ನ ಪಕ್ಷ ರಾಮರಕ್ಷಾ ಆಂದೋಲನವನ್ನು ಆರಂಭಿಸಲಿದೆ ಎಂದು ಘೋಷಿಸಿದ ಠಾಕ್ರೆ ಅವರು, ರಾಮ ಮಂದಿರದ ದೇಣಿಗೆ ಪೆಟ್ಟಿಗೆಯಿಂದ ಹಣ ಕಳ್ಳತನ ವಿಷಯವನ್ನು ಕೈಗೆತ್ತಿಕೊಳ್ಳುವ ಮೂಲಕ ಮತ್ತೊಮ್ಮೆ ಹಿಂದುತ್ವದ ಕಡೆಗೆ ವಾಲುವ ಸುಳಿವು ನೀಡಿದ ಬಳಿಕ ಶಿರ್ಸಾಟ್ ಈ ಪ್ರತಿಕ್ರಿಯೆ ನೀಡಿದರು.

ಠಾಕ್ರೆ ಅವರ ಈ ಆಂದೋಲನವನ್ನು ಅಣಕಿಸಿದ ಅವರು,ರಾಜಕೀಯಕ್ಕಾಗಿ ರಾಮಮಂದಿರದ ಹಣ ಬಳಸಲಾಗುತ್ತಿದೆ ಎಂದು ಹೇಳುವುದು ಬಾಲಿಶತನ. ಈ ಹಿಂದೆ ಠಾಕ್ರೆ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಮಾಜಿ ಸಂಸದೆ ನವನೀತಾ ರಾಣಾ ದಂಪತಿಯನ್ನು ಹನುಮಾನ್ ಚಾಲೀಸಾ ಪಠಿಸಿದ್ದಕ್ಕಾಗಿ ಬಂಧಿಸಲಾಗಿತ್ತು.ಈಗ ಇವರು ಹನುಮಾನ್ ಚಾಲೀಸಾ ಪಠಿಸುತ್ತಾರೆ.ಇವರಿಗೆ ರಾಜಕೀಯಕ್ಕಾಗಿ ಮಾತ್ರ ಹಿಂದೂಗಳು ಬೇಕು ಎಂದು ಶಿರ್ಸಾಟ್ ಟೀಕಿಸಿದರು. ಠಾಕ್ರೆ ಅವರ ಮೆರವಣಿಗೆಯಲ್ಲಿ ನರ್ತಿಸುವ ಮೂಸಾ, ಇದೆಲ್ಲವೂ ಅನಿಯಂತ್ರಿತ ಪ್ರೀತಿ.ಅವರು ಹಿಂದೂ ಘೋಷಣೆಗಳನ್ನು ನೀಡುವ ಮೂಲಕ ಕಾಂಗ್ರೆಸ್ ಮತ್ತು ಎನ್‌ಸಿಪಿಯನ್ನು ತಮ್ಮೊಂದಿಗೆ ಕರೆದೊಯ್ಯಲು ಸಾಧ್ಯವೇ. ಅವರ ಮೈತ್ರಿ ಪಕ್ಷಗಳು ಹಿಂದೂ ಧರ್ಮವನ್ನು ಸ್ವೀಕರಿಸುತ್ತದೆಯೇ.ಠಾಕ್ರೆ ತಮ್ಮ ಎಲ್ಲಾ ತಪ್ಪುಗಳಿಗೆ ಪಶ್ಚಾತ್ತಾಪ ಪಡಲು, ದಾದರ್‌ಗೆ ಹೋಗಿ ಹನುಮಾನ್ ಚಾಲೀಸಾ ಪಠಿಸುವ ಜತೆಗೆ ಹನುಮನಲ್ಲಿ ಕ್ಷಮೆಯಾಚಿಸಬೇಕು ಎಂದು ಶಿರ್ಸಾಟ್ ವ್ಯಂಗ್ಯಾತ್ಮಕವಾಗಿ ಟೀಕೆ ಮಾಡಿದರು.

ದೇಣಿಗೆ ಹಣ ಲೂಟಿಯನ್ನು ಯಾರೂ ಕೂಡ ಕ್ಷಮಿಸುವುದಿಲ್ಲ. ಎಲ್ಲರ ನಂಬಿಕೆ ಇರುವಲ್ಲಿ ಲೂಟಿ ಮಾಡಬಾರದು. ಅಡ್ವಾಣಿ ರಾಮ ಮಂದಿರಕ್ಕಾಗಿ ರಥಯಾತ್ರೆ ಕೈಗೊಂಡಾಗ, ಭಾರೀ ಪ್ರತಿಕ್ರಿಯೆ ವ್ಯಕ್ತವಾಯಿತು. ಬಾಳಾಸಾಹೇಬ್ ಠಾಕ್ರೆ ಅವರು ಅಯೋಧ್ಯೆಯ ಗುಮ್ಮಟವನ್ನು ಕೆಡವಿದ ಸಂದರ್ಭ ಶಿವಸೈನಿಕರು ಇದ್ದರೆ ಹೆಮ್ಮೆಪಡುತ್ತೇನೆ ಎಂದು ಹೇಳಿದ್ದರು. ಆ ಶ್ರೇಯಸ್ಸು ಬಾಳಾಸಾಹೇಬ್ ಠಾಕ್ರೆಗೆ ಮಾತ್ರ ಸಲ್ಲುತ್ತದೆ ಎಂದು ಅವರು ಹೇಳಿದರು. ಹೋರಾಟದ ಸಮಯದಲ್ಲಿ ನಾವು ಅಯೋಧ್ಯೆಗೆ ಹೋಗಿದ್ದೆವು. ಹನುಮಾನ್ ಚಾಲೀಸಾ ಪಠಿಸುವ ಮೂಲಕ ಠಾಕ್ರೆ ಅವರು ಹಿಂದೂಗಳಲ್ಲಿ ಕ್ಷಮೆಯಾಚಿಸಲಿದ್ದಾರಾ?.ರಾಮನ ಹೆಸರಿನಲ್ಲಿ ರಾಜಕೀಯಕ್ಕೆ ಹೊಸ ದಿಕ್ಕನ್ನು ನೀಡಲು ನಾವು ಪ್ರಯತ್ನಿಸಬಾರದು. ಅವರಿಗೆ ಇನ್ನು ಮುಂದೆ ಹಿಂದೂಗಳೊಂದಿಗೆ ಯಾವುದೇ ಸಂಬಂಧವಿಲ್ಲ. ಮೊದಲು ಪಕ್ಷವನ್ನು ಎಚ್ಚರಗೊಳಿಸಿ,ತಮ್ಮನ್ನು ಎಚ್ಚರಗೊಳಿಸಲಿ.ತಮ್ಮ ಸುತ್ತಲಿನ ಚಂಡಲ್ ಚತುಷ್ಪಕ್ಷವನ್ನು ಎಚ್ಚರಗೊಳಿಸಿ ಬಳಿಕ ದೇಶದ ಬಗ್ಗೆ ಯೋಚಿಸಲಿ ಎಂದು ಶಿರ್ಸಾಟ್ ಠಾಕ್ರೆಗೆ ವ್ಯಂಗ್ಯಾತ್ಮಕ ಸಲಹೆ ನೀಡಿದರು.

ಗೋಸಾವಿ ವಸತಿಯಲ್ಲಿ ಎಸ್‌ಆರ್‌ಎ ಯೋಜನೆಯಲ್ಲಿ ಯಾವುದೇ ಅಕ್ರಮಗಳಿಲ್ಲ ; ಸಚಿವ ಶಂಭುರಾಜ್ ದೇಸಾಯಿ



ಮುಂಬಯಿ,ಜು.3 - ಪುಣೆಯ ಕೊಥ್ರುಡ್‌ನಲ್ಲಿರುವ ಗೋಸಾವಿ ವಸತಿ (ನಗರ ಸಮೀಕ್ಷೆ ಸಂಖ್ಯೆ 660) ನಲ್ಲಿರುವ ಕೊಳೆಗೇರಿ ಪುನರ್ವಸತಿ ಯೋಜನೆಯಲ್ಲಿ ಇದುವರೆಗೆ ಯಾವುದೇ ಅಕ್ರಮಗಳು ಕಂಡುಬಂದಿಲ್ಲ ಮತ್ತು ಅರ್ಹ ಫಲಾನುಭವಿಗಳನ್ನು ಮಾತ್ರ ಸೇರಿಸಲಾಗಿದೆ. ಅಲ್ಲದೆ ಎಸ್‌ಆರ್‌ಎ ಯೋಜನೆಗಳ ಕುರಿತು ಸದಸ್ಯರು ನಿರ್ದಿಷ್ಟ ಮಾಹಿತಿ ಅಥವಾ ದೂರುಗಳನ್ನು ಹೊಂದಿದ್ದರೆ, ಅವರು ಅವುಗಳನ್ನು ಲಿಖಿತವಾಗಿ ಸಲ್ಲಿಸಬೇಕು ಎಂದು ಸಚಿವ ಶಂಭುರಾಜ್ ದೇಸಾಯಿ ವಿಧಾನಸಭೆಗೆ ತಿಳಿಸಿದರು. ವಿಧಾನಸಭಾ ಸದಸ್ಯರಾದ ಸುನಿಲ್ ಕಾಂಬ್ಳೆ ಮತ್ತು ಮನೋಜ್ ಜಮ್ಸುತ್ಕರ್ ಎತ್ತಿದ ಆಸಕ್ತಿದಾಯಕ ಸಲಹೆಗೆ ಸಚಿವ ದೇಸಾಯಿ ಪ್ರತಿಕ್ರಿಯಿಸುತ್ತಿದ್ದರು. ಸದಸ್ಯರಾದ ಶಂಕರ್ ಜಗ್ತಾಪ್, ರಾಮ್ ಕದಮ್, ಯೋಗೇಶ್ ಸಾಗರ್, ವಿಜಯ್ ವಡೆಟ್ಟಿವಾರ್ ಈಚರ್ಚೆಯಲ್ಲಿ ಭಾಗವಹಿಸಿದ್ದರು.

ಕೊಥ್ರುಡ್‌ನ ಗೋಸಾವಿ ವಸ್ತಿಯಲ್ಲಿ ಎಸ್‌ಆರ್‌ಎ ಯೋಜನೆಯ ಪ್ರಸ್ತಾವನೆಯನ್ನು 2019ರ ಅ.9ರಂದು ಸ್ವೀಕರಿಸಲಾಗಿದೆ ಮತ್ತು ಎಲ್ಲಾ ಪರಿಶೀಲನೆಗಳ ನಂತರ 2022ರ ಜ.14ರಂದು ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿದೆ ಎಂದು ಸಚಿವ ದೇಸಾಯಿ ಹೇಳಿದರು. ಈ ಯೋಜನೆಯ 127 ಕೊಳೆಗೇರಿ ನಿವಾಸಿಗಳಲ್ಲಿ 101 ಜನರು ಅರ್ಹರು ಎಂದು ಕಂಡುಬಂದಿದೆ ಮತ್ತು 26 ಜನರು ಅನರ್ಹರು ಎಂದು ಕಂಡುಬಂದಿದೆ. ಇದರ ಹೊರತಾಗಿ, 35 ಜನರ ಮೇಲ್ಮನವಿಗಳು ಬಾಕಿ ಉಳಿದಿವೆ ಮತ್ತು ಅವುಗಳನ್ನು ಸಕ್ಷಮ ಪ್ರಾಧಿಕಾರವು ವಿಚಾರಣೆ ನಡೆಸುತ್ತಿದೆ. ಮೇಲ್ಮನವಿ ಪ್ರಕರಣಗಳ ಆರಂಭಿಕ ವಿಲೇವಾರಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗುವುದು ಎಂದು ಅವರು ತಿಳಿಸಿದರು.

ಈ ಯೋಜನೆಗೆ 2022ರ ಮಾ.31ರಂದು ಆಡಳಿತಾತ್ಮಕ ಅನುಮೋದನೆ ಮತ್ತು 2022ರ ಜು.15ರಂದು ನಿರ್ಮಾಣ ಅನುಮತಿ ನೀಡಲಾಗಿದೆ. ಎಲ್ಲಾ ಅರ್ಹತಾ ಮಾನದಂಡಗಳನ್ನು ಪರಿಶೀಲಿಸಿದ ನಂತರವೇ ಫಲಾನುಭವಿಗಳನ್ನು ಯೋಜನೆಯಲ್ಲಿ ಸೇರಿಸಲಾಗಿದೆ ಮತ್ತು ನಕಲಿ ಫಲಾನುಭವಿಗಳನ್ನು ಸೇರಿಸಲಾಗಿದೆ ಎಂಬ ಆರೋಪವು ಸತ್ಯಗಳನ್ನು ಆಧರಿಸಿಲ್ಲ ಎಂದು ಸಚಿವ ದೇಸಾಯಿ ಹೇಳಿದರು.

ನಿಯಮಗಳ ಪ್ರಕಾರ, ಈ ಯೋಜನೆಗೆ 18 ಸಾವಿರ ಚದರ ಮೀಟರ್‌ಟಿಡಿಆರ್ ಬಾಕಿ ಇದ್ದು, ಇಲ್ಲಿಯವರೆಗೆ ಕೇವಲ 10 ಸಾವಿರದ 896 ಚದರ ಮೀಟರ್‌ಟಿಡಿಆರ್ ವಿತರಿಸಲಾಗಿದೆ. ಆದ್ದರಿಂದ, ಹೆಚ್ಚುವರಿ ಟಿಡಿಆರ್ ನೀಡಲಾಗಿದೆ ಎಂಬ ಆರೋಪವೂ ತಪ್ಪು ಎಂದು ಅವರು ಹೇಳಿದರು.

ವಿದ್ಯಾವಿಹಾರ್ ಪಶ್ಚಿಮದ ಗಾಂವ್ದೇವಿಯ ಅಂಬಿಕಾ ಆದಿನಾಥೇಶ್ವರ ಮಹಾಗಣಪತಿ ದೇವಸ್ಥಾನ

ನಾಳೆ 'ಶ್ರೀ ರಾಮ ಕಥಾ ಹೃದಯಂ' ಸರಣಿ ತಾಳಮದ್ದಳೆ; ಸಮ್ಮಾನ

ಮುಂಬಯಿ, ಜು. 3- ಶ್ರೀ ರಾಮಾಭಿವಂದ್ಯ ಯಕ್ಷ ಸೇವಾ ಬಳಗ ಮುಂಬಯಿ ಮತ್ತು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಜಂಟಿ ಆಯೋಜನೆಯಲ್ಲಿ ಪ್ರಭು ರಾಮಚಂದ್ರ ದೇವರ ಅವತಾರದ ಆರಂಭದಿಂದ ಶ್ರೀ ದೇವರ ನಿರ್ಯಾಣದವರೆಗಿನ 'ಸಂಪೂರ್ಣ ಶ್ರೀ ರಾಮ ಚರಿತ್ರೆ - ಶ್ರೀ ರಾಮ ಕಥಾ ಹೃದಯಂ' ಪುಣ್ಯಪ್ರದ ಇಪ್ಪತ್ನಾಲ್ಕು ಕಂತುಗಳ ಸರಣಿ ತಾಳಮದ್ದಳೆ ಕಾರ್ಯಕ್ರಮದ ಹನ್ನೊಂದನೇ ಪ್ರಸ್ತುತಿ: 'ಚೂಡಾಮಣಿ - ಲಂಕಾದಹನ' ಮತ್ತು ಸನ್ಮಾನ ಕಾರ್ಯಕ್ರಮವು ಜುಲೈ 5ರ ಆದಿತ್ಯವಾರದಂದು ಅಪರಾಹ್ನ 2:30ರಿಂದ ವಿದ್ಯಾವಿಹಾರ್ ಪಶ್ಚಿಮದ ಗಾಂವ್ದೇವಿಯ ಅಂಬಿಕಾ ಆದಿನಾಥೇಶ್ವರ ಮಹಾಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ನಡೆಯಲಿದೆ.

ಹರಿದಾಸ ಭಟ್ ಪೆರ್ಣಂಕಿಲ ಅವರ ಶುಭಾಶೀರ್ವಾದದೊಂದಿಗೆ, ಶ್ರೀ ಅಂಬಿಕಾ ಆದಿನಾಥೇಶ್ವರ ದೇವಸ್ಥಾನ ವಿದ್ಯಾವಿಹಾರ್ ಇದರ ಆಡಳಿತ ಮೊಕ್ತೇಸರ ಹರಿದಾಸ ಗೋಪಾಲ್ ಶೆಟ್ಟಿಯವರ ಸಂಪೂರ್ಣ ಸಹಕಾರದೊಂದಿಗೆ ನಡೆಯಲಿರುವ ಸಮಾರಂಭದಲ್ಲಿ ಕಳೆದ ಹಲವು ದಶಕಗಳಿಂದ ಮುಂಬಯಿ ಮಹಾನಗರದಲ್ಲಿ ಯಕ್ಷಗಾನ ತಾಳಮದ್ದಲೆ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಕೆ. ಕೆ. ಶೆಟ್ಟಿ ತಾಳಮದ್ದಳೆ ಅರ್ಥಧಾರಿ ಹಾಗು ಸಂಘಟಕ, ನಾರಾಯಣ ಪಿ. ಬಂಗೇರ ಹಿಮ್ಮೇಳ ವಾದಕ, ಸದಾನಂದ ಶೆಟ್ಟಿ ಮಾನಾಡಿ ಪ್ರಸಿದ್ಧ ಯಕ್ಷಗಾನ ಕಲಾವಿದ, ರಮೇಶ ಬಿರ್ತಿ ಕಲಾವಿದ ಅವರನ್ನು ದಂಪತಿ ಸಮೇತರಾಗಿ ವೇ. ಮೂ. ಪೆರ್ಣಂಕಿಲ ಹರಿದಾಸ ಭಟ್ ಆಶಯದಂತೆ ಗಣ್ಯರ ಉಪಸ್ಥಿತಿಯಲ್ಲಿ ಗೌರವಿಸಲಾಗುವುದು.

ಕಾರ್ಯಕ್ರಮದ ಸಭಾಧ್ಯಕ್ಷತೆಯನ್ನು ವೇ. ಮೂ. ಪೆರ್ಣಂಕಿಲ ಹರಿದಾಸ ಭಟ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀನಿವಾಸ ಉಡುಪ ಪ್ರಧಾನ ಅರ್ಚಕ ಉಮಾ ಮಹೇಶ್ವರಿ ದೇವಸ್ಥಾನ ಜರಿಮೆರಿ ಆಗಮಿಸಲಿದ್ದಾರೆ. ಶ್ರೀ ಗಾಂವ್ದೇವಿ ಅಂಬಿಕಾ ಆದಿನಾಥೇಶ್ವರ ಮಹಾಗಣಪತಿ ದೇವಸ್ಥಾನ ವಿದ್ಯಾ ವಿಹಾರ ಇಲ್ಲಿಯ ಆಡಳಿತ ಮೊಕ್ತೇಸರ ಹರಿದಾಸ ಗೋಪಾಲ ಶೆಟ್ಟಿಯವರ ಗೌರವ ಉಪಸ್ಥಿತಿಯಲ್ಲಿ ಮುಂಬಯಿಯ ಖ್ಯಾತ ಭಾಗವತ ನಾದಲೋಲ ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ, ಭಾಗವತರಾದ ಜಯಲಕ್ಷ್ಮೀ ದೇವಾಡಿಗ, ಮೋಹನದಾಸ ರೈ ಇವರ ಗಾನ ವೈಭವ ನಡೆಯಲಿರುವುದು.

ಕಲಾಭಿಮಾನಿಗಳು, ಕಲಾ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಕಲಾವಿದರು, ಕಲಾ ಸಂಘಟಕರಾದ ವಾಸು ಮಾರ್ನಾಡ್ ಮತ್ತು ಸುರೇಶ್ ನಂದ್ರೋಳ್ಳಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಪುಣೆ ರಿಯಲ್ ಎಸ್ಟೇಟ್ ಏಜೆಂಟ್ ಕೊಲೆ: ಆರೋಪಿಗಳಾದ ಸಿಯಾ, ಪ್ರಿಯಕರನಿಗೆ ಜು.16 ರವರೆಗೆ ನ್ಯಾಯಂಗ ಬಂಧನ





ಪುಣೆ, ಜು.3 -ಪುಣೆಯ ರಿಯಲ್ ಎಸ್ಟೇಟ್ ಏಜೆಂಟ್ ಕೇತನ್ ಅಗರ್ವಾಲ್ (25) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಯಾ ಗೋಯಲ್ ಮತ್ತು ಆಕೆಯ ಪ್ರಿಯಕರ ಎಂದು ಹೇಳಲಾಗುವ ಚೇತನ್ ಚೌಧರಿ ಅವರನ್ನು ಪುಣೆ ನ್ಯಾಯಾಲಯ ಶುಕ್ರವಾರ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಜೂ.18 ರಂದು ಪುಣೆ ಜಿಲ್ಲೆಯ ಲೋಹಗಡ್ ಕೋಟೆಯಲ್ಲಿ ಗೋಯಲ್ (20) ಮತ್ತು ಚೌಧರಿ (22) ಕೇತನ್‌ನನ್ನು ಬಂಡೆಯಿಂದ ತಳ್ಳಿ ಕೊಲೆ ಮಾಡಿದ ಆರೋಪವಿದೆ. ಅಗರ್ವಾಲ್ ಮತ್ತು ಗೋಯಲ್ ಈ ವರ್ಷದ ನವೆಂಬರ್‌ನಲ್ಲಿ ವಿವಾಹವಾಗಲು ನಿರ್ಧರಿಸಿದ್ದರು.

ಪೊಲೀಸ್ ಕಸ್ಟಡಿ ಅವಧಿ ಮುಗಿದ ಮೇಲೆ ಇಬ್ಬರೂ ಆರೋಪಿಗಳನ್ನು ಪ್ರಥಮ ದರ್ಜೆ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಎ ಎಂ ವಿಭೂತೆ ಮುಂದೆ ಹಾಜರುಪಡಿಸಲಾಯಿತು.

ಗೋಯಲ್ ಮತ್ತು ಚೌಧರಿ ಅವರ ಮೊಬೈಲ್ ಫೋನ್‌ಗಳಿಂದ ವಶಪಡಿಸಿಕೊಂಡ ದತ್ತಾಂಶವು ಚಿಹ್ನೆಗಳು ಮತ್ತು ಸಂಕೇತ ಭಾಷೆಯಲ್ಲಿ ಚಾಟ್‌ಗಳನ್ನು ಒಳಗೊಂಡಿದೆ ಮತ್ತು ಸಂಭಾಷಣೆಗಳನ್ನು ಅರ್ಥಮಾಡಿಕೊಳ್ಳಲು ಅವರ ಕಸ್ಟಡಿ ವಿಚಾರಣೆ ಅಗತ್ಯವಾಗಿದೆ ಎಂದು ವಾದಿಸಿ, ಪ್ರಾಸಿಕ್ಯೂಷನ್ ಮೂರು ದಿನಗಳ ಪೊಲೀಸ್ ಕಸ್ಟಡಿ ವಿಸ್ತರಣೆಗಾಗಿ ಕೋರಿತು.

ಗೋಯಲ್ ಮತ್ತು ಚೌಧರಿ ಪರ ವಕೀಲರು ಈ ಅರ್ಜಿಯನ್ನು ವಿರೋಧಿಸಿ,ಪ್ರಕರಣದ ತನಿಖೆ ನಡೆಸಲು ಪೊಲೀಸರಿಗೆ ಈಗಾಗಲೇ ಸಾಕಷ್ಟು ಸಮಯ ನೀಡಲಾಗಿದೆ ಮತ್ತು ಹೆಚ್ಚಿನ ಕಸ್ಟಡಿ ವಿಚಾರಣೆ ಅನಗತ್ಯವಾಗಿದೆ ಎಂದು ವಾದಿಸಿದರು. ಎರಡೂ ಕಡೆಯವರನ್ನು ಆಲಿಸಿದ ಬಳಿಕ ನ್ಯಾಯಾಲಯವು ಪ್ರಾಸಿಕ್ಯೂಷನ್‌ನ ಮನವಿಯನ್ನು ತಿರಸ್ಕರಿಸಿ, ಜು.16 ರವರೆಗೆ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಆರೋಪಿಗಳನ್ನು ಘಟನೆ ನಡೆದ ಸ್ಥಳದ ಪಂಚನಾಮೆಯನ್ನು ನಡೆಸಲು, ಘಟನೆ ನಡೆದ ಸ್ಥಳ, ಪಾಸ್‌ಪೋರ್ಟ್ ಹರಿದು ಹಾಕಿದ ಸ್ಥಳಕ್ಕೆ ಕರೆದೊಯ್ಯಲಾಗುತ್ತದೆ. ಅಲ್ಲದೆ ಆರೋಪಿ ಚೇತನ್‌ನ ಬಟ್ಟೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕಾಗಿದೆ

ಆರೋಪಿಯ ನಾರ್ಕೋ ಅನಾಲಿಸ್ ಪರೀಕ್ಷೆಗೆ ಅನುಮತಿಯಿಲ್ಲ

ಎಂದು ಸರಕಾರಿ ಅಭಿಯೋಜಕ ರಾಜಶ್ರೀ ವಿರ್ಕುಡ್ ಅವರು ನ್ಯಾಯಾಲಯಕ್ಕೆ ತಿಳಿಸಿ,ಅವರ ಮೂರು ದಿನಗಳ ಪೊಲೀಸ್ ಕಸ್ಟಡಿಗಾಗಿ ಒತ್ತಾಯಿಸಿದರು.

ಅಲ್ಲದೆ, ಆರೋಪಿಗಳನ್ನು ಮುಖಾಮುಖಿಯಾಗಿ ಪ್ರಶ್ನಿಸಬೇಕಾಗಿದೆ. ಮೊಬೈಲ್ ಡೇಟಾವನ್ನು ಸ್ವೀಕರಿಸಲಾಗಿದೆ. ಅದನ್ನು ಮುಖಾಮುಖಿಯಾಗಿ ಪರಿಶೀಲಿಸಬೇಕಾಗಿದೆ. ಮೊಬೈಲ್‌ನ ಮರುಪಡೆಯಲಾದ ಡೇಟಾವನ್ನು ಸ್ವೀಕರಿಸಲಾಗಿದ್ದರೂ, ಕೋಡ್ ಭಾಷೆಯಲ್ಲಿ ಸಂಭಾಷಣೆ ನಡೆದಿದೆ. ಅದನ್ನು ಅರ್ಥೈಸಿಕೊಳ್ಳಬೇಕು. ಪಿತೂರಿಯಲ್ಲಿ ಬೇರೆ ಆಪ್ತ ವ್ಯಕ್ತಿ ಭಾಗಿಯಾಗಿದ್ದಾರೆಯೇ?.ಇದನ್ನು ತನಿಖೆ ಮಾಡುವುದು ಅವಶ್ಯಕ. ಸರಕಾರವು ಇದಕ್ಕಾಗಿ ಮೂರು ದಿನಗಳ ಕಸ್ಟಡಿಗೆ ಒತ್ತಾಯಿಸಿತು, ಆದಾಗ್ಯೂ, ಈ ಕಾರಣಗಳು ಸಾಕಾಗುವುದಿಲ್ಲ ಎಂದು ಹೇಳಿ, ನ್ಯಾಯಾಲಯವು ಈ ಬೇಡಿಕೆಯನ್ನು ತಿರಸ್ಕರಿಸಿ,ಆರೋಪಿಗಳಿಗೆ 14 ದಿನಗಳ ನ್ಯಾಯಾಂಗ ಕಸ್ಟಡಿಯನ್ನು ನೀಡಿತು.

ಸಿಯಾ ತನಿಖೆಯಲ್ಲಿ ಉತ್ತಮವಾಗಿ ಸಹಕರಿಸುತ್ತಿದ್ದಾರೆ, ಮೊಬೈಲ್ ಡೇಟಾವನ್ನು ಕೂಡ ಮರುಪಡೆಯಲಾಗಿದೆ.ಕೋಡ್ ಚಿಹ್ನೆಗಳನ್ನು ಪರಿಶೀಲಿಸಬೇಕಾಗಿದೆ, ಅದು ಕಾನೂನಿಗೆ ಅನುಗುಣವಾಗಿಲ್ಲ. ಆದ್ದರಿಂದ, ಪೊಲೀಸ್ ಕಸ್ಟಡಿಗೆ ನೀಡಬಾರದು ಎಂದು ಆಕೆಯ ಅವರ ವಕೀಲ ವಿಪುಲ್ ದುಶಿಂಗ್ ವಾದ ಮಂಡಿಸುತ್ತಾ ಹೇಳಿದರು. ಇದರ ಬಗ್ಗೆ, ಸರಕಾರಿ ಅಭಿಯೋಜಕರು ಕೋಡ್ ಚಿಹ್ನೆ ಮತ್ತು ಅಡ್ಡಹೆಸರನ್ನು ಏಕೆ ಮತ್ತು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂದು ವಾದಿಸಿದರು.

ಇದೇ ವೇಳೆ ನಾರ್ಕೋ ಅನಾಲಿಸ್ ಪರೀಕ್ಷೆಗೆ ಆರೋಪಿಯ ಒಪ್ಪಿಗೆ ಅಗತ್ಯವಿದೆ, ಇಲ್ಲದಿದ್ದರೆ ಅನುಮತಿ ನೀಡಲಾಗುವುದಿಲ್ಲ ಎಂದು ನ್ಯಾಯಾಧೀಶರು ಹೇಳಿದರು. ಇದರ ಬಗ್ಗೆ ಸರಕಾರಿ ಅಭಿಯೋಜಕರು ಇಂತಹ ಪರೀಕ್ಷೆಯ ಪರೀಕ್ಷೆಯ ಅಗತ್ಯವಿಲ್ಲ ಎಂದು ವಾದಿಸಿದರು.

ಥಾಣೆ: ಘೋಡ್‌ಬಂದರ್ ರೋಡ್‌ನಲ್ಲಿ ಅಪಘಾತಕ್ಕೀಡಾಗಿ ಸೇತುವೆಯಿಂದ ನೇತಾಡಿದ ಟ್ರಕ್



ಥಾಣೆ, ಜು.3 - ಥಾಣೆಯ ಜನನಿಬಿಡ ಘೋಡ್‌ಬಂದರ್ ರೋಡ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಬೆಲ್ಲ ತುಂಬಿದ ಟ್ರಕ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಬಳಿಕ ಫ್ಲೈಓವರ್‌ನಿಂದ ಅನಿಶ್ಚಿತವಾಗಿ ನೇತಾಡಿಕೊಂಡಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಸರ್ವಡವ್ಲಿ ಫ್ಲೈಓವರ್‌ನಲ್ಲಿ ಬೆಳಿಗ್ಗೆ 5 ಗಂಟೆ ಸುಮಾರಿಗೆ ಸಂಭವಿಸಿದ ಈ ಅಪಘಾತದಲ್ಲಿ ಯಾರಿಗೂ ಗಾಯಗಳಾಗಿಲ್ಲ.

ಪುಣೆಯಿಂದ ಡಹಾಣು ಕಡೆಗೆ ಹೋಗುತ್ತಿದ್ದ ಟ್ರಕ್‌ನ ಚಾಲಕ ವಾಹನದ ನಿಯಂತ್ರಣ ಕಳೆದುಕೊಂಡಾಗ ಟ್ರಕ್ ರಸ್ತೆ ವಿಭಜಕವನ್ನು ಹಾರಿ, ಪಕ್ಕದ ರಕ್ಷಣಾತ್ಮಕ ಗೋಡೆಗೆ ಡಿಕ್ಕಿ ಹೊಡೆದು ಓವರ್‌ಪಾಸ್‌ನಿಂದ ನೇತಾಡಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಮ್ಮ ತುರ್ತು ಪ್ರತಿಕ್ರಿಯೆ ತಂಡಗಳು, ಸಂಚಾರ ಪೊಲೀಸ್ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿದವು. ಜೆಸಿಬಿ ಯಂತ್ರ ಮತ್ತು ಕ್ರೇನ್‌ಗಳನ್ನು ಬಳಸಿ ಟ್ರಕ್‌ನ್ನು ಹಿಂದಕ್ಕೆ ಎಳೆದು ಸೇತುವೆಯಿಂದ ತೆಗೆದುಹಾಕಲಾಯಿತು' ಎಂದು ಥಾಣೆ ನಗರ ಪಾಲಿಕೆಯ ಪ್ರಾದೇಶಿಕ ವಿಪತ್ತು ನಿರ್ವಹಣಾ ಕೋಶದ ಮುಖ್ಯಸ್ಥ ಯಾಸಿನ್ ತಡ್ವಿ ಹೇಳಿದರು.

ರಸ್ತೆಯನ್ನು ತೆರವುಗೊಳಿಸಲು ಮತ್ತು ವಾಹನ ಸಂಚಾರವನ್ನು ನಿಯಂತ್ರಿಸಲು ಆರ್‌ಡಿಎಂಸಿ ಮತ್ತು ಸಂಚಾರ ವಿಭಾಗದ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದರು.

ಉದ್ಧವ್ ಠಾಕ್ರೆ ನಿದ್ರೆಯಿಂದ ಎಚ್ಚರಗೊಳ್ಳದಿದ್ದರೆ ಶಾಸಕರು ಕೂಡ ಕೈಕೊಡುತ್ತಾರೆ; ರಾಮದಾಸ್ ಅಠವಳೆ ಭವಿಷ್ಯ

ಮುಂಬಯಿ,ಜು.3 - ಉದ್ಧವ್ ಠಾಕ್ರೆ ನಿದ್ರೆಯಿಂದ ಎಚ್ಚರಗೊಳ್ಳದಿದ್ದರೆ ಅವರ ಶಿವಸೇನೆ ಮುಂದಿನ ದಿನಗಳಲ್ಲಿ ಮತ್ತೊಂದು ದೊಡ್ಡ ಹಿನ್ನಡೆಯನ್ನು ಅನುಭವಿಸುವ ಸಾಧ್ಯತೆಯಿದೆ ಎಂದು ಕೇಂದ್ರ ಸಚಿವ ರಾಮದಾಸ್ ಅಠವಳೆ ಅವರು ಭವಿಷ್ಯ ನುಡಿದಿದ್ದಾರೆ.



ಕೆಲವು ದಿನಗಳ ಹಿಂದೆ ಶಿವಸೇನೆ (ಯುಬಿಟಿ) ಪಕ್ಷದ 6 ಸಂಸದರು ಉದ್ಧವ್ ಠಾಕ್ರೆಯನ್ನು ತೊರೆದು ಏಕನಾಥ್ ಶಿಂದೆ ಅವರ ಶಿವಸೇನೆಯನ್ನು ಸೇರಿದರು. ಅದಾದ ಬಳಿಕ ವಿಧಾನ ಪರಿಷತ್ತಿನ ಸದಸ್ಯ ಸಚಿನ್ ಅಹಿರ್ ಕೂಡ ಶಿಂದೆ ಅವರ ನೇತೃತ್ವದಲ್ಲಿ ಕೆಲಸ ಮಾಡಲು ನಿರ್ಧರಿಸಿದರು. ಈಗ, ಠಾಕ್ರೆ ಅವರ ಶಿವಸೇನೆ ಮುಂದಿನ ದಿನಗಳಲ್ಲಿ ಮತ್ತೊಂದು ದೊಡ್ಡ ಹಿನ್ನಡೆಯನ್ನು ಎದುರಿಸುವ ಸಾಧ್ಯತೆಯಿದೆ ಎಂದು ಕೇಂದ್ರ ಸಚಿವ ಅಠವಳೆ ಹೇಳಿರುವುದು ಅಚ್ಚರಿಗೆ ಕಾರಣವಾಗಿದೆ.

ಕೊಲ್ಹಾಪುರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಠವಳೆ ಅವರು,ಈಗ ಉದ್ಧವ್ ಠಾಕ್ರೆ ಅವರ ಏಕೈಕ ಕೆಲಸ ಪ್ರತಿಭಟಿಸುವುದು ಆಗಿದೆ.ಅವರ ಸಂಸದರು ಬೇರ್ಪಟ್ಟಿದ್ದಾರೆ, ಈಗ ಶಾಸಕರು ಕೂಡ ಬೇರ್ಪಡುತ್ತಾರೆ. ಅಯೋಧ್ಯಾ ಮಂದಿರದಲ್ಲಿ ಹಗರಣ ನಡೆದಿದೆ ನಿಜ. ರಾಮನೊಂದಿಗೆ ಅಪ್ರಾಮಾಣಿಕರಾಗುವುದು ಸರಿಯಲ್ಲ. ಯೋಗಿ ಆದಿತ್ಯನಾಥ್ ಈ ವಿಷಯದ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ. ರಾಮ ಮಂದಿರದಲ್ಲಿನ ಹಗರಣವನ್ನು ಎನ್‌ಡಿಎ ಸಹಿಸುವುದಿಲ್ಲ. ಉದ್ಧವ್ ಠಾಕ್ರೆ ಮೊದಲು ಅಯೋಧ್ಯೆಗೆ ಹೋಗಿ ರಾಮನ ದರ್ಶನ ಪಡೆಯಬೇಕು ಎಂದರು.

ಶಾಸಕರು ಮತ್ತು ಸಂಸದರನ್ನು ಉಳಿಸಿಕೊಳ್ಳುವ ಶಕ್ತಿ ಉದ್ಧವ್ ಠಾಕ್ರೆಗೆ ಇಲ್ಲ. ಈ ಎಲ್ಲಾ ಅವ್ಯವಸ್ಥೆಗೆ ಅಮಿತ್ ಶಾಹ ಅವರನ್ನು ಹೊಣೆಗಾರರನ್ನಾಗಿ ಮಾಡಬಾರದು. ಇದು ಆಪರೇಷನ್ ಟೈಗರ್, ಆಪರೇಷನ್ ದೇವೇಂದ್ರ ಅಲ್ಲ. ಶಿವಸೈನಿಕರು ಏಕನಾಥ್ ಶಿಂದೆ ಅವರನ್ನು ಶಿವಸೇನೆಯ ನಿಜವಾದ ನಾಯಕ ಎಂದು ಭಾವಿಸುತ್ತಾರೆ. ಅದಕ್ಕಾಗಿಯೇ ಹೆಚ್ಚಿನ ಸಂಖ್ಯೆಯ ಜನಪ್ರತಿನಿಧಿಗಳು ಅವರ ಬಳಿಗೆ ಹೋಗುತ್ತಿದ್ದಾರೆ ಎಂದು ಅವರು ತಿಳಿಸಿದರು.

ಇಷ್ಟು ಶಾಸಕರು ಮತ್ತು ಸಂಸದರು ನಮ್ಮ ಬಳಿಗೆ ಬರುತ್ತಿದ್ದಾರೆ, ಆದ್ದರಿಂದ ಉದ್ಧವ್ ಠಾಕ್ರೆ ಕೂಡ ನಮ್ಮ ಬಳಿಗೆ ಬರಬೇಕು. ರಾಜ್‌ಠಾಕ್ರೆ ಅವರಿಂದ ಶಾಸಕರನ್ನು ಆಯ್ಕೆ ಮಾಡಲು ಸಾಧ್ಯವಿಲ್ಲ.ಅವರ ಶಾಸಕರು ನಮ್ಮ ಬಳಿಗೆ ಬರುತ್ತಾರೆ, ನಾವು ಬರುವವರನ್ನು ತೆಗೆದುಕೊಳ್ಳುತ್ತೇವೆ. ರಾಜ್ ಠಾಕ್ರೆ ತಮ್ಮ ಪಾತ್ರವನ್ನು ಬದಲಾಯಿಸುವ ನಾಯಕ ಅಷ್ಟೇ ಎಂದು ಅವರು ಹೇಳಿದರು.

ಕಲಬೆರಕೆ ತಡೆಗೆ ಕಠಿಣ ಕ್ರಮ;ಹಾಲು ವಲಯಕ್ಕೆ ಎಫ್‌ಡಿಎ ಅನುಸರಣಾ ಆದೇಶ ಜಾರಿ; ಉಲ್ಲಂಘನೆಗೆ 10 ಲ.ರೂ. ದಂಡದ ಎಚ್ಚರಿಕೆ

ಮುಂಬಯಿ, ಜು.3 - ಕಲಬೆರಕೆಯನ್ನು ತಡೆಯಲು ಮತ್ತು ಆಹಾರ ಸುರಕ್ಷತೆಯನ್ನು ಸುಧಾರಿಸಲು ಮಹಾರಾಷ್ಟ್ರ ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ಶುಕ್ರವಾರ ಸಂಪೂರ್ಣ ಹಾಲು ಪೂರೈಕೆ ವ್ಯವಸ್ಥೆಗೆ ಅನುಸರಣಾ ಆದೇಶಗಳನ್ನು ಹೊರಡಿಸಿದ್ದು, ಕಲಬೆರಕೆ, ಸುಳ್ಳು ವಾದ ಮತ್ತು ಕಾನೂನುಬಾಹಿರ ಕಾರ್ಯಾಚರಣೆಗಳಂತಹ ಉಲ್ಲಂಘನೆಗಳಿಗೆ 10 ಲಕ್ಷ.ರೂ.ವರೆಗೆ ದಂಡವನ್ನು ವಿಧಿಸಬಹುದು ಎಂದು ಎಚ್ಚರಿಸಿದೆ.



ವಲಯದಾದ್ಯಂತ ಏಕರೂಪದ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಬಹು ಅಸ್ತಿತ್ವದಲ್ಲಿರುವ ನಿಯಮಗಳನ್ನು ಒಂದೇ ಮಾರ್ಗಸೂಚಿಗಳಾಗಿ ಕ್ರೋಢೀಕರಿಸಿದ ಮೇಲೆ ಇಲಾಖೆಯು ಇಡೀ ಹಾಲು ಮತ್ತು ಹಾಲು ಉತ್ಪನ್ನಗಳ ಪರಿಸರ ವ್ಯವಸ್ಥೆಗೆ ಅನುಸರಣಾ ಆದೇಶಗಳನ್ನು ನೀಡಿದೆ ಎಂದು ಎಫ್‌ಡಿಎ ಆಯುಕ್ತ ತುಕಾರಾಂ ಮುಂಢೆ ಹೇಳಿದರು.

'ಈ ಹಿಂದೆ ಹೋಟೆಲ್‌ಗಳಿಗೆ ಅನುಸರಣಾ ಆದೇಶಗಳನ್ನು ನೀಡಲಾಗುತ್ತಿತ್ತು. ಅದೇ ರೀತಿ, ನಾವು ಈಗ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಆದೇಶಗಳನ್ನು ನೀಡಿದ್ದೇವೆ. ಫಾರ್ಮ್‌ನಿಂದ ಟೇಬಲ್‌ವರೆಗೆ - ಇಡೀ ವ್ಯವಸ್ಥೆಗೆ ಅನ್ವಯವಾಗುವ ನಿಯಮಗಳನ್ನು ಅನುಸರಣಾ ಮಾರ್ಗಸೂಚಿಗಳಾಗಿ ಸಂಕಲಿಸಲಾಗಿದೆ. ಇವು ಯಾವುದೇ ಸ್ಥಾಪನೆಯನ್ನು ನಿಷೇಧಿಸುವ ಉದ್ದೇಶವನ್ನು ಹೊಂದಿಲ್ಲ, ಆದರೆ ಆಹಾರ ಸುರಕ್ಷತಾ ಮಾನದಂಡಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು. ಇಂದು ಆದೇಶಗಳನ್ನು ಹೊರಡಿಸಲಾಗಿದೆ' ಎಂದು ಮುಂಢೆ ಇಲ್ಲಿ ವರದಿಗಾರರಿಗೆ ತಿಳಿಸಿದರು.

ನೋಂದಣಿ ಅಥವಾ ಪರವಾನಗಿಗಳಿಲ್ಲದೆ ಕಾರ್ಯನಿರ್ವಹಿಸುವುದು, ದಾರಿತಪ್ಪಿಸುವ ಜಾಹೀರಾತು, ಸುಳ್ಳು ವಾದಗಳನ್ನು ನೀಡುವುದು ಮತ್ತು ಹಾಲು ಕಲಬೆರಕೆಯಂತಹ ಅಪರಾಧಗಳು 10 ಲಕ್ಷ ರೂ.ಗಳವರೆಗೆ ದಂಡವನ್ನು ವಿಧಿಸಬಹುದು. ತಡೆಗಟ್ಟುವಿಕೆಯಾಗಿ ಕಾರ್ಯನಿರ್ವಹಿಸಲು ಎಫ್‌ಡಿಎ ಗರಿಷ್ಠ ಅನುಮತಿಸುವ ದಂಡವನ್ನು ವಿಧಿಸುತ್ತದೆ ಎಂದು ಅವರು ಹೇಳಿದರು.

ಹೊಸ ಮಾರ್ಗಸೂಚಿಗಳು ಹಾಲು ಸಂಗ್ರಹಣಾ ಕೇಂದ್ರಗಳು, ತಂಪಾಗಿಸುವ ಘಟಕಗಳು, ಪಾಶ್ಚರೀಕರಣ ಮತ್ತು ಏಕರೂಪೀಕರಣ ಸೌಲಭ್ಯಗಳು, ಅತಿ ಹೆಚ್ಚಿನ ತಾಪಮಾನ ಸಂಸ್ಕರಣಾ ಘಟಕಗಳು, ಪ್ಯಾಕೇಜಿಂಗ್ ಮತ್ತು ಭರ್ತಿ ಮಾಡುವ ಕೇಂದ್ರಗಳು, ವಿತರಕರು, ಸಗಟು ವ್ಯಾಪಾರಿಗಳು, ಸಡಿಲ ಹಾಲು ಮಾರಾಟಗಾರರು, ಸ್ವಯಂಚಾಲಿತ ಮಾರಾಟ ಯಂತ್ರ ನಿರ್ವಾಹಕರು, ಹಾಲು ಉತ್ಪನ್ನಗಳ ತಯಾರಕರು ಮತ್ತು ಚಿಲ್ಲರೆ ವ್ಯಾಪಾರಿಗಳು ಸೇರಿದಂತೆ ಪೂರೈಕೆ ಸರಪಳಿಯ ಪ್ರತಿಯೊಂದು ಹಂತವನ್ನು ಒಳಗೊಳ್ಳುತ್ತವೆ ಎಂದು ಅವರು ತಿಳಿಸಿದರು. ಹಾಲು ಉತ್ಪಾದಕರು ಮತ್ತು ತಯಾರಕರೊಂದಿಗೆ ಸಮಾಲೋಚನೆಗಳನ್ನು ಅನುಸರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ಹೇಳಿದರು. ಈ ಸಮಯದಲ್ಲಿ ಎಫ್‌ಡಿಎ ಉದ್ಯಮ ಸಿಬ್ಬಂದಿಗೆ ಆಹಾರ ಸುರಕ್ಷತಾ ಮಾನದಂಡಗಳು ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ತರಬೇತಿ ಕಾರ್ಯಕ್ರಮಗಳನ್ನು ನಡೆಸಿತು.

ಅನುಸರಣಾ ಆದೇಶಗಳ ಪ್ರಕಾರ, ಎಲ್ಲಾ ಸಂಸ್ಥೆಗಳು ಕಡ್ಡಾಯ ಅಪಾಯ ವಿಶ್ಲೇಷಣೆ ಮತ್ತು ನಿರ್ಣಾಯಕ ನಿಯಂತ್ರಣ ಪಾಯಿಂಟ್ ಮೌಲ್ಯಮಾಪನಗಳನ್ನು ಕೈಗೊಳ್ಳಬೇಕು ಮತ್ತು ಅವುಗಳನ್ನು ನಿಯಮಿತವಾಗಿ ನವೀಕರಿಸಬೇಕು. ಅವರು ಆಹಾರ ದರ್ಜೆಯ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು, ಶೇಖರಣಾ ಟ್ಯಾಂಕ್‌ಗಳು ಮತ್ತು ಸುಲಭವಾಗಿ ಸ್ವಚ್ಛಗೊಳಿಸಬಹುದಾದ ಉಪಕರಣಗಳನ್ನು ಬಳಸಬೇಕು, ಆದರೆ ಪರವಾನಗಿ ಹೊಂದಿರುವವರು ಪರಿಣಾಮಕಾರಿ ಕೀಟ ನಿಯಂತ್ರಣ ಕ್ರಮಗಳನ್ನು ಕೂಡ ಖಚಿತಪಡಿಸಿಕೊಳ್ಳಬೇಕು.

ಹಾಲು ಸಂಗ್ರಹಣೆ ಮತ್ತು ಸಾಗಣೆಯಲ್ಲಿ ತೊಡಗಿರುವ ಎಲ್ಲಾ ಘಟಕಗಳು ನೋಂದಾಯಿತ ನಿರ್ವಾಹಕರ ದಾಖಲೆಗಳನ್ನು ನಿರ್ವಹಿಸಬೇಕಾಗುತ್ತದೆ ಎಂದು ಮುಂಢೆ ಹೇಳಿದರು. ಹಾಲಿನ ಟ್ಯಾಂಕರ್‌ಗಳು ಶುಚಿತ್ವ ತಪಾಸಣೆಗೆ ಒಳಗಾಗಬೇಕು ಮತ್ತು ವಾಹನವು ತಪಾಸಣೆಯಲ್ಲಿ ವಿಫಲವಾದರೆ, ಅಧಿಕಾರಿಗಳು ಅದನ್ನು ಎಫ್‌ಡಿಎಗೆ ವರದಿ ಮಾಡಬೇಕು. ಅಂತಹ ಟ್ಯಾಂಕರ್‌ಗಳನ್ನು ಬಳಸುವ ಸಾಗಣೆದಾರರು ಮತ್ತು ಅವುಗಳ ಮೂಲಕ ಸರಬರಾಜುಗಳನ್ನು ಪಡೆಯುವ ವ್ಯವಹಾರಗಳು - ಉಲ್ಲಂಘನೆಗಳು ಪತ್ತೆಯಾದರೆ ಸಮಾನವಾಗಿ ಜವಾಬ್ದಾರರಾಗಿರುತ್ತಾರೆ ಎಂದು ಅವರು ವಿವರಿಸಿದರು.

ಹಾಸ್ಪಿಟಾಲಿಟಿ ವಲಯದ ವಿರುದ್ಧ ಹಿಂದಿನ ಕ್ರಮವನ್ನು ಉಲ್ಲೇಖಿಸಿದ ಮುಂಢೆ, ಕೆಲವು ಹೋಟೆಲ್‌ಗಳು ಮತ್ತು ತಿನಿಸುಗಳು ಇಲಾಖೆಯನ್ನು ದಾರಿ ತಪ್ಪಿಸಲು ನಕಲಿ ಕೀಟ ನಿಯಂತ್ರಣ ಪ್ರಮಾಣಪತ್ರಗಳನ್ನು ಸಲ್ಲಿಸಿರುವುದನ್ನು ಎಫ್‌ಡಿಎ ಕಂಡುಹಿಡಿದಿದೆ ಎಂದು ಹೇಳಿದರು.

ತೆರೆದ ಮ್ಯಾನ್‌ಹೋಲ್‌ಗೆ ಬಿದ್ದು ಸಾವು: ರೋಹಿತ್ ಪವಾರ್‌ರಿಂದ ಮೃತನ ಸಂಬಂಧಿಕರ ಭೇಟಿ

ಮುಂಬಯಿ, ಜು.3 - ನಗರದ ಸಾಕಿನಾಕಾ ಪ್ರದೇಶದಲ್ಲಿ ತೆರೆದ ಮ್ಯಾನ್‌ಹೋಲ್‌ಗೆ ಬಿದ್ದು ವ್ಯಕ್ತಿಯೊಬ್ಬರು ಸಾವನ್ನಪ್ಪಲು ಸಂಬಂಧಪಟ್ಟ ಅಧಿಕಾರಿಗಳ 'ಸರಿಯಾದ ನಿರ್ವಹಣೆ ಕೊರತೆ' ಕಾರಣ ಎಂದು ಎನ್‌ಸಿಪಿ (ಎಸ್‌ಪಿ) ಶಾಸಕ ರೋಹಿತ್ ಪವಾರ್ ಶುಕ್ರವಾರ ಆರೋಪಿಸಿದ್ದು, ಇಂತಹ ಘಟನೆಗಳು ಪ್ರತಿ ವರ್ಷವೂ ಮರುಕಳಿಸುತ್ತವೆ ಎಂದು ಹೇಳಿದ್ದಾರೆ. ಮೃತನ ಕುಟುಂಬವು ಈ ಘಟನೆಗೆ ಹೊಣೆಗಾರಿಕೆ, ಪರಿಹಾರ ಮತ್ತು ಇದೇ ರೀತಿಯ ಘಟನೆಗಳನ್ನು ತಡೆಗಟ್ಟಲು ಕಠಿಣ ಸುರಕ್ಷತಾ ಕ್ರಮಗಳಿಗಾಗಿ ಒತ್ತಾಯಿಸಿದೆ. ಮೃತ ಅಸ್ಲಾಂ ಇಸಾಕ್ ಶೇಖ್ ಅವರ ಕುಟುಂಬವನ್ನು ಭೇಟಿಯಾದ ಬಳಿಕ ಮಾತನಾಡಿದ ಪವಾರ್, ಬಿಎಂಸಿ ಸನ್ನದ್ಧತೆಗಾಗಿ ಗಣನೀಯ ನಿಧಿ ಹಂಚಿಕೆಗಳ ಹೊರತಾಗಿಯೂ ಮಳೆಗಾಲದಲ್ಲಿ ಪ್ರತಿ ವರ್ಷವೂ ಇಂತಹ ಘಟನೆಗಳು ಮರುಕಳಿಸುತ್ತವೆ ಎಂದು ಹೇಳಿದರು.

'ದುರದೃಷ್ಟವಶಾತ್, ಸರಿಯಾದ ನಿರ್ವಹಣೆಯ ಕೊರತೆಯಿಂದಾಗಿ ಜನರು ಈ ಮ್ಯಾನ್‌ಹೋಲ್‌ಗಳಿಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾರೆ.ಇದು ಪುನರಾವರ್ತಿತ ವಾರ್ಷಿಕ ಸಮಸ್ಯೆಯಾಗಿದೆ. ಪಾಲಿಕೆಯ ಬಜೆಟ್ ಸುಮಾರು 81,000 ಕೋಟಿ ರೂ.ಗಳಷ್ಟಿದೆ. ಮಳೆ ಬರುವ ಮೊದಲು ಮ್ಯಾನ್‌ಹೋಲ್‌ಗಳು, ಚರಂಡಿಗಳು ಮತ್ತು ಮರಗಳನ್ನು ಸರಿಪಡಿಸಲು ಪೂರ್ವ-ಮಾನ್ಸೂನ್ ಸಿದ್ಧತೆಗಳಿಗಾಗಿ ಸುಮಾರು 250 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತದೆ' ಎಂದು ಎನ್‌ಸಿಪಿ (ಎಸ್‌ಪಿ) ಶಾಸಕರು ವಿವರಿಸಿದರು. ದುಃಖಿತ ಕುಟುಂಬವು ನಂಬಿಕೆಯನ್ನು ಕಳೆದುಕೊಂಡಿದೆ ಮತ್ತು ಕೆಳ ಹಂತದ ಅಧಿಕಾರಿಗಳನ್ನು ಮೀರಿ ಹೊಣೆಗಾರಿಕೆ ವಿರಳವಾಗಿ ಏಕೆ ವಿಸ್ತರಿಸುತ್ತದೆ ಎಂದು ಅವರು ಪ್ರಶ್ನಿಸಿದರು.

'ನಾವು ಅಸ್ಲಾಂ ಭಾಯ್ ಅವರ ಕುಟುಂಬ ಸದಸ್ಯರನ್ನು ಭೇಟಿಯಾದೆವು, ಮತ್ತು ಅವರು ಕೋಪಗೊಂಡಿರುವುದು ಕಂಡುಬಂದಿದೆ..ಅವರಿಗೆ ಯಾವುದೇ ರಾಜಕಾರಣಿಗಳ ಮೇಲೆ ನಂಬಿಕೆಯಿಲ್ಲ. ಕೆಳ ಹಂತದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದರೂ, ಹಿರಿಯ ಅಧಿಕಾರಿಗಳಿಗೆ ಏನೂ ಆಗುವುದಿಲ್ಲ ಎಂದು ಅವರು ವಾದಿಸುತ್ತಾರೆ' ಎಂದು ಎನ್‌ಸಿಪಿ (ಎಸ್‌ಪಿ) ಶಾಸಕರು ಹೇಳಿದರು. ಈ ಮಧ್ಯೆ ಶೇಖ್ ಅವರ ಪತ್ನಿ ಘಟನೆಗೆ ಬೃಹನ್‌ಮುಂಬಯಿ ಮುನ್ಸಿಪಲ್ ಕಾರ್ಪೋರೇಷನ್ (ಬಿಎಂಸಿ) ಹೊಣೆಗಾರನಾಗಿದ್ದು,ತೆರೆದ ಮ್ಯಾನ್‌ಹೋಲ್‌ಗಳನ್ನು ಸರಿಯಾಗಿ ಸುರಕ್ಷಿತಗೊಳಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಅಧಿಕಾರಿಗಳನ್ನು ಒತ್ತಾಯಿಸಿದರು.

'ಎಲ್ಲಿಯೂ ಮ್ಯಾನ್‌ಹೋಲ್‌ಗಳನ್ನು ಇಡಬೇಡಿ. ತೆರೆದ ಮ್ಯಾನ್‌ಹೋಲ್ ಇದ್ದರೆ, ಅದು ಬಿಎಂಸಿಯ ತಪ್ಪು. ಸಾಮಾನ್ಯ ಜನರ ಬಗ್ಗೆಯೂ ಕಾಳಜಿ ವಹಿಸಿ. ಯಾರೂ ಮ್ಯಾನ್‌ಹೋಲ್‌ಗೆ ಬೀಳದಂತೆ ಏನಾದರೂ ಮಾಡಿ. ತೆರೆದ ಮ್ಯಾನ್‌ಹೋಲ್‌ಗಳು ಸಾವಿಗೆ ಕಾರಣವಾಗುತ್ತಿವೆ' ಎಂದು ಅವರು ಹೇಳಿದರು.

ವಾಶಿಮ್: 2011ರ ಕಸ್ಟಡಿ ಸಾವು ಪ್ರಕರಣ, 9 ಪೊಲೀಸರಿಗೆ ಜೀವಾವಧಿ ಶಿಕ್ಷೆ ತೀರ್ಪು

ವಾಶಿಮ್, ಜು. 3- ಮಹಾರಾಷ್ಟ್ರದ ವಾಶಿಮ್ ಜಿಲ್ಲೆಯ ನ್ಯಾಯಾಲಯವೊಂದು 2011ರ ಕಸ್ಟಡಿ ಸಾವು ಪ್ರಕರಣದಲ್ಲಿ 9 ಪೊಲೀಸರಿಗೆ ಜೀವಾವಧಿ ಶಿಕ್ಷೆ ತೀರ್ಪು ನೀಡಿದ್ದು, ಪೊಲೀಸರ ಕೃತ್ಯವು ಸಾರ್ವಜನಿಕ ಕರ್ತವ್ಯಕ್ಕೆ ತೀರಾ ವ್ಯತಿರಿಕ್ತವಾಗಿದ್ದು ''ಗಂಭೀರ ಮತ್ತು ಬರ್ಬರ'' ಎಂದು ಪೊಲೀಸರಿಗೆ ಛೀಮಾರಿ ಹಾಕಿದೆ.

ಹೆಚ್ಚುವರಿ ಸೆಶನ್ಸ್ ನ್ಯಾಯಾಧೀಶ ಜೆ.ಪಿ. ಝುಪಾಟೆ ಅವರು 9 ಆರೋಪಿಗಳು ಹತ್ಯೆ, ತಪ್ಪಾದ ತಡೆ, ತಪ್ಪು ಬಂಧನ, ಹಫ್ತಾ ವಸೂಲಿಗೆ ಗಂಭೀರ ಗಾಯ ಮತ್ತು ಸಾಕ್ಷ್ಯ ನಾಶ ಅಪರಾಧಿಗಳು ಎನ್ನುವುದು ಭಾರತೀಯ ದಂಡ ಸಂಹಿತೆ ಸೆಕ್ಷನ್‌ಗಳಡಿ ಸಾಬೀತಾಗಿದೆ ಎಂದು ತೀರ್ಪು ನೀಡಿದ್ದಾರೆ. ಆರೋಪಿ ಪೊಲೀಸರ ಪರವಾಗಿ ಪ್ರತಿವಾದಿ ವಕೀಲರುಗಳು ಪೊಲೀಸ್ ಸಿಬ್ಬಂದಿಗಳು ತಮ್ಮ ಕರ್ತವ್ಯ ನಿರ್ವಹಿಸಿದ್ದರು ಎಂದು ವಾದಿಸಿದ್ದನ್ನು ನ್ಯಾಯಾಧೀಶರು ತಳ್ಳಿ ಹಾಕಿದರು. ಪೊಲೀಸ್ ಅಧಿಕಾರಿಗಳು ಅಮಾಯಕ ನಾಗರಿಕರ ರಕ್ಷಕರಾಗಿದ್ದಾರೆ. ಆದರೆ ಅವರು ಬೆಗ್ಯಾ ಪವಾರ್‌ನ ಮೇಲೆ ಥಳಿಸಿದ್ದರಿಂದ ಆತ ಮೃತಪಟ್ಟಿದ್ದರು. ಇದರಿಂದಾಗಿ ಈ ಪ್ರಕರಣದಲ್ಲಿ ಪೊಲೀಸರು ನಡೆಸಿರುವುದು ಸಾರ್ವಜನಿಕ ಕರ್ತವ್ಯ ಅಲ್ಲ ಎಂದು ಕೋರ್ಟ್ ತೀರ್ಪಲ್ಲಿ ಹೇಳಿದೆ.

ಆರೋಪಿಗಳು ಮಾಡಿರುವ ಅಪರಾಧ ''ಗಂಭೀರ ಮತ್ತು ಅಮಾನುಷ'' ಕೃತ್ಯವಾಗಿದೆ ಎಂದು ನ್ಯಾಯಾಧೀಶರು ಹೇಳಿದ್ದು, ಮೃತ ವ್ಯಕ್ತಿ ಮೇಲೆ ಪೊಲೀಸರ ಹಲ್ಲೆಯಿಂದ 44 ಗಾಯಗಳಾಗಿದ್ದವು ಎಂದು ಬೊಟ್ಟು ಮಾಡಿದ್ದಾರೆ.

ಇದು ಪೊಲೀಸ್ ಕಸ್ಟಡಿಯಲ್ಲಿ ಪೊಲೀಸರು ನಡೆಸಿರುವ ಹತ್ಯೆ ಎಂದು ನ್ಯಾಯಾಧೀಶರು ಆದೇಶದಲ್ಲಿ ಹೇಳಿದ್ದಾರೆ. ಜೀವಾವಧಿ ಶಿಕ್ಷೆ ತೀರ್ಪಿಗೆ ಒಳಪಟ್ಟ ಪೊಲೀಸರುಗಳೆಂದರೆ ರಿಸೋಡ್ ಪೊಲೀಸ್ ಠಾಣೆಯ ಆಗಿನ ಉಸ್ತುವಾರಿ ಮಾಧವ್ ಧಾಂಡೆ ಮತ್ತು ಸಿಬ್ಬಂದಿಗಳಾದ ಮದನ್ ಪವಾರ್, ಶಿವಾಜಿ ಖಿಲ್ಲಾರಿ, ಪಂಜಾಬ್ ಪಾಟ್ಕರ್, ರಮೇಶ್ ಪವಾರ್, ಪ್ರಕಾಶ್ ಪರಮ್, ನಾಗೇರಾವ್ ಖಂಡ್ಕೆ, ಅಶೋಕ್ ವೈದ್ಯ ಮತ್ತು ವಸಂತ್ ಜಾಧವ್.

ಪೊಲೀಸ್ ಕಸ್ಟಡಿಯಲ್ಲಿ ಬೆಗ್ಯಾ ಪವಾರ್ ಮೃತಪಟ್ಟಿದ್ದಾಗಿ ಸಿಐಡಿ ತನಿಖೆಯಿಂದ 2011ರ ಜೂನ್ 14ರಂದು ಬೆಳಕಿಗೆ ಬಂದಿತ್ತು.

ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರನ್ನು ಭೇಟಿಯಾದ ರಾಜೇಂದ್ರ. ವಿ. ಶೆಟ್ಟಿ



ಪುಣೆ, ಜು.3- ಹುಬ್ಬಳ್ಳಿ -ಧಾರವಾಡ ಬಂಟರ ಸಂಘದ ನೂತನ ಅಧ್ಯಕ್ಷರು, ಶ್ರೀ ಪಂಜುರ್ಲಿ ಸಮೂಹದ ಹೊಟೇಲ್ ಮಾಲಕರಾದ ರಾಜೇಂದ್ರ. ವಿ. ಶೆಟ್ಟಿಯವರು ಮಹಾರಾಷ್ಟ್ರದ ಅಹಮ್ಮದ್‌ನಗರ ಜಿಲ್ಲೆ, ರಾಳೇಗಣ ಸಿದ್ಧಿ ಗ್ರಾಮಕ್ಕೆ ಹೋಗಿ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆದರು. ಅಣ್ಣಾ ಹಜಾರೆ ಅವರ ಅಪಾರ ಅಭಿಮಾನಿಯಗಿ ಪ್ರಾಮಾಣಿಕತೆ, ಭ್ರಷ್ಟಾಚಾರದ ವಿರುದ್ಧ ಹೋರಾಟ ಹಾಗೂ ಅವರ ಆದರ್ಶಗಳನ್ನೇ ಅನುಸರಿಸುತ್ತಾ ಬಂದ ರಾಜೇಂದ್ರ. ವಿ. ಶೆಟ್ಟಿಯವರು ತಮ್ಮ ಸಾಮಾಜಿಕ ಸೇವೆಗಳನ್ನು ತಿಳಿಸಿದರು.

ಐದು ಖಂಡಗಳ ಜನರು ತಮ್ಮ ದೇಶದಲ್ಲಿ ಆರ್‌ಎಸ್‌ಎಸ್ ಸ್ವಯಂಸೇವಕರಿಂದ ತರಬೇತಿ ಬಯಸುತ್ತಾರೆ: ಭಾಗವತ್

ನಾಗ್ಪುರ, ಜು.3 - ಐದು ಖಂಡಗಳ ಜನರು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ಕ್ಕೆ ಭೇಟಿ ನೀಡಿದ್ದು, ಮತ್ತು ಅದರ ಸ್ವಯಂಸೇವಕರು ತಮ್ಮ ದೇಶಗಳಲ್ಲಿನ ಜನರಿಗೆ ತರಬೇತಿ ನೀಡಲು ಸಹಾಯ ಮಾಡಬಹುದೇ ಎಂದು ಕೇಳಿರುವುದಾಗಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.



'ವಿದೇಶಗಳಿಂದಲೂ ಜನರು ಕಾಲಕಾಲಕ್ಕೆ ಆರ್‌ಎಸ್‌ಎಸ್‌ನ ಕೆಲಸವನ್ನು ನೋಡಲು ಬರುತ್ತಾರೆ. ಐದು ಖಂಡಗಳ ಜನರು ಭೇಟಿ ನೀಡಿದ್ದಾರೆ ಮತ್ತು ಆರ್‌ಎಸ್‌ಎಸ್ ಜನರು ತಮ್ಮ ಸ್ವಂತ ಸಮಾಜಗಳಲ್ಲಿ ಸ್ವಯಂಸೇವಕರನ್ನು ರಚಿಸಲು ತಮ್ಮ ಜನರಿಗೆ ತರಬೇತಿ ನೀಡುತ್ತಾರೆಯೇ ಎಂದು ಕೇಳಿದ್ದಾರೆ. ಅವರು ಭೇಟಿ ನೀಡಿದಾಗಲೆಲ್ಲಾ ಅವರು ಕೇಳುವ ಪ್ರಶ್ನೆ ಇದು'ಎಂದು ಭಾಗವತ್ ತಿಳಿಸಿದ್ದಾರೆ.

ಅವರು ನಾಗ್ಪುರದಲ್ಲಿ ' ಡಾ. ಹೆಡ್ಗೇವಾರ್: ಆಧುನಿಕ್ ಯುಗ್ ಕೆ ಶಾಲಿವಾಹನ್' ಎಂಬ ಯೂಟ್ಯೂಬ್ ವೀಡಿಯೊದ ಸಾರ್ವಜನಿಕ ಪ್ರಸಾರದ ಸಂದರ್ಭದ ಸಭೆಯಲ್ಲಿ ಮಾತನಾಡುತ್ತಿದ್ದರು. ಈ ಕಾರ್ಯಕ್ರಮದ ಸಂದರ್ಭದಲ್ಲಿ, ಭಾಗವತ್ ಸಂಸ್ಥೆಯ ಶತಮಾನೋತ್ಸವ ಆಚರಣೆಯ ಭಾಗವಾಗಿ ಆರ್‌ಎಸ್‌ಎಸ್ ಪ್ರಚಾರಕರ ಜೀವನದ ಕುರಿತು 100 ವೀಡಿಯೊಗಳನ್ನು ಬಿಡುಗಡೆ ಮಾಡಿದರು.

ಭಾರತವು ಅದಕ್ಕೆ ಸರಿಯಾದ ಮಾರ್ಗವನ್ನು ತೋರಿಸುತ್ತದೆ ಎಂದು ಜಗತ್ತು ನಂಬುತ್ತದೆ, ಆದರೆ ಭಾರತವು ಅದೇ ಹಾದಿಯಲ್ಲಿ ನಡೆದಾಗ, ಶಕ್ತಿಯನ್ನು ಪಡೆದಾಗ ಮತ್ತು ಸಮೃದ್ಧವಾದಾಗ ಮಾತ್ರ ಅವರು ಅದನ್ನು ಮಾಡುತ್ತಾರೆ ಎಂದು ಅವರು ಹೇಳಿದರು.

ಇದು ಸಂಭವಿಸಬೇಕಾದರೆ, ಆರ್‌ಎಸ್‌ಎಸ್ ತನ್ನ ಶತಮಾನೋತ್ಸವ ವರ್ಷದಲ್ಲಿ ತನ್ನ ಕೆಲಸವನ್ನು ವಿಸ್ತರಿಸಬೇಕು ಎಂದು ಭಾಗವತ್ ತಿಳಿಸಿದರು.

ಸಮಾಜವು ಕ್ರಮೇಣ ಸಂಘಟನೆಯನ್ನು ಸ್ವೀಕರಿಸುತ್ತಿದೆ ಮತ್ತು ಗೌರವವನ್ನು ಪಡೆಯುತ್ತಿದೆ ಮತ್ತು ಸಂಘವು ಅದರ ಆರಂಭಿಕ ವರ್ಷಗಳಲ್ಲಿ ಎದುರಿಸಿದ ಉದಾಸೀನತೆ ಮರೆಯಾಗುತ್ತಿದೆ ಎಂದು ಅವರು ಹೇಳಿದರು.

ಆರ್‌ಎಸ್‌ಎಸ್ ಮತ್ತು ಅದರ ಕಾರ್ಯಕರ್ತರಿಗೆ ಪ್ರಮುಖ ಆದ್ಯತೆಯೆಂದರೆ ವಿವಿಧ ಕ್ಷೇತ್ರಗಳಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುವ ಸಾಮರ್ಥ್ಯವಿರುವ ವ್ಯಕ್ತಿಗಳನ್ನು ಸೃಷ್ಟಿಸುವುದು ಎಂದು ಭಾಗವತ್ ಹೇಳಿದರು.

ಆರ್‌ಎಸ್‌ಎಸ್ ವಿವಿಧ ಸಂಸ್ಥೆಗಳನ್ನು ದೂರದಿಂದಲೇ ನಿಯಂತ್ರಿಸುತ್ತದೆ ಎಂಬ ಗ್ರಹಿಕೆಯನ್ನು ಉಲ್ಲೇಖಿಸಿದ ಅವರು, ಅದರ ಸಂಸ್ಥಾಪಕ ಕೇಶವ್ ಬಲಿರಾಮ್ ಹೆಡ್ಗೇವಾರ್ ಅವರು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ ಮತ್ತು ವಿವಿಧ ರೀತಿಯ ಸಾಮಾಜಿಕ ಕಾರ್ಯಗಳನ್ನು ಉಳಿಸಿಕೊಳ್ಳಲು ಬದ್ಧ ವ್ಯಕ್ತಿಗಳು ಅಗತ್ಯವಿದೆ ಎಂದು ಅರಿತುಕೊಂಡಿದ್ದಾರೆ ಎಂದು ಅವರು ಹೇಳಿದರು. ಆರ್‌ಎಸ್‌ಎಸ್ 'ಶಾಖೆ'ವನ್ನು ಸಂಘಟನೆಯ ಜೀವನ ವಿಧಾನದ ಪ್ರಯೋಗಾಲಯ ಎಂದು ವಿವರಿಸಿದ ಭಾಗವತ್, ಸ್ವಯಂಸೇವಕರು ಅನುಕೂಲಕರ ಅಥವಾ ಪ್ರತಿಕೂಲ ಸಂದರ್ಭಗಳನ್ನು ಲೆಕ್ಕಿಸದೆ ಆರ್‌ಎಸ್‌ಎಸ್ ಜೀವನವನ್ನು ಬದುಕಲು ಕಲಿಯುತ್ತಾರೆ ಎಂದು ಹೇಳಿದರು.

ಹೆಡ್ಗೇವಾರ್ ಅವರು ಧರ್ಮೋಪದೇಶ ಮಾಡುವ ಬದಲು ಮಾದರಿಯಾಗಿ ಮುನ್ನಡೆಸಿದರು ಮತ್ತು ಸಂಘಟನೆಗೆ ಸಮರ್ಪಣೆ ಮಾಡುವ ಮೂಲಕ ತಮ್ಮದೇ ಆದ ಮನೋಧರ್ಮವನ್ನು ಪರಿವರ್ತಿಸಿಕೊಂಡರು ಎಂದು ಭಾಗವತ್ ತಿಳಿಸಿದರು.

ಹಿಂದೂ ರಾಷ್ಟ್ರದ ಭಾಗವಾಗಿರುವವರು ತಮ್ಮ ಶಕ್ತಿಯನ್ನು ಒಗ್ಗೂಡಿಸಿ ದೇಶದ ಧರ್ಮವನ್ನು ರಕ್ಷಿಸಬೇಕು, ಧರ್ಮವನ್ನು ಆಚರಣೆಯಿಂದ ಮಾತ್ರ ರಕ್ಷಿಸಬಹುದು ಎಂದು ಅವರು ಹೇಳಿದರು.

ಹೊಸಬೆಟ್ಟು ಕೆ. ಆರ್. ಪುತ್ರನ್ ನಿಧನ




ಮಂಗಳೂರು, ಜು. 3- ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿಯ ಮಾಜಿ ಅಧ್ಯಕ್ಷ ಹೊಸಬೆಟ್ಟು ಕೆ. ಆರ್. ಪುತ್ರನ್ (94) ಜುಲೈ 3ರ ಶುಕ್ರವಾರದಂದು ಮಂಗಳೂರಿನಲ್ಲಿ ನಿಧನರಾದರು.

ಕೆ. ಆರ್. ಪುತ್ರನ್ ಅವರು ಪುತ್ರ ಹಾಗೂ ಈರ್ವರು ಪುತ್ರಿಯರನ್ನು ಹಾಗೂ ಬಂಧು-ಬಾಂಧವರನ್ನು ಅಗಲಿದ್ದಾರೆ. ಮೊಗವೀರ ಮಂಡಳಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ 3 ದಶಕಗಳ ಕಾಲ ತಮ್ಮ ಸಮಯವನ್ನು ನೀಡಿ ಮಂಡಳಿಯನ್ನು ಶಿಸ್ತುಬದ್ಧ ನೀತಿಯಿಂದ ಸಮೃದ್ಧಗೊಳಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಸಿಎ ಕಂಪನಿಯಲ್ಲಿ ಕೆಳಸ್ತರದ ಸಿಬ್ಬಂದಿಯಾಗಿ ಸೇರಿ ಪ್ರತಿಭೆ ಮತ್ತು ಸಾಧನೆಯಿಂದ ಸಿಎ ಪದವಿ ಗಳಿಸಿ ಅದೇ ಕಂಪೆನಿಯಲ್ಲಿ ಪಾಲುದಾರರಾಗಿ ನೇಮಕಗೊಂಡ ಓರ್ವ ಅಪರೂಪದ ರಾತ್ರಿ ಶಾಲೆಯ ವಿದ್ಯಾರ್ಥಿ.

ಅನೇಕ ಸಂಘಟನೆಗಳಿಗೆ ಆರ್ಥಿಕ ಮಾರ್ಗದರ್ಶಕರಾಗಿದ್ದ ಅವರ ನಿಧನಕ್ಕೆ ಮೊಗವೀರ ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷ ಗಣೇಶ್ ಕಾಂಚನ್ ಹಾಗೂ ಸದಸ್ಯರು, ವಿವಿಧ ಸಂಘಟನೆಗಳ ಮುಖ್ಯಸ್ಥರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕಾಂದಿವಿಲಿ : ಶ್ರೀಧರ್ ಬಿ. ನಾಯಕ್ ನಿಧನ

ಮುಂಬಯಿ, ಜು. 3- ಕಾಂದಿವಿಲಿ ಪಶ್ಚಿಮದ ದಹನುಕರ್‌ವಾಡಿ ಶುಭ್‌ಶಾಂತಿ ಕಾಂಪ್ಲೆಕ್ಸ್‌ನ ಶ್ರೀಧರ್ ಬಿ. ನಾಯಕ್ (85) ಅವರು ವಯೋಸಹಜ ವೃದ್ಯಾಪ್ಯದ ಅಸೌಖ್ಯದಿಂದ ಜುಲೈ 3ರಂದು ನಿಧನರಾಗಿದ್ದಾರೆ.



ಮೂಲತಹ ಶಿಭರೂರು ಕುರಿಯಾರ ಗುತ್ತುವಿನವರಾದ ಅವರು ಕಷ್ಟಮ್ಸ್ ಡಿಪಾರ್ಟಮೆಂಟ್‌ನಲ್ಲಿ ಸುಪ್ರೀಂಟೆನ್ಡೆಂಟ್ ಆಗಿದ್ದು ನಿವೃತ್ತಿ ಹೊಂದಿದ್ದರು.

ಅವರು ಪಯ್ಯಡೆ ಕುಟುಂಬದ ಹಿರಿಯರಾದ ಕೇಶವ ಎಸ್. ಪಯ್ಯಡೆ, ಪದ್ಮನಾಭ ಎಸ್. ಪಯ್ಯಡೆ , ಗಂಗಾಧರ ಪಯ್ಯಡೆ , ಮುಂಡಪ್ಪ ಎಸ್. ಪಯ್ಯಡೆ ಮತ್ತು ಸಹ ಸಹೋದರ ಮನೋಹರ ಎನ್. ಶೆಟ್ಟಿ, ಅವರ ಭಾವನವರು.

ಮೃತರು ಪತ್ನಿ ಪುಷ್ಪಾವತಿ ಎಸ್ ನಾಯಕ್, ಇಬ್ಬರು ಪುತ್ರಿಯರಾದ ವಿದ್ಯಾ ಕಿರಣ್ ಶೆಟ್ಟಿ ಮತ್ತು ಪೂಜಾ ರಾಕೇಶ್ ಶೆಟ್ಟಿ ಅಳಿಯಂದಿರು, ಮೊಮ್ಮಕ್ಕಳು, ಮತ್ತು ಸಹೋದರರಾದ ಕೇಶವ ಬಿ. ನಾಯಕ್, ಸಹೋದರಿ ಸರವಾಣಿ ಕೆ. ಶೆಟ್ಟಿ ಮತ್ತು ಪರಿವಾರ ವರ್ಗ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತಿಮ ಕ್ರಿಯೆಯು ಜುಲೈ 4 ಶನಿವಾರ ಮಧ್ಯಾಹ್ನ ಅವರ ತವರೂರಿನ ಸ್ವಗೃಹದಲ್ಲಿ ಜರಗಲಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.

ರಾಮನಗರದಲ್ಲಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಗಂಭೀರ ಅಕ್ರಮ : ಪ್ರಹ್ಲಾದ್ ಜೋಶಿ



ಹೊಸದಿಲ್ಲಿ, ಜು. 3 - ರಾಮನಗರ ಜಿಲ್ಲೆಯಲ್ಲಿ ನಡೆದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಗಂಭೀರ ಅಕ್ರಮಗಳು ನಡೆದಿರುವುದಾಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪಿಸಿದ್ದಾರೆ.

ಪ್ರಜಾಪ್ರಭುತ್ವದ ಮೂಲ ತತ್ವಗಳಿಗೆ ಧಕ್ಕೆ ತರುವ ರೀತಿಯಲ್ಲಿ ಈ ಕಾರ್ಯ ನಡೆದಿದೆ ಎಂದು ಅವರು ಕಿಡಿಕಾರಿದ್ದಾರೆ.

ಬೂತ್ ಮಟ್ಟದ ಅಧಿಕಾರಿಗಳ ದುರುಪಯೋಗ

ಚುನಾವಣಾ ಆಯೋಗದ ನಿಯಮಾವಳಿ ಹಾಗೂ ಮಾರ್ಗಸೂಚಿಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಪರಿಷ್ಕರಣೆ ನಡೆಸಲಾಗಿದೆ. ಬಿಎಲ್‌ಒ ಅಧಿಕಾರಿಗಳನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಂಡು, ಕಾನೂನು ಬಾಹಿರ ರೀತಿಯಲ್ಲಿ ಕಾರ್ಯ ನಡೆದಿದೆ ಎಂದು ಜೋಶಿ ಆರೋಪಿಸಿದರು.

ರಾಜ್ಯ ಸರ್ಕಾರದ ಹಸ್ತಕ್ಷೇಪ?

ಸ್ವತಂತ್ರವಾಗಿ ನಡೆಯಬೇಕಾದ ಸಾಂವಿಧಾನಿಕ ಪ್ರಕ್ರಿಯೆಯಲ್ಲಿ ರಾಜ್ಯ ಸರ್ಕಾರ ನೇರವಾಗಿ ಹಸ್ತಕ್ಷೇಪ ಮಾಡಿದೆ ಎಂದು ಅವರು ದೂರಿದರು. ರಾಜಕೀಯ ಲಾಭಕ್ಕಾಗಿ ಮತದಾರರ ಪಟ್ಟಿಯನ್ನು ತಿರುಚುವ ಸಂಚು ರೂಪಿಸಲಾಗಿದೆ. ಸ್ಥಳೀಯ ಆಡಳಿತದ ಮೇಲೆ ಒತ್ತಡ ಹೇರಲಾಗಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಪಾರದರ್ಶಕ ತನಿಖೆಗೆ ಒತ್ತಾಯ

ಸಾಮಾನ್ಯ ಮತದಾರರ ಧ್ವನಿಯನ್ನು ಹತ್ತಿಕ್ಕುವ ಈ ಹಗರಣದ ಹಿಂದೆ ಯಾರ ಹಿತಾಸಕ್ತಿಗಳು ಅಡಗಿವೆ ಎಂಬುದನ್ನು ಪತ್ತೆಹಚ್ಚಬೇಕು. ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆ ಮತ್ತು ಪಾವಿತ್ರ್ಯಕ್ಕೆ ಧಕ್ಕೆ ತರುವ ಈ ಪ್ರಕರಣದಲ್ಲಿ ತಕ್ಷಣವೇ ನಿಷ್ಪಕ್ಷಪಾತ ತನಿಖೆ ನಡೆಯಬೇಕು ಎಂದು ಜೋಶಿ ಆಗ್ರಹಿಸಿದರು.

ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ಎಸ್.ಐ.ಆರ್ ಅಕ್ರಮ : ಕುಮಾರಸ್ವಾಮಿ ಆರೋಪ

ರಾಮನಗರ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು, ಜು. 3 - ರಾಮನಗರ ಸೇರಿದಂತೆ ರಾಜ್ಯದ ವಿವಿಧೆಡೆ ರಾಜ್ಯ ಸರಕಾರ ಕೇಂದ್ರೀಯ ಚುನಾವಣಾ ಆಯೋಗದ ಮಾರ್ಗಸೂಚಿಯನ್ನು ಗಾಳಿಗೆ ತೂರಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ನಡೆಸುತ್ತಿದ್ದು, ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದರು.

ಅಲ್ಲದೆ, ಕೆಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು ರಾಜ್ಯ ಸರಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ದೂರಿದ ಸಚಿವರು; ಈ ಬಗ್ಗೆ ಕೇಂದ್ರ ಚುನಾವಣಾ ಆಯುಕ್ತರಿಗೆ ಖುದ್ದು ನಾನೇ ಹೋಗಿ ದೂರು ನೋಡುತ್ತೇನೆ. ಇಡೀ ಎಸ್ ಐಆರ್ ಅಕ್ರಮದ ಮೂಲ ಸೂತ್ರದಾರಿ ಈ ರಾಜ್ಯದ ಮುಖ್ಯಮಂತ್ರಿಯೇ ಆಗಿದ್ದಾರೆ ಎಂದು ಆರೋಪಿಸಿದರು.

ಜೆಡಿಎಸ್ ಪಕ್ಷದ ರಾಜ್ಯ ಕಚೇರಿ ಜೆ.ಪಿ. ಭವನದಲ್ಲಿ ತುರ್ತು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವರು; ಬೆಂಗಳೂರು ನಗರದ ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ನಡೆಯುತ್ತಿರುವ ಎಸ್‌ಐಆರ್‌ನ ಅಕ್ರಮ ಪ್ರಕ್ರಿಯೆಯ ವಿಡಿಯೋ ದಾಖಲೆಗಳ ಮಾಹಿತಿ ನೀಡಿ ಅದಕ್ಕೆ ಸಂಬಂಧಿಸಿದ ವಿಡಿಯೋಗಳನ್ನು ಮಾಧ್ಯಮಗಳ ಮುಂದೆ ಪ್ರದರ್ಶಿಸಿದರು.

ಈ ಸರಕಾರವು ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದೆ. ಅವರನ್ನು ಹೆದರಿಸಿ ಬೆದರಿಸಿ ತನಗೆ ಬೇಕಾದ ಹಾಗೆ ಎಸ್‌ಐಆರ್ ಮಾಡಿಸಿಕೊಳ್ಳುತ್ತಿದೆ. ಆದ್ದರಿಂದ ಈ ಕೂಡಲೇ ರಾಜ್ಯದ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆಯ ಪ್ರಕ್ರಿಯೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮಧ್ಯಪ್ರವೇಶಿಸಬೇಕು ಹಾಗೂ ಈವರೆಗೂ ಆಗಿರುವ ಪರಿಷ್ಕರಣೆಯನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸದಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸಬೇಕು. ರಾಮನಗರ ಬೆಂಗಳೂರ್ ನಗರ ಜಿಲ್ಲೆಗಳ ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮ ಜರಗಿಸಬೇಕು ಕೇಂದ್ರ ಸಚಿವರು ಆಗ್ರಹಪಡಿಸಿದರು.

ಯಶವಂತಪುರ ವಿಧಾನಸಭೆ ಕ್ಷೇತ್ರದಲ್ಲಿ ನೇರವಾಗಿ ಕ್ಷೇತ್ರದ ಶಾಸಕರ ಸೂಚನೆಯ ಮೇರೆಗೆ ಅಕ್ರಮವಾಗಿ



ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪರಿಷ್ಕರಣೆ ಸಿಬ್ಬಂದಿ ಪರಸ್ಪರ ಶಾಮೀಲಾಗಿ ಪರಿಷ್ಕರಣೆಯನ್ನು ಸಂಪೂರ್ಣವಾಗಿ ತಿರುಚುತ್ತಿದ್ದಾರೆ ಎಂದು ಸಚಿವ ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು.

ರಾಜ್ಯದಲ್ಲಿ ಮತದಾರರ ಪಟ್ಟಿಯ ತೀವ್ರ ಪರಿಷ್ಕರಣೆ ಪಾರದರ್ಶಕವಾಗಿ ನಡೆಯುತ್ತಿಲ್ಲ ಹಾಗೂ ಸಿಬ್ಬಂದಿ ಮನೆಮನೆಗೂ ತೆರಳಿ ಮಾಹಿತಿ ಪಡೆಯುತ್ತಿಲ್ಲ. ರಾಜ್ಯ ಕಾಂಗ್ರೆಸ್ ಸರಕಾರ ಪರಿಷ್ಕರಣೆ ಸಿಬ್ಬಂದಿಯ ಮೇಲೆ ಒತ್ತಡ ತಂದು ತನಗೆ ಬೇಕಾದ ಹಾಗೆ ಮನಸೋ ಇಚ್ಛೆಯಂತೆ ಮತದಾರರ ಪಟ್ಟಿಯನ್ನು ಪರಿಷ್ಕರಣೆ ಮಾಡಿಸಿಕೊಳ್ಳುತ್ತಿದೆ. ಇದು ಕೇಂದ್ರೀಯ ಚುನಾವಣಾ ಆಯೋಗದ ಮಾರ್ಗಸೂಚಿಗೆ ಸಂಪೂರ್ಣವಾಗಿ ತದ್ವಿರುದ್ಧವಾಗಿದೆ ಎಂದು ಅವರು ದೂರಿದರು.

ನಿನ್ನೆಯ ದಿನ ರಾಮನಗರದ ಛತ್ರದಲ್ಲಿ ಎಸ್‌ಐಆರ್‌ಜಾತ್ರೆ ಮಾಡುತ್ತಿರುವ ದೃಶ್ಯಗಳನ್ನು ನಾನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದೆ. ಇವತ್ತು ಯಶವಂತಪುರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ಮಾಧ್ಯಮಗಳ ಮುಂದೆ ಇಡುತ್ತಿದ್ದೇನೆ. ಸ್ವತಃ ಕ್ಷೇತ್ರದ ಶಾಸಕರ ಫೋಟೋಗಳನ್ನು ಮುಂದಿಟ್ಟುಕೊಂಡು ಎಸ್‌ಐಆರ್‌ಮಾಡಲಾಗುತ್ತಿದೆ. ಇದು ಯಾವ ಸೀಮೆಯ ಎಸ್‌ಐಆರ್‌ಎಂದು ಕೇಂದ್ರ ಸಚಿವರು ತೀಕ್ಷ್ಣವಾಗಿ ಪ್ರಶ್ನಿಸಿದರು.

ಜೆಡಿಎಸ್, ಬಿಜೆಪಿ ಸಮ್ಮಿಶ್ರ ಸರ್ಕಾರ ಇದ್ದಾಗ ಅಲ್ಲಿನ ಶಾಸಕರು ರಾತ್ರೋರಾತ್ರಿ ಚೆನ್ನೈಗೆ ಕದ್ದು ಹೋಗಿ ತಮ್ಮ ಕ್ಷೇತ್ರ ಅಭಿವೃದ್ಧಿ ಆಗಬೇಕು ಎಂದು ಹೇಳಿ ಬಿಜೆಪಿ ಸೇರಿಕೊಂಡರು. ಅಲ್ಲಿ ಮೂರು ವರ್ಷ ಸಚಿವರಾಗಿ ಅಧಿಕಾರ ಅನುಭವಿಸಿದ ಮೇಲೆ ಬಿಜೆಪಿಯನ್ನು ಬಿಟ್ಟು ಕಾಂಗ್ರೆಸ್ ಕಡೆ ವಾಲಿದ್ದಾರೆ. ಇದು ಯಾವ ರೀತಿಯ ಡೆವಲಪ್ಮೆಂಟ್ ರಾಜಕೀಯವು ನನಗೆ ಗೊತ್ತಿಲ್ಲ. ಪಾಪ.. ಅವರು ಬಹಳ ಚೆನ್ನಾಗಿ ಮಾತನಾಡುತ್ತಾರೆ ಎಂದು ಸಚಿವರು ಟೀಕಿಸಿದರು.

ಈಗ ಯಶವಂತಪುರದಲ್ಲಿ ಶಾಸಕರ ಪುಸ್ತಕಗಳು, ಅವರೇ ಕೊಟ್ಟ ಮತದಾರರ ಪಟ್ಟಿಯನ್ನುಇಟ್ಟುಕೊಂಡು ಅಧಿಕಾರಿಗಳು ಎಸ್‌ಐಆರ್ ಮಾಡುತ್ತಿದ್ದಾರೆ. ಈ ಸರಕಾರ ಎಲ್ಲಾ ಅಧಿಕಾರಿಗಳಿಗೆ ಹೀಗೆಯೇ ಎಸ್ ಐಆರ್ ಮಾಡಬೇಕು ಎಂದು ತಯಾರು ಮಾಡಿ ಕಳಿಸಿದ್ದಾರೆ. ಇವತ್ತು ಯಶವಂತಪುರ ಕ್ಷೇತ್ರದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯನ್ನು ನಿಯಮಗಳಿಗೆ ಶುದ್ಧವಾಗಿ ನಡೆಸುತ್ತಿದ್ದ ಅಧಿಕಾರಿಯನ್ನು ನಮ್ಮ ಕಾರ್ಯಕರ್ತರು ರೆಡ್ ಹ್ಯಾಂಡ್ ಆಗಿ ಇಳಿಸಿಕೊಂಡಿದ್ದಾರೆ. ಆ ಅಧಿಕಾರಿ ನಮ್ಮ ಕಾರ್ಯಕರ್ತರಲ್ಲಿ ಸಾರಿ ಎಂದು ಕೇಳುತ್ತಾರೆ. ಆಮೇಲೆ ಇನ್ನೊಬ್ಬ ಅಧಿಕಾರಿ ಬಂದು ವಿಡಿಯೋ ಮಾಡಬೇಡಿ ಎಂದು ಹೇಳುತ್ತಾರೆ ಎಂದು ಕೇಂದ್ರ ಸಚಿವರು ಹರಿಹಾಯ್ದರು.

ಮುಖ್ಯಮಂತ್ರಿಗಳು ಮಹಾನ್ ಎನ್ನುವಂತೆ ಭಾಷಣ ಬಿಗಿಯುತ್ತಾರೆ. ಪಾಕಿಸ್ತಾನದ ಬಗ್ಗೆ ಮಾತನಾಡುತ್ತಾರೆ. ಹುಂಡಿ ಕಳುವಿನ ಬಗ್ಗೆ ಮಾತಾಡುತ್ತಾರೆ. ಆದರೆ ಇವರೇ ಮಾಡುತ್ತಿರುವ ಮತದಾರರ ಪಟ್ಟಿಯ ಕಳುವಿನ ಬಗ್ಗೆ ಜಾಣಮೌನ ವಹಿಸುತ್ತಾರೆ. ಇವರು ನೇರವಾಗಿ ಮತದಾರರ ಹುಂಡಿಯನ್ನೇ ಕಳ್ಳತನ ಮಾಡಲು ಹೊರಟಿದ್ದಾರೆ. ಇದಕ್ಕೆ ಏನೆಂದು ಹೇಳಬೇಕು ಎಂದು ಸಚಿವ ಕುಮಾರಸ್ವಾಮಿ ಅವರು ಕೇಳಿದರು.

ನಾನು ಕೇಂದ್ರದ ಚುನಾವಣಾ ಆಯೋಗಕ್ಕೆ ಡಿಮಾಂಡ್ ಮಾಡುತ್ತೇನೆ, ರಾಮನಗರದ ಜಿಲ್ಲಾಧಿಕಾರಿ ಹಾಗೂ ಬೆಂಗಳೂರು ನಗರದ ಜಿಲ್ಲಾಧಿಕಾರಿ ಕಠಿಣ ಕ್ರಮ ಆಗಬೇಕು. ನಾವು ಜಿಲ್ಲಾಧಿಕಾರಿಗಳು, ನಮ್ಮ ಜವಾಬ್ದಾರಿಗಳೇನು ಎಂಬ ಕನಿಷ್ಠ ಪರಿಜ್ಞಾನ ಇವರಿಗೆ ಇದೆಯಾ? ನಾನೇ ಸ್ವತಃ ಕೇಂದ್ರದ ಚುನಾವಣಾ ಆಯುಕ್ತವನ್ನು ಭೇಟಿ ಮಾಡಿ ಮನವಿ ಮಾಡುತ್ತೇನೆ.ರಾಜ್ಯದಲ್ಲಿ ನಡೆದಿರುವ ಎಲ್ಲಾ ಅಕ್ರಮಗಳನ್ನು ಅವರ ಗಮನಕ್ಕೆ ತರುತ್ತೇನೆ ಎಂದು ಸಚಿವರು ಪ್ರಶ್ನೆ ಒಂದಕ್ಕೆ ಉತ್ತರಿಸಿದರು.

ರಾಜ್ಯದ ಮತದಾರರ ಪಟ್ಟಿಯ ಪಟ್ಟಿಯ ಪರಿಷ್ಕರಣೆಯಿಂದ ಸ್ಥಳೀಯ ಅಧಿಕಾರಿಗಳನ್ನು ಹೊರಗಿಟ್ಟು ಹೊರಗಿನಿಂದ ದಕ್ಷ ಅಧಿಕಾರಿಗಳನ್ನು ನಿಯೋಜಿಸಬೇಕು. ಇಲ್ಲವಾದರೆ ಕಾಂಗ್ರೆಸ್ ಸರ್ಕಾರ ಮನಸ್ಸು ಇಚ್ಛೆ ಈ ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತದೆ ಎಂದು ದೂರಿದರು.

> 2014ರಲ್ಲಿ ನರೇಂದ್ರ ಮೋದಿ ಅವರ ಪ್ರಧಾನಿಗಳಾಗಿ ಸಂಸತ್ ಭವನ ಪ್ರವೇಶ ಮಾಡುವಾಗ ಕಟ್ಟಡದ ಮೆಟ್ಟಿಲುಗಳಿಗೆ ನಮಸ್ಕಾರ ಮಾಡಿದಂತೆ ಈ ರಾಜ್ಯದ ಮುಖ್ಯಮಂತ್ರಿಗಳು ಪ್ರಮಾಣವಚನ ಸ್ವೀಕರಿಸಿ ವಿಧಾನಸೌಧದ ಮೆಟ್ಟಲಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ್ದನ್ನು ನೋಡಿ ಈ ವ್ಯಕ್ತಿಯಲ್ಲಿ ಏನೋ ಬದಲಾವಣೆ ಆಗಿರಬೇಕು ಎಂದುಕೊಂಡಿದ್ದೆ. ಆದರೆ, ಅದು ಕೇವಲ ನಾಟಕ ಎಂಬುದು ತಿಳಿಯಲು ಹೆಚ್ಚು ದಿನ ಬೇಕಾಗಿಲ್ಲ. ರಾಜ್ಯದಲ್ಲಿ ಈ ಎಸ್‌ಐಆರ್‌ಹಳ್ಳಹಿಡಿದು ಹೋಗುತ್ತಿರುವುದಕ್ಕೆ ಈ ವ್ಯಕ್ತಿಗೆ ಮೂಲ ಸೂತ್ರಧಾರಿ ಎನ್ನುವುದು ಗೊತ್ತಾಯಿತು. ಇವರಿಗೆ ಮಾನ ಮರ್ಯಾದೆ ಇಲ್ಲ. ಬಹಳ ಬೇಸರದಿಂದ ಈ ಮಾತು ಹೇಳುತ್ತಿದ್ದೇನೆ ಎಂದು ಕೇಂದ್ರ ಸಚಿವರು ಕಟುವಾಗಿ ಟೀಕಿಸಿದರು.

ಜು. 8ರಂದು 18 ಮಂದಿ ಡಿಕೆಶಿ ಸಂಪುಟಕ್ಕೆ ಸೇರ್ಪಡೆ ಸಾಧ್ಯತೆ



ಬೆಂಗಳೂರು, ಜು. 3 - ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತ ಚರ್ಚೆಗಳು ತೀವ್ರಗೊಂಡಿದ್ದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜುಲೈ 8ರಂದು 18 ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ.

ಜುಲೈ 2ರ ರಾತ್ರಿ ದೆಹಲಿಗೆ ತೆರಳಲಿರುವ ಮುಖ್ಯಮಂತ್ರಿ, ಅಲ್ಲಿ ಎರಡು-ಮೂರು ದಿನ ಉಳಿದುಕೊಂಡು ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸೇರಿದಂತೆ ಹೈಕಮಾಂಡ್ ನಾಯಕರೊಂದಿಗೆ ಚರ್ಚೆ ನಡೆಸಲಿದ್ದಾರೆ. ಜುಲೈ 3ರಂದು ವಿದೇಶ ಪ್ರವಾಸದಿಂದ ವಾಪಸಾಗುವ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಸಂಪುಟ ವಿಸ್ತರಣೆಗೆ ಅನುಮೋದನೆ ಪಡೆಯಲಿದ್ದಾರೆ.

ಈ ಬಾರಿ 50 ವರ್ಷದೊಳಗಿನವರಿಗೆ ಅವಕಾಶ ನೀಡುವಂತೆ ರಾಹುಲ್ ಗಾಂಧಿ ಸೂಚನೆ ನೀಡಿದ್ದು, ಅದನ್ನು ಅನುಸರಿಸಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಜೂನ್ 3ರಂದು ಅಧಿಕಾರ ವಹಿಸಿಕೊಂಡಾಗ 13 ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಂಡಿದ್ದ ಶಿವಕುಮಾರ್, ಈಗ 18 ಮಂದಿಗೆ ಅವಕಾಶ ನೀಡಿ ಇನ್ನೂ ಎರಡು ಸ್ಥಾನಗಳನ್ನು ಖಾಲಿ ಇಡಲಿದ್ದಾರೆ.

ಸಂಪುಟ ವಿಸ್ತರಣೆಯ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್‌ನಡುವೆ ಚರ್ಚೆ ನಡೆದಿರುವ ಮಾಹಿತಿ ಲಭ್ಯವಾಗಿದೆ. ಕೆಲವರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಮ್ಮನ್ನು ಮಂತ್ರಿ ಮಾಡಲು ಶಿಫಾರಸು ಮಾಡುವಂತೆ ಮನವಿ ಮಾಡಿದ್ದಾರೆ.

ಬೆಳಗಾವಿಯಿಂದ ಲಕ್ಷ್ಮಣ್ ಸವದಿ, ಹುಬ್ಬಳ್ಳಿ-ಧಾರವಾಡದಿಂದ ಪ್ರಸಾದ್ ಅಬ್ಬಯ್ಯ, ಬಾಗಲಕೋಟೆಯಿಂದ ಯಶವಂತರಾಯ ಪಾಟೀಲ್-ಅಪ್ಪಾಜಿ ನಾಡಗೌಡ, ಬಳ್ಳಾರಿಯಿಂದ ನಾಗೇಂದ್ರ, ಕೊಪ್ಪಳದಿಂದ ಬಸವರಾಜ ರಾಯರೆಡ್ಡಿ, ಚಿತ್ರದುರ್ಗದಿಂದ ರಘುಮೂರ್ತಿ, ದಾವಣಗೆರೆಯಿಂದ ಎಸ್.ಎಸ್. ಮಲ್ಲಿಕಾರ್ಜುನ್/ಡಿ.ಜಿ. ಶಾಂತನಗೌಡ, ತುಮಕೂರಿನಿಂದ ಶ್ರೀನಿವಾಸ್ (ವಾಸು), ಹಾಸನದಿಂದ ಶಿವಲಿಂಗೇಗೌಡ, ಮಂಡ್ಯದಿಂದ ಚೆಲುವರಾಯಸ್ವಾಮಿ, ಚಾಮರಾಜ ನಗರದಿಂದ ಪುಟ್ಟರಂಗ ಶೆಟ್ಟಿ, ಬೆಂಗಳೂರು ನಗರದಿಂದ ಜಮೀರ್ ಅಹಮದ್/ರಿಜ್ವಾನ್ ಅರ್ಷದ್, ಕೋಲಾರದಿಂದ ಶರತ್ ಬಚ್ಚೇಗೌಡ/ಸುಬ್ಬಾರೆಡ್ಡಿ, ಶಿವಮೊಗ್ಗದಿಂದ ಬೇಳೂರು ಗೋಪಾಲಕೃಷ್ಣ, ಉತ್ತರ ಕನ್ನಡದಿಂದ ಆರ್.ವಿ. ದೇಶಪಾಂಡೆ/ ಮಾಂಕಾಳವೈದ್ಯ, ಹಾವೇರಿಯಿಂದ ರುದ್ರಪ್ಪ ಲಮಾಣಿ ಹೆಸರುಗಳು ಕೇಳಿಬಂದಿವೆ.

ಎಸ್‌ಐಆರ್ ಪಕ್ರಿಯೆಯಲ್ಲಿ ಚುನಾವಣಾ ಆಯೋಗದ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ : ಅಶೋಕ್



ಬೆಂಗಳೂರು, ಜು. 3 - ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ಚುನಾವಣಾ ಆಯೋಗದ ನಿಯಮಗಳನ್ನು ಗಾಳಿಗೆ ತೂರಲಾಗುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿದ ಅವರು, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಪಾವಿತ್ರ್ಯವನ್ನು ಹಾಳು ಮಾಡುವಂತಹ ಅಕ್ರಮಗಳು ರಾಜ್ಯದ ಹಲವೆಡೆ ನಡೆಯುತ್ತಿವೆ ಎಂದು ಹೇಳಿದ್ದಾರೆ. ಬೆಂಗಳೂರಿನಲ್ಲಿಯೂ ಸೇರಿದಂತೆ ಹಲವು ಪ್ರದೇಶಗಳಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ತೆರಳಿ ಪರಿಶೀಲನೆ ನಡೆಸಬೇಕೆಂಬ ಚುನಾವಣಾ ಆಯೋಗದ ಸ್ಪಷ್ಟ ಮಾರ್ಗಸೂಚಿಯನ್ನು ಕಡೆಗಣಿಸಿ, ಅಪಾರ್ಟ್‌ಮೆಂಟ್‌ಗಳು ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಜನರನ್ನು ಗುಂಪು ಗುಂಪಾಗಿ ಸೇರಿಸಿ ಅರ್ಜಿಗಳನ್ನು ಭರ್ತಿ ಮಾಡಿಸುತ್ತಿರುವ ವರದಿಗಳು ಬಹಿರಂಗವಾಗಿವೆ ಎಂದು ಅವರು ದೂರಿದ್ದಾರೆ.

ಇದರ ನಡುವೆ ಸೈಬರ್ ಕೇಂದ್ರಗಳಲ್ಲಿ ನಕಲಿ ಜನನ ಪ್ರಮಾಣಪತ್ರಗಳು, ವಾಸಸ್ಥಳ ದೃಢೀಕರಣ ಪತ್ರಗಳು ಸೇರಿದಂತೆ ವಿವಿಧ ದಾಖಲೆಗಳನ್ನು ಸೃಷ್ಟಿಸುವ ದಂಧೆ ನಿರಾತಂಕವಾಗಿ ನಡೆಯುತ್ತಿದೆ ಎಂಬ ಆರೋಪಗಳೂ ಕೇಳಿಬಂದಿವೆ.

ಒಂದು ಕಡೆ ನಿಯಮ ಉಲ್ಲಂಘಿಸಿ ಗುಂಪು ಗುಂಪಾಗಿ ಅರ್ಜಿಗಳನ್ನು ಭರ್ತಿ ಮಾಡಲಾಗುತ್ತಿದೆ, ಮತ್ತೊಂದು ಕಡೆ ನಕಲಿ ದಾಖಲೆಗಳ ಮೂಲಕ ಮತದಾರರ ಪಟ್ಟಿಯ ವಿಶ್ವಾಸಾರ್ಹತೆಗೆ ಧಕ್ಕೆ ತರುವ ಪ್ರಯತ್ನಗಳು ನಡೆಯುತ್ತಿವೆ ಎಂದು ಅಶೋಕ್ ಆರೋಪಿಸಿದ್ದಾರೆ.

ಇಷ್ಟೆಲ್ಲಾ ಬೆಳವಣಿಗೆಗಳು ಸರ್ಕಾರದ ಮೂಗಿನ ನೇರದಲ್ಲೇ ನಡೆಯುತ್ತಿದ್ದರೂ ಸರ್ಕಾರ ಮತ್ತು ಪೊಲೀಸರು ಮೌನವಾಗಿರುವುದು ಏಕೆ? ಎಂದು ಪ್ರಶ್ನಿಸಿರುವ ಅವರು, ಇದರ ಹಿಂದೆ ಯಾರನ್ನಾದರೂ ರಕ್ಷಿಸುವ ಹುನ್ನಾರ ಅಡಗಿದೆಯೇ? ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ. ತಕ್ಷಣವೇ ಅಕ್ರಮವಾಗಿ ಅರ್ಜಿ ಭರ್ತಿ ಮಾಡಿಸುತ್ತಿರುವವರ ವಿರುದ್ಧ ಹಾಗೂ ನಕಲಿ ದಾಖಲೆಗಳನ್ನು ಸೃಷ್ಟಿಸುವ ಜಾಲದ ವಿರುದ್ಧ ಕಠಿಣ ಕ್ರಿಮಿನಲ್ ಪ್ರಕರಣ ದಾಖಲಿಸಿ ತಪ್ಪಿತಸ್ಥರನ್ನು ಬಂಧಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಜಾಪ್ರಭುತ್ವದ ತಳಹದಿಯಾದ ಮತದಾರರ ಪಟ್ಟಿಯ ಪಾವಿತ್ರ್ಯಕ್ಕೆ ಧಕ್ಕೆ ತಂದರೆ ರಾಜ್ಯಾದ್ಯಂತ ತೀವ್ರ ಜನಾಂದೋಲನ ನಡೆಸುವುದು ಅನಿವಾರ್ಯವಾಗುತ್ತದೆ ಎಂದು ಅಶೋಕ್ ಎಚ್ಚರಿಸಿದ್ದಾರೆ.

ಕೊಡಗಿನ ರೆಸಾರ್ಟ್‌ನಲ್ಲಿ ಅತಿಥಿ ಮಹಿಳೆ ದಾಖಲಿಸಿದ್ದ ಪರಿಶಿಷ್ಟರ ದೌರ್ಜನ್ಯ ಕಾಯ್ದೆ ದೂರಿಗೆ ಹೈಕೋರ್ಟ್ ತಡೆ

ಬೆಂಗಳೂರು, ಜು.3 - ಕೊಡಗಿನ ಮಡಿಕೇರಿಯ ರೆಸಾರ್ಟ್‌ವೊಂದರಲ್ಲಿ ವಾಗ್ವಾದ ನಡೆಸಿದ ಸರ್ವೀಸ್ ಹುಡುಗ ವಿರುದ್ಧ ಕ್ರಮ ಜರುಗಿಸದಕ್ಕೆ ರೆಸಾರ್ಟ್ ಮಾಲೀಕರ ವಿರುದ್ಧ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ದೌರ್ಜನ್ಯ ತಡೆ ಕಾಯಿದೆ ಅಡಿಯಲ್ಲಿ ಅತಿಥಿ ಮಹಿಳೆ ದಾಖಲಿಸಿರುವ ದೂರಿಗೆ ಸಂಬಂಧಿಸಿದ ಮುಂದಿನ ಪ್ರಕ್ರಿಯೆಗಳಿಗೆ ಹೈಕೋರ್ಟ್ ತಡೆ ನೀಡಿದೆ.

ಮಡಿಕೇರಿಯ ನಪೋಕ್ಲು ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದು ಕೋರಿ ಮಡಿಕೇರಿಯ ಸ್ಕೈ ಲಾಕ್ ರೆಸಾರ್ಟ್ ಮಾಲೀಕರರಾದ ಎ ಕೆ ಮುತ್ತಪ್ಪ, ಅವರ ಪತ್ನಿ ಕೆ.ಸಿ ರೀಟಾ ಹಾಗೂ ಪುತ್ರಿ ಎ.ಎಂ ಮೋನಿಷಾ ಮತ್ತು ವ್ಯವಸ್ಥಾಪಕರಾದ ಎನ್.ಪಿ ನಿಕ್ಕಿನ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.

ರೆಸಾರ್ಟ್‌ನ ಸರ್ವೀಸ್ ಬಾಯ್ ವಿರುದ್ಧ ಕ್ರಮ ಜರುಗಿಸಿಲ್ಲ ಎಂಬ ಕಾರಣಕ್ಕೆ ಅರ್ಜಿದಾರರನ್ನು ಕ್ರಿಮಿನಲ್ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಅದೂ ಯಾವ ಅಪರಾಧ ಎಂಬುದುನ್ನು ನೋಡಿದರೆ ಆಘಾತ ಮೂಡಿದೆ. ಅದೂ ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯಿದೆ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಒಂದೊಮ್ಮೆ, ಈ ಪ್ರಕರಣ ಮುಂದುವರಿಸಲು ಅನುಮತಿ ನೀಡಿದರೆ, ಅದು ರೆಸಾರ್ಟ್‌ಗೆ ಬರುವ ಪ್ರತಿಯೊಬ್ಬ ಅತಿಥಿಯನ್ನು ಅವರು ಯಾವ ಜಾತಿಗೆ ಸೇರಿದವರು ಎಂದು ಕೇಳಿದಂತಾಗುತ್ತದೆ ಎಂದು ಆಘಾತ ವ್ಯಕ್ತಪಡಿಸಿದೆ.

ಅಲ್ಲದೆ, ಮೇಲಾಗಿ ಅರ್ಜಿದಾರರಿಗೆ ದೂರುದಾರ ಮಹಿಳೆ ಅವರು ಯಾವ ಜಾತಿ ಎಂಬುದು ತಿಳಿದಿಲ್ಲ. ಹೀಗಾಗಿ, ದೂರುದಾರೆಗೆ ಅವರ ಹೆಸರು ತೆಗೆದು ನಿಂದನೆ ಮಾಡಿರಲು ಅಥವಾ ತೊಂದರೆ ನೀಡಿರಲು ಸಾಧ್ಯವಿಲ್ಲ. ಮತ್ತೊಂದೆಡೆ ಸರ್ವೀಸ್ ಬಾಯ್ ವಿರುದ್ಧ ದೂರು ದಾಖಲಾಗಿದೆ. ಆತನ ವಿರುದ್ಧ ತನಿಖೆ ನಡೆಯುತ್ತಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ದೂರಿಗೆ ಸಂಬಂಧಿಸಿದ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಅರ್ಜಿ ಇತ್ಯರ್ಥವಾಗುವವರೆಗೆ ತಡೆ ನೀಡಲಾಗುತ್ತಿದೆ ಎಂದು ಪೀಠ ಆದೇಶ ಮಾಡಿದೆ.

ಇದಕ್ಕೂ ಮುನ್ನ, ಅರ್ಜಿದಾರರ ಪರ ವಕೀಲರು ವಾದಿಸಿ, ಅರ್ಜಿದಾರರು ರೆಸಾರ್ಟ್ ಮಾಲೀಕರು ಹಾಗೂ ವ್ಯವಸ್ಥಾಪಕರಾಗಿದ್ದಾರೆ. ದೂರುದಾರೆಯು ರೆಸಾರ್ಟ್‌ಗೆ ಬಂದಿದ್ದ ಅತಿಥಿಯಾಗಿದ್ದರು. ಸರ್ವೀಸ್ ಬಾಯ್ ಹುಡುಗನ ತನ್ನೊಂದಿಗೆ ಮಾಡಿದ ವಾಗ್ವಾದ ನಡೆಸಿದ ಬಗ್ಗೆ ತಿಳಿಸಿದರೂ ಆತನ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ ಎಂಬುದು ರೆಸಾರ್ಟ್ ಮಾಲೀಕರ ಕುರಿತು ದೂರುದಾರೆ ಆರೋಪಿಸಿದ್ದಾರೆ.

ಪ್ರೀಮಿಯರ್ ರೂಂ ನೀಡಲಾಗುವುದು. ಊಟದ ಬಿಲ್ ಮನ್ನಾ ಮಾಡುವುದಾಗಿಯ ದೂರುದಾರೆಗೆ ಅರ್ಜಿದಾರರು ಹೇಳಿದ್ದರು. ಆದರೆ, ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯಿದೆಡಿ ಸರ್ವೀಸ್ ಬಾಯ್ ಹಾಗೂ ರೆಸಾರ್ಟ್ ಮಾಲೀಕರ ಮೇಲೆ ಅತಿಥಿ ದೂರು ದಾಖಿಸಿದ್ದಾರೆ ಎಂದು ಪೀಠಕ್ಕೆ ವಿವರಿಸಿದರು.

ಆಗ ಪೀಠವು ಅತಿಥಿಯಾಗಿ ಬಂದಿರುವ ಮಹಿಳೆಯ ಜಾತಿ ಯಾವುದು ಎಂದು ರೆಸಾರ್ಟ್ ಮಾಲೀಕರಿಗೆ ಹೇಗೆ ಗೊತ್ತಾಗಲು ಸಾಧ್ಯ? ಎಂದು ಪ್ರಶ್ನಿಸಿತು.

ಹಾಗೆಯೇ, ಇದುವೆ ಕಾಯಿದೆಯ ದುರುಪಯೋಗ ಎನ್ನುವುದು ಎಂದು ಪೊಲೀಸರ ಪರ ಹಾಜರಾಗಿದ್ದ ಸರ್ಕಾರಿ ಅಭಿಯೋಜನಕರನ್ನು ಉದ್ದೇಶಿಸಿ ಹೇಳಿ ಮೇಲಿನಂತೆ ಆದೇಶ ಮಾಡಿತು.

ಬೆಂಗಳೂರಿನ ನಾಗರಭಾವಿ ಮುಖ್ಯರಸ್ತೆಯ ಕಾವೇರಿ ಬಡಾವಣೆ ನಿವಾಸಿಯಾದ ಬಿ.ಕೆ ಶ್ರುತಿ ಎಂಬಾಕೆ 2026 ಜೂನ್ 24ರಂದು ನೀಡಿದ ದೂರು ಆಧರಿಸಿ ಮಡಿಕೇರಿಯ ನಪೋಕ್ಲು ಠಾಣಾ ಪೋಲೀಸರು ಎಸ್‌ಸಿ-ಎಸ್‌ಟಿ ದೌರ್ಜನ್ಯ ಕಾಯಿದೆ ಅಡಿ ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು.

ಸಿದ್ದರಾಮಯ್ಯ ನಿವಾಸದಲ್ಲಿ ಉಪಹಾರ ಕೂಟದಲ್ಲಿ ಭಾಗಿಯಾದ ಸಿಎಂ ಡಿಕೆಶಿ ಕುಟುಂಬ



ಬೆಂಗಳೂರು, ಜು.3 - ಮಹತ್ವದ ಬೆಳವಣಿಗೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕುಟುಂಬ ಸಮೇತರಾಗಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಉಪಾಹಾರ ಕೂಟ ನಡೆಸಿದರು.

ನಾಯಕತ್ವ ಬದಲಾದ ಬಳಿಕ ಡಿ.ಕೆ. ಶಿವಕುಮಾರ್ ಕುಟುಂಬ ಮತ್ತು ಸಿದ್ದರಾಮಯ್ಯ ಅವರ ಮೊದಲ ಭೇಟಿ ಇದಾಗಿದೆ. 8 ವರ್ಷ ಕಾಲ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನವನ್ನು ಡಿ.ಕೆ. ಶಿವಕುಮಾರ್ ಅವರಿಗೆ ಬಿಟ್ಟುಕೊಟ್ಟಿದ್ದರು.

ಅಧಿಕಾರ ಹಸ್ತಾಂತರಕ್ಕೂ ಮುನ್ನ ರಾಜ್ಯದಲ್ಲಿ ಈ ವಿಚಾರಗಳ ಕುರಿತು ಭಾರೀ ಚರ್ಚೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಿತಿ ದಾಟದಂತೆ ಇಬ್ಬರು ನಾಯಕರಿಗೂ ಸೂಚನೆ ನೀಡಿತ್ತು. ಒಂದು ಹಂತದಲ್ಲಿ ಹೈಕಮಾಂಡ್ ಸೂಚನೆ ಮೇರೆಗೆ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅವರ ಮನೆಗೆ, ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರ ಮನೆಗೆ ಭೇಟಿ ನೀಡಿ ಉಪಾಹಾರ ಕೂಟ ನಡೆಸಿದ್ದರು. ಆ ವೇಳೆ ನಾಯಕತ್ವ ಬದಲಾವಣೆ ವಿಚಾರವಾಗಿ ಹೈಕಮಾಂಡ್ ನೀಡುವ ಸೂಚನೆಗೆ ಬದ್ಧರಾಗಿ ನಡೆದುಕೊಳ್ಳುವುದಾಗಿ ಇಬ್ಬರು ನಾಯಕರೂ ಹೇಳಿದ್ದರು.

ಅಧಿಕಾರ ತ್ಯಾಗದ ಬಳಿಕ ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆ ಎಂಬ ಸಣ್ಣ ಮಟ್ಟದ ಅಪಸ್ವರಗಳು ಅಲ್ಲಲ್ಲಿ ಕಂಡು ಬರುತ್ತಿದೆ. ಇದನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಡಿ.ಕೆ. ಶಿವಕುಮಾರ್ ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಕುಟುಂಬ ಸಮೇತರಾಗಿ ಸಿದ್ದರಾಮಯ್ಯಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಜೊತೆಯಲ್ಲೇ ಉಪಾಹಾರ ಸೇವಿಸಿದ್ದಾರೆ.

ಈ ವೇಳೆ ಡಿ.ಕೆ. ಶಿವಕುಮಾರ್ ಅವರ ಪತ್ನಿ ಉಷಾ, ಸಹೋದರ ಡಿ.ಕೆ.ಸುರೇಶ್ ಉಪಸ್ಥಿತರಿದ್ದರು.

ರಾಮನಗರ ಎಸ್‌ಐಆರ್ ಪ್ರಕ್ರಿಯೆ ನಡೆಸಿದ ಅಧಿಕಾರಿಗಳ ವಿರುದ್ಧ ತನಿಖೆಗೆ ಮುಖ್ಯ ಚುನಾವಣಾಧಿಕಾರಿ ಸೂಚನೆ



ರಾಮನಗರ, ಜು. 3 - ಕಲ್ಯಾಣ ಮಂಟಪವೊಂದರಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆ ನಡೆಸಿದ ಬೂತ್ ಮಟ್ಟದ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ತನಿಖೆ ನಡೆಸುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ಅವರು ರಾಮನಗರ ಜಿಲ್ಲಾಧಿಕಾರಿಗೆ ಖಡಕ್ ಸೂಚನೆ ನೀಡಿದ್ದಾರೆ.

ಮುಖ್ಯ ಚುನಾವಣಾಧಿಕಾರಿ ಅನ್ಬುಕುಮಾರ್ ಅವರು ನಿಯಮ ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧ ತಕ್ಷಣವೇ ಕ್ರಮ ಕೈಗೊಳ್ಳಲು ರಾಮನಗರ ಡಿಸಿಗೆ ನಿರ್ದೇಶನ ನೀಡಿರುವುದಾಗಿ ತಿಳಿಸಿದ್ದಾರೆ. ಕರ್ನಾಟಕದಲ್ಲಿ ಸದ್ಯ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮ ನಡೆಯುತ್ತಿದ್ದು, ನಿಯಮಗಳ ಪ್ರಕಾರ ಬಿಎಲ್‌ಒಗಳು ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಪರಿಶೀಲನೆ ನಡೆಸಬೇಕು. ಆದರೆ ರಾಮನಗರ ನಗರಸಭೆ ವ್ಯಾಪ್ತಿಯ ವಾರ್ಡ್‌ ನಂ. 23ರ ಟಿಪ್ಪು ನಗರ ಕಲ್ಯಾಣ ಮಂಟಪದಲ್ಲಿ ಬಿಎಲ್‌ಒಗಳು ಜನರನ್ನು ಒಂದೇ ಕಡೆ ಸೇರಿಸಿ ಕ್ಯಾಂಪ್ ನಡೆಸಿದ್ದಾರೆ ಎಂಬ ಆರೋಪ ಹೊರಬಂದಿದೆ.

ಮಂಡ್ಯ : ಮೆಡಿಸಿನ್ ಟ್ರಕ್ ದರೋಡೆ ಯತ್ನ ; 7 ಮಂದಿಯ ಬಂಧನ



ಮಂಡ್ಯ, ಜು. 3 - ಬೆಂಗಳೂರು - ಮೈಸೂರು ದಶಪಥ ಹೆದ್ದಾರಿಯಲ್ಲಿ ನಡೆದ ಮೆಡಿಸಿನ್ ಟ್ರಕ್ ದರೋಡೆ ಯತ್ನ ಪ್ರಕರಣದಲ್ಲಿ ಮಂಡ್ಯ ಪೊಲೀಸರು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಏಳು ಮಂದಿಯನ್ನು ಬಂಧಿಸಿದ್ದಾರೆ.

ಬಂಧಿತರಲ್ಲಿ ಒಬ್ಬರು ಪ್ರಭಾವೀ ಉದ್ಯಮಿಯ ಪುತ್ರರಾಗಿದ್ದು, ಉಳಿದವರು ಸ್ಥಳೀಯ ಯುವಕರಾಗಿದ್ದಾರೆ.

ಹಾಸನ ಜಿಲ್ಲೆಯ ಸಕಲೇಶಪುರದ ಶಂಕರ್ ಎಂಬವರು ಪ್ರತಿದಿನ ಬೆಂಗಳೂರಿನಿಂದ ಮೈಸೂರಿಗೆ ಔಷಧಿಗಳನ್ನು ಸಾಗಿಸುತ್ತಿದ್ದರು. ಮೊನ್ನೆ ಮುಂಜಾನೆ ಟ್ರಕ್‌ನ್ನು ಮಂಡ್ಯದ ಅಮರಾವತಿ ಹೋಟೆಲ್ ಬಳಿ ಕಪ್ಪು ಬಣ್ಣದ ಫಾರ್ಚೂನರ್ ಕಾರಿನಲ್ಲಿ ಬಂದ ಯುವಕರ ಗುಂಪು ತಡೆದು ಏರ್‌ಗನ್ ತೋರಿಸಿ ಹೆದರಿಸಿ ಗುಂಡು ಹಾರಿಸಿದೆ. ಅದೃಷ್ಟವಶಾತ್ ಚಾಲಕ ಶಂಕರ್ ಪಾರಾಗಿದ್ದಾರೆ.

ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ರೋಹನ್ ಗೌಡ, ಶಶಾಂಕ್, ಉಮರ್, ನಿತಿನ್, ಮೊಹಮದ್ ಅಬೂಕರ್, ಸಚಿನ್ ಮತ್ತು ಮತ್ತೊಬ್ಬರನ್ನು ಬಂಧಿಸಲಾಗಿದೆ. ಇವರಿಂದ ಫಾರ್ಚೂನರ್ ಕಾರು ಹಾಗೂ ಗನ್ ವಶಪಡಿಸಿಕೊಂಡಿದ್ದಾರೆ.

ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಿಗಳು ಕೇವಲ ಫನ್‌ಗಾಗಿ ಏರ್‌ಗನ್ ಬಳಸಿ ಫೈರಿಂಗ್ ಮಾಡಿದುದಾಗಿ ಒಪ್ಪಿಕೊಂಡಿದ್ದಾರೆ. ಆದರೆ, ಅದು ನಿಜವಾಗಿಯೂ ಏರ್‌ಗನ್ ಹೌದೇ ಅಥವಾ ಬೇರೆ ಮಾರಕಾಸ್ತ್ರವೇ? ಎಂಬುದನ್ನು ಖಚಿತಪಡಿಸಲು ಗನ್ ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ.

ಬಂಧಿತರಲ್ಲಿ ರೋಹನ್ ಗೌಡ ಎಂಬಾತ ಮಂಡ್ಯದ ಪ್ರಭಾವೀ ಉದ್ಯಮಿಯ ಪುತ್ರ. ಉಳಿದ ಆರೋಪಿಗಳು ಸ್ಥಳೀಯ ಯುವಕರಾಗಿದ್ದು, ಐಷಾರಾಮಿ ಕಾರುಗಳಲ್ಲಿ ಸಂಚರಿಸುತ್ತಿದ್ದರು. ಗನ್‌ಗೆ ಯಾವುದೇ ಪರವಾನಿಗೆ ಇಲ್ಲದಿರುವುದರಿಂದ ಅಕ್ರಮವಾಗಿ ಗನ್ ಸಿಕ್ಕಿದ್ದು ಹೇಗೆ? ಎಂಬುದರ ಬಗ್ಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಸದ್ಯ ಈ ಗ್ಯಾಂಗ್ ಕಂಬಿ ಎಣಿಸುತ್ತಿದ್ದು, ಪ್ರಕರಣವು ಮಂಡ್ಯದಲ್ಲಿ ಯುವಕರ ಪುಂಡಾಟಿಕೆ ಮತ್ತು ಪ್ರಭಾವಿ ಕುಟುಂಬಗಳ ಅಟ್ಟಹಾಸದ ಬಗ್ಗೆ ಗಂಭೀರ ಚರ್ಚೆಗೆ ಕಾರಣವಾಗಿದೆ.

ಅಕ್ರಮ ಆಸ್ತಿ ಗಳಿಕೆ ; ಪ್ರಕರಣ ರದ್ದು ಕೋರಿ ಈಶ್ವರಪ್ಪ ಸಲ್ಲಿಸಿದ್ದ ಅರ್ಜಿ ತಿರಸ್ಕಾರ



ಬೆಂಗಳೂರು, ಜು. 3 - ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣದಲ್ಲಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪಗೆ ಕಾನೂನು ಸಂಕಷ್ಟ ಎದುರಾಗಿದೆ. ತಮ್ಮ ವಿರುದ್ಧದ ಪ್ರಕರಣವನ್ನು ರದ್ದುಪಡಿಸಬೇಕೆಂದು ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ತಿರಸ್ಕಾರ ಮಾಡಿದೆ.

ಈಶ್ವರಪ್ಪ ಪರವಾಗಿ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ಅವರು ಅರ್ಜಿ ಸಲ್ಲಿಸಿ, ಲೋಕಾಯುಕ್ತ ಪ್ರಕರಣದಲ್ಲಿ ಬಂಧನದಿಂದ ರಕ್ಷಣೆಗೆ ಮನವಿ ಮಾಡಿದ್ದರು.

ಲೋಕಾಯುಕ್ತ ಎಸ್‌ಪಿಪಿ ವೆಂಕಟೇಶ್ ಅರಬಟ್ಟಿ ಪ್ರತಿವಾದ ಮಂಡಿಸಿ, ತನಿಖೆಗೆ ಸಹಕರಿಸಿದರೆ ಬಲವಂತದ ಕ್ರಮ ಕೈಗೊಳ್ಳುವುದಿಲ್ಲ ಎಂದು ಕೋರ್ಟ್‌ಗೆ ತಿಳಿಸಿದರು. ವಾದ-ಪ್ರತಿವಾದಗಳನ್ನು ಆಲಿಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.

ಶಿವಮೊಗ್ಗ ಮೂಲದ ವಕೀಲ ಬಿ. ವಿನೋದ್ ಅವರು ಈಶ್ವರಪ್ಪ, ಅವರ ಪುತ್ರ ಕೆ.ಇ. ಕಾಂತೇಶ್ ಹಾಗೂ ಕಾಂತೇಶ್ ಪತ್ನಿ ಶಾಲಿನಿ ವಿರುದ್ಧ ಆದಾಯಕ್ಕೂ ಮೀರಿದ ಅಕ್ರಮ ಆಸ್ತಿ ಗಳಿಕೆ ಆರೋಪ ಮಾಡಿ ಲೋಕಾಯುಕ್ತ ಪೊಲೀಸರ ಮುಂದೆ ಪ್ರಕರಣ ದಾಖಲಿಸಿದ್ದರು.

ಈ ಪ್ರಕರಣದಲ್ಲಿ ಮೊದಲು ಲೋಕಾಯುಕ್ತ ಪೊಲೀಸರು ಬಿ-ರಿಪೋರ್ಟ್ ಸಲ್ಲಿಸಿದ್ದರು. ಆದರೆ ವಿನೋದ್ ಅದನ್ನು ಪ್ರಶ್ನಿಸಿ ಮತ್ತೆ ನ್ಯಾಯಾಲಯದ ಮೊರೆ ಹೋಗಿದ್ದರು.

ನ್ಯಾಯಾಲಯವು ಮರು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ ನಂತರ, ಶಿವಮೊಗ್ಗ ಲೋಕಾಯುಕ್ತ ಪೊಲೀಸರು ಹೊಸದಾಗಿ ಎಫ್‌ಐಆರ್‌ದಾಖಲಿಸಿದ್ದರು. ಇದನ್ನು ರದ್ದುಪಡಿಸಲು ಈಶ್ವರಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು. ಆದರೆ ಇದೀಗ ಹೈಕೋರ್ಟ್ ಅರ್ಜಿಯನ್ನು ವಜಾ ಮಾಡಿರುವುದರಿಂದ, ಪ್ರಕರಣ ಮುಂದುವರಿಯಲಿದೆ.

ಡೇಕೇರ್‌ನಲ್ಲಿ 2-3 ವರ್ಷದ ಕಂದಮ್ಮಗಳ ಮೇಲೆ ದೈಹಿಕ ಕಿರುಕುಳ ; ಇಬ್ಬರ ಬಂಧನ



ಬೆಂಗಳೂರು, ಜು. 3 - ಮಕ್ಕಳ ಸುರಕ್ಷತೆಯನ್ನು ಲೆಕ್ಕಿಸದೆ, 2-3 ವರ್ಷದ ಕಂದಮ್ಮಗಳ ಮೇಲೆ ದೈಹಿಕ ಕಿರುಕುಳ ನೀಡುತ್ತಿದ್ದ ಇಬ್ಬರನ್ನು ಹೆಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

ಮಂಜುಳಾ ಮತ್ತು ವಿಜಯಲಕ್ಷ್ಮೀ ಬಂಧಿತ ಆರೋಪಿಗಳಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಉಳಿದ ಮೂವರು ಆರೋಪಿಗಳಾದ ಭವಾನಿ, ಸಿಂಧು ಮತ್ತು ಬಿಂದು ಅವರ ವಿರುದ್ಧ ಸಾಕ್ಷ್ಯ ಸಾಬೀತಾಗದ ಕಾರಣ ನೋಟಿಸ್ ನೀಡಲಾಗಿದೆ.

ಬಂಧಿತ ಆರೋಪಿಗಳ ವಿರುದ್ಧ ಬಾಲನ್ಯಾಯ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್-351 ಅಡಿಯಲ್ಲಿ ಪ್ರಕರಣ ದಾಖಲಾಗಿದೆ. ಈ ಘಟನೆ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಕ್ಯಾಪ್‌ಜೆಮಿನಿ ಕಂಪೆನಿಯ ಡೇಕೇರ್ ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಅಳುತ್ತಿದ್ದ ಮಕ್ಕಳನ್ನು ಬೆದರಿಸಲು ಸಿಬ್ಬಂದಿಗಳು ವಾಷಿಂಗ್ ಮೆಷಿನ್ ಒಳಗೆ ಕೂರಿಸುವುದು, ಬಾಯೊಳಗೆ ಟಾಯ್ಲೆಟ್ ಜೆಟ್ ಸ್ಪ್ರೇ ಹಿಡಿಯುವುದು, ಬಾತ್‌ರೂಂನಲ್ಲಿ ಹಾಕಿ ಬಾಗಿಲು ಮುಚ್ಚುವುದು ಸೇರಿದಂತೆ ನಾನಾ ರೀತಿಯ ಕಿರುಕುಳ ನೀಡಲಾಗುತ್ತಿತ್ತು.

ಈ ಘಟನೆ ಎಚ್‌ಎಎಲ್ ಕ್ಯಾಂಪಸ್‌ನ ಕ್ಯಾಪ್‌ಜೆಮಿನಿ ಕಂಪೆನಿಯ ಡೇಕೇರ್‌ನಲ್ಲಿ ನಡೆದಿದ್ದು, ದೂರು ನೀಡಿದ ಉದ್ಯೋಗಿಯನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು. ಹಲವು ಬಾರಿ ದೌರ್ಜನ್ಯವನ್ನು ಮೇಲ್ವಿಚಾರಕರ ಗಮನಕ್ಕೆ ತಂದರೂ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಮತ್ತೊಬ್ಬ ಸಿಬ್ಬಂದಿ ಸ್ನೇಹಿತನ ಮೂಲಕ ವಿಡಿಯೋ ಮಾಡಿ ಪೊಲೀಸರಿಗೆ ನೀಡಲಾಗಿದೆ.

ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಈ ಘಟನೆ ಗಂಭೀರವಾದುದು ಎಂದು ಎಚ್ಚರಿಕೆ ನೀಡಿದ್ದು, ನಗರದ ಇತರ ಡೇಕೇರ್ ಕೇಂದ್ರಗಳ ಪರಿಶೀಲನೆ ನಡೆಯಲಿದೆ ಎಂದು ತಿಳಿಸಿದ್ದಾರೆ. ಸಂಸ್ಥೆಯ ಪ್ರತಿಕ್ರಿಯೆಯಲ್ಲಿ, ಉದ್ಯೋಗಿಗಳು ಮತ್ತು ಅವರ ಕುಟುಂಬದವರ ಸುರಕ್ಷತೆಗೆ ಆದ್ಯತೆ ನೀಡುತ್ತೇವೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸಹಕರಿಸುತ್ತೇವೆ ಎಂದು ಹೇಳಿದೆ.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ತಿಲಕೇಶ್ ಕುಮಾರ್ ಅವರಿಗೆ ವಾಟ್ಸಾಪ್ ಮೂಲಕ ಈ ವಿಡಿಯೋಗಳು ಬಂದಿದ್ದು, ಅವರ ದೂರಿನ ಆಧಾರದ ಮೇಲೆ ಪ್ರಕರಣ ಬೆಳಕಿಗೆ ಬಂದಿದೆ.

> **ಬ್ರ್ಯಾಂಡ್ ಬೆಂಗಳೂರು ಹೆಸರಿಗೆ ಧಕ್ಕೆ : ಪ್ರಿಯಾಂಕ್ ಖರ್ಗೆ**
>
> 
>
> ಗೃಹ ಸಚಿವ ಪ್ರಿಯಾಂಕ್ ಖರ್ಗೆ ಈ ಘಟನೆಗೆ ತೀವ್ರ ಕಳವಳ ವ್ಯಕ್ತಪಡಿಸಿ, ಇಂತಹ ಘಟನೆಗಳು ಬ್ರ್ಯಾಂಡ್ ಬೆಂಗಳೂರು ಹೆಸರಿಗೆ ಧಕ್ಕೆ ತರುತ್ತವೆ ಎಂದು ಹೇಳಿದ್ದಾರೆ. ಡೇಕೇರ್ ಕೇಂದ್ರಗಳನ್ನು ನಡೆಸಲು ಕಟ್ಟುನಿಟ್ಟಾದ ನಿಯಮಗಳಿವೆ, ಆದರೆ ಈ ಪ್ರಕರಣದಲ್ಲಿ ಅವನ್ನು ಗಾಳಿಗೆ ತೂರಲಾಗಿದೆ. ಮಕ್ಕಳ ಸುರಕ್ಷತೆ ಮುಖ್ಯ, ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಖರ್ಗೆ ಸ್ಪಷ್ಟಪಡಿಸಿದ್ದಾರೆ.

ರಾಮಮಂದಿರ ದೇಣಿಗೆ ಲೂಟಿ ಪ್ರಕರಣ 'ದೊಡ್ಡ ಅಕ್ರಮದ ತುಣುಕಷ್ಟೇ'; ಪ್ರಭಾವಶಾಲಿಗಳನ್ನು ರಕ್ಷಿಸುವ ಯತ್ನ: ಕೇಜ್ರಿವಾಲ್

ರಾಮಮಂದಿರ ಹಗರಣ ಪ್ರಧಾನಿ ಮೋದಿಗೆ ತಿಳಿದಿಲ್ಲ ಎಂಬುದು ಸುಳ್ಳು



ಪಣಜಿ, ಜು. 3 - ಅಯೋಧ್ಯೆ ರಾಮಮಂದಿರದ ಹಗರಣದಲ್ಲಿ ಭಾಗಿಯಾಗಿರುವ ಪ್ರಭಾವಿ ವ್ಯಕ್ತಿಗಳನ್ನು ರಕ್ಷಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ದೇವರ ಆಭರಣಗಳು, ಬೆಳ್ಳಿಯ ಇಟ್ಟಿಗೆಗಳು, ನಗದು ಮತ್ತು ಇತರ ಕಾಣಿಕೆಗಳು ಸೇರಿದಂತೆ ಭಕ್ತರು ಅರ್ಪಿಸಿದ ಅಮೂಲ್ಯ ವಸ್ತುಗಳನ್ನು ಮಂದಿರದಿಂದ ಕದಿಯಲಾಗಿದೆ'' ಎಂದು ಅವರು ಆರೋಪಿಸಿದ್ದಾರೆ.

ರಾಮ ಜನ್ಮಭೂಮಿ ಟ್ರಸ್ಟ್‌ಗೆ ಸಂಬಂಧಿಸಿದ ಭೂ ಹಗರಣದ ಆರೋಪಗಳನ್ನು ಉಲ್ಲೇಖಿಸಿದ ಅವರು, 2021ರಿಂದಲೇ ಹಣಕಾಸಿನ ಅಕ್ರಮಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ.

''ದೇಣಿಗೆ ದುರುಪಯೋಗ ಪ್ರಕರಣವು ದೊಡ್ಡ ಅಕ್ರಮದ ತುಣುಕಷ್ಟೇ. ಈ ಹಗರಣದಲ್ಲಿ ಭಾಗಿಯಾಗಿರುವ ಪ್ರಭಾವಶಾಲಿಗಳನ್ನು ಕಾಪಾಡುವ ಯತ್ನ ನಡೆಯುತ್ತಿದೆ. ಇದಕ್ಕೆ ಕಾರಣರಾದವರಿಗೆ ಶಿಕ್ಷೆಯಾಗುತ್ತದೆಯೇ ಎಂಬುದು ಪ್ರತಿಯೊಬ್ಬ ರಾಮಭಕ್ತನ ಮನಸ್ಸಿನಲ್ಲಿರುವ ದೊಡ್ಡ ಪ್ರಶ್ನೆಯಾಗಿದೆ. ಪ್ರಕರಣದ ಹಿಂದಿರುವ ಆ ಪ್ರಭಾವಿ ವ್ಯಕ್ತಿಗಳು ಯಾರು? ಎಂಬುದನ್ನು ತಿಳಿಯಲು ಇಡೀ ದೇಶ ಬಯಸುತ್ತಿದೆ'' ಎಂದು ತಿಳಿಸಿದ್ದಾರೆ.

''ಪ್ರಕರಣವನ್ನು ಮುಚ್ಚಿಹಾಕುವ ಪ್ರಯತ್ನದಲ್ಲಿ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ನಾಶಪಡಿಸಲಾಗುತ್ತಿದೆ. ಎಂಟು ತಿಂಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಅಳಿಸಿ ಹಾಕಲಾಗಿದೆ. ಸಾಕ್ಷಿಗಳಿಗೆ ಬೆದರಿಕೆ ಹಾಕಲಾಗುತ್ತಿದೆ'' ಎಂದು ಅವರು ಆರೋಪಿಸಿದ್ದಾರೆ. ಅಕ್ರಮದ ಬಗ್ಗೆ ಪ್ರಧಾನಿ ನರೇಂದ್ರ ಮೋದಿಗೆ ತಿಳಿದಿರಲಿಲ್ಲ ಎಂಬ ವಾದವನ್ನು ಕೇಜಿವಾಲ್ ಇದೇ ವೇಳೆ ತಳ್ಳಿಹಾಕಿದ್ದಾರೆ.


''ಏನು ನಡೆಯುತ್ತಿದೆ ಎಂಬುದು ಪ್ರಧಾನಿಯವರಿಗೆ ತಿಳಿದಿರಲಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು. ಮಂದಿರದ ಟ್ರಸ್ಟ್ ಅನ್ನು ಅವರ ನೇತೃತ್ವದಲ್ಲೇ ರಚಿಸಲಾಗಿತ್ತು ಮತ್ತು ಅದರ ಪ್ರತಿಯೊಬ್ಬ ಸದಸ್ಯರೂ ಅವರ ಆಯ್ಕೆಯಾಗಿದ್ದರು. ಅವರ ಗಮನಕ್ಕೆ ಬಾರದೆ ಇಂತಹ ವಿದ್ಯಮಾನಗಳು ವರ್ಷಗಳ ಕಾಲ ಮುಂದುವರೆಯಲು ಸಾಧ್ಯವೇ ಇಲ್ಲ'' ಎಂದು ಅಭಿಪ್ರಾಯಪಟ್ಟಿದ್ದಾರೆ.

''ಪ್ರಧಾನಿಯವರಿಗೆ ಹಣ ತಲುಪಿದೆ ಎಂದು ನಾವು ಆರೋಪಿಸುತ್ತಿಲ್ಲ. ಅಂತಹ ಯಾವುದೇ ಸಾಕ್ಷ್ಯ ನಮ್ಮ ಬಳಿ ಇಲ್ಲ. ಆದರೆ ಘಟನೆಗಳ ಸರಣಿಯನ್ನು ನೋಡಿದರೆ, ಇದರಲ್ಲಿ ಭಾಗಿಯಾದವರನ್ನು ರಕ್ಷಿಸಲು ಮತ್ತು ಇಡೀ ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನ ನಡೆದಿರುವುದು ಕಂಡುಬರುತ್ತದೆ'' ಎಂದು ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶ ಸರಕಾರ ರಚಿಸಿದ ಎಸ್‌ಐಟಿಗೆ ಶಂಕಿತರನ್ನು ಬಂಧಿಸಲಾಗಲಿ, ಅವರ ಬಗ್ಗೆ ಮಾಹಿತಿ ಪಡೆಯುವುದಕ್ಕಾಗಲಿ, ಸಮನ್ಸ್ ಜಾರಿ ಮಾಡುವುದಕ್ಕಾಗಲಿ ಸಾಧ್ಯವಾಗಲಿಲ್ಲ. ಟ್ರಸ್ಟ್‌ನ ಭೂ ಅಕ್ರಮದ ತನಿಖೆಗಾಗಿ ರಚಿಸಲಾಗಿದ್ದ ಹಿಂದಿನ ಎಸ್‌ಐಟಿ ತನಿಖೆ ಎಲ್ಲಿಗೆ ಬಂತು ಎನ್ನುವುದು ಯಾರಿಗೂ ತಿಳಿದಿಲ್ಲ ಎಂದು ಅವರು ವ್ಯಂಗ್ಯವಾಡಿದ್ದಾರೆ.

ಹೊಸ ಆರ್‌ಟಿಐ ನಿಯಮಗಳಿಗೆ ತಡೆ ನೀಡಿರುವುದನ್ನು ಸ್ವಾಗಸಿತಿಸಿದ ಅಣ್ಣಾ ಹಜಾರೆ ಶಾಶ್ವತ ರದ್ದುಗೊಳಿಸಲು ಒತ್ತಾಯ; ಜುಲೈ 5ರ ಅನಿರ್ದಿಷ್ಟ ಉಪವಾಸ ಮುಂದೂಡಿಕೆ

ಪುಣೆ, ಜು. 3 - ಮಹಾರಾಷ್ಟ್ರ ಸರ್ಕಾರವು ರಾಜ್ಯದ ತಿದ್ದುಪಡಿ ಮಾಡಿದ ಮಾಹಿತಿ ಹಕ್ಕು (ಆರ್‌ಟಿಐ) ನಿಯಮಗಳ ಅನುಷ್ಠಾನವನ್ನು ತಡೆಹಿಡಿಯುವ ನಿರ್ಧಾರವನ್ನು ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಶುಕ್ರವಾರ ಸ್ವಾಗತಿಸಿದ್ದಾರೆ, ಆದರೆ ನಾಗರಿಕರ ಹಕ್ಕುಗಳನ್ನು ರಕ್ಷಿಸಲು ಪ್ರಸ್ತಾವಿತ ಮಾರ್ಗಸೂಚಿಗಳನ್ನು ಶಾಶ್ವತವಾಗಿ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ಹೊಸ ನಿಯಮಗಳ ವಿರುದ್ಧ ಜುಲೈ 5 ರಿಂದ ತಮ್ಮ ಅನಿರ್ದಿಷ್ಟ ಉಪವಾಸವನ್ನು ಮುಂದೂಡುವುದಾಗಿ ಅವರು ಘೋಷಿಸಿದ್ದಾರೆ.



ಮಹಾರಾಷ್ಟ್ರ ಮಾಹಿತಿ ಹಕ್ಕು ನಿಯಮಗಳು- 2026, ಹೆಚ್ಚಿನ ಆರ್‌ಟಿಐ ಅರ್ಜಿ ಶುಲ್ಕ, ಕಡ್ಡಾಯ ಗುರುತಿನ ಪುರಾವೆ ಮತ್ತು ಪ್ರತಿ ಅರ್ಜಿಯು ಒಂದೇ ವಿಷಯವನ್ನು ನಿರ್ವಹಿಸಬೇಕು ಎಂಬ ನಿರ್ಬಂಧ ಸೇರಿದಂತೆ ಹಲವಾರು ಬದಲಾವಣೆಗಳನ್ನು ಪ್ರಸ್ತಾಪಿಸಿತ್ತು.

ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಗುರುವಾರ ಆರ್‌ಟಿಐ ಮುಖ್ಯ ಆಯುಕ್ತರನ್ನು ಹೊಸ ಅಧಿಸೂಚಿತ ನಿಯಮಗಳನ್ನು ತಡೆಹಿಡಿಯುವಂತೆ ಕೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಹಿಲ್ಯಾನಗರ ಜಿಲ್ಲೆಯ ತಮ್ಮ ಸ್ಥಳೀಯ ಗ್ರಾಮವಾದ ರಾಳೇಗಣ್ ಸಿದ್ಧಿಯಿಂದ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, ಸ್ಥಳೀಯ ನಿವಾಸಿಗಳು ಸೇರಿದಂತೆ ಮಹಾರಾಷ್ಟ್ರದ ಜನರು ತಮ್ಮ ಒಗ್ಗಟ್ಟಿನ, ಶಾಂತಿಯುತ ಮತ್ತು ಪ್ರಜಾಪ್ರಭುತ್ವ ಅಭಿಯಾನಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಜನರ ಒತ್ತಡವು ಸರ್ಕಾರವನ್ನು ಆರ್‌ಟಿಐ ನಿಯಮಗಳನ್ನು ತಡೆಹಿಡಿಯುವಂತೆ ಒತ್ತಾಯಿಸಿದೆ ಎಂದು ಹಜಾರೆ ಹೇಳಿದ್ದಾರೆ. ತಿದ್ದುಪಡಿ ಮಾಡಿದ ನಿಯಮಗಳನ್ನು ಕಾರ್ಯರೂಪಕ್ಕೆ ತಂದರೆ, ಇಡೀ ಆರ್‌ಟಿಐ ರಚನೆಯೇ ದುರ್ಬಲಗೊಳ್ಳುತ್ತದೆ ಎಂದು ಭ್ರಷ್ಟಾಚಾರ ವಿರೋಧಿ ಹೋರಾಟಗಾರ ವಾದಿಸಿದ್ದಾರೆ. ''ಮಹಾರಾಷ್ಟ್ರದ ಜನರು ಮತ್ತು ರಾಳೇಗಣ್ ಸಿದ್ಧಿ ಕುಟುಂಬಕ್ಕೆ ನಾನು ಪ್ರಾಮಾಣಿಕವಾಗಿ ಧನ್ಯವಾದ ಹೇಳುತ್ತೇನೆ. ಜನರಿಂದ ಸೃಷ್ಟಿಸಲ್ಪಟ್ಟ ಏಕತೆ, ಅರಿವು ಮತ್ತು ಶಾಂತಿಯುತ ಪ್ರಜಾಸತ್ತಾತ್ಮಕ ಒತ್ತಡದಿಂದಾಗಿ ಸರ್ಕಾರವು ಆರ್‌ಟಿಐ ನಿಯಮಗಳನ್ನು 2026 ಅನ್ನು ಅಮಾನತುಗೊಳಿಸಲು ನಿರ್ಧರಿಸಿದೆ'' ಎಂದು ಅವರು ಹೇಳಿದರು. ಸರ್ಕಾರದ ನಿರ್ಧಾರವು ವಿವಾದಾತ್ಮಕ ನಿಯಮಗಳನ್ನು ಅಮಾನತುಗೊಳಿಸುವುದಕ್ಕೆ ಮಾತ್ರ ಸಂಬಂಧಿಸಿದೆ ಮತ್ತು ಅವುಗಳ ಅಂತಿಮ ಹಿಂಪಡೆಯುವಿಕೆಗೆ ಅಲ್ಲ ಎಂದು ಅವರು ಗಮನಿಸಿದರು.

''ಮಾಹಿತಿ ಹಕ್ಕನ್ನು ದುರ್ಬಲಗೊಳಿಸುವ ನಿಯಮಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಮತ್ತು ಜನರ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕು ಎಂಬುದು ನಮ್ಮ ನಿರೀಕ್ಷೆ. ಸರ್ಕಾರವು ಪ್ರಕ್ರಿಯೆಯನ್ನು ಅಪೂರ್ಣವಾಗಿ ಬಿಟ್ಟರೆ ಅಥವಾ ನಿಯಮಗಳನ್ನು ಶಾಶ್ವತವಾಗಿ ಹಿಂತೆಗೆದುಕೊಳ್ಳಲು ವಿಫಲವಾದರೆ, ನಾವು ಮತ್ತೊಂದು ಪ್ರಜಾಸತ್ತಾತ್ಮಕ ಆಂದೋಲನವನ್ನು ಪ್ರಾರಂಭಿಸಬೇಕಾಗುತ್ತದೆ'' ಎಂದು ಅವರು ಎಚ್ಚರಿಸಿದ್ದಾರೆ.

ಸರ್ಕಾರದ ನಿರ್ಧಾರ ಮತ್ತು ಕಾರ್ಯಕರ್ತರು ಮತ್ತು ಗ್ರಾಮಸ್ಥರ ವಿನಂತಿಗಳನ್ನು ಅನುಸರಿಸಿ, ಜುಲೈ 5 ರಂದು ರಾಳೇಗಣ್ ಸಿದ್ಧಿಯಲ್ಲಿ ಪ್ರಾರಂಭವಾಗಬೇಕಿದ್ದ ತನ್ನ ಅನಿರ್ದಿಷ್ಟಾವಧಿ ಉಪವಾಸವನ್ನು ಮುಂದೂಡುತ್ತಿರುವುದಾಗಿ ಹಿರಿಯ ಕಾರ್ಯಕರ್ತ ಘೋಷಿಸಿದ್ದಾರೆ.

''ನಾನು ಸರ್ಕಾರದ ಮೇಲೆ ನಂಬಿಕೆ ಇಡುವುದರಿಂದ ಅಲ್ಲ, ಬದಲಾಗಿ ಅದರಿಂದ ಆರಂಭಿಸಲಾದ ಸಕಾರಾತ್ಮಕ ಪ್ರಕ್ರಿಯೆಗೆ ಅವಕಾಶ ನೀಡಲು ನನ್ನ ಉಪವಾಸವನ್ನು ಸ್ಥಗಿತಗೊಳಿಸುತ್ತಿದ್ದೇನೆ'' ಎಂದು ಅವರು ಹೇಳಿದರು.

ಹೊಸ ನಿಯಮಗಳು ಮಾಹಿತಿ ಪಡೆಯುವ ಪ್ರಕ್ರಿಯೆಯನ್ನು ಹೆಚ್ಚು ನಿರ್ಬಂಧಿತಗೊಳಿಸುವ ಮೂಲಕ ಆರ್‌ಟಿಐ ಕಾಯ್ದೆಯ ಪರಿಣಾಮಕಾರಿತ್ವವನ್ನು ದುರ್ಬಲಗೊಳಿಸುತ್ತದೆ ಎಂದು ಕಾರ್ಯಕರ್ತರು ಹೇಳಿಕೊಂಡಿದ್ದಾರೆ.

ಪಾಕಿಸ್ತಾನ: ಬಸ್ ಕಣಿವೆಗೆ ಉರುಳಿ 40 ಜನರ ದುರ್ಮರಣ

ಪೇಶಾವರ್/ಇಸ್ಲಾಮಾಬಾದ್, ಜು. 3 - ಶುಕ್ರವಾರ ವಾಯುವ್ಯ ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ಬಸ್ ಕಣಿವೆಗೆ ಉರುಳಿ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಕನಿಷ್ಠ 40 ಜನರು ಸಾವನ್ನಪ್ಪಿದ್ದಾರೆ. ಪೇಶಾವರ್‌ಗೆ ತೆರಳುತ್ತಿದ್ದ ಬಸ್ ಬಲೂಚಿಸ್ತಾನದ ಕ್ವೆಟ್ಟಾದಿಂದ ಹೊರಟಿತ್ತು. ಖೈಬರ್‌ಪಖ್ತುಂಖ್ವಾ ಪ್ರಾಂತ್ಯದ ಡೇರಾ ಇಸ್ಮಾಯಿಲ್ ಖಾನ್ ಜಿಲ್ಲೆಯನ್ನು ತಲುಪಿದ ನಂತರ ಈ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪ್ರಾಥಮಿಕ ತನಿಖೆಯ ಪ್ರಕಾರ, ಪರ್ವತ ಪ್ರದೇಶದಲ್ಲಿ ಕಠಿಣ ತಿರುವಿನಲ್ಲಿ ಸಂಚರಿಸುವಾಗ ಬಸ್‌ನ ಬ್ರೇಕ್ ವಿಫಲವಾಯಿತು, ಇದರಿಂದಾಗಿ ಚಾಲಕ ನಿಯಂತ್ರಣ ಕಳೆದುಕೊಂಡರು. ಬಸ್ ರಸ್ತೆಯಿಂದ ಜಾರಿ ಕಂದಕಕ್ಕೆ ಬಿದ್ದಿದೆ. ಕಾರಣವನ್ನು ಮತ್ತಷ್ಟು ಪರಿಶೀಲಿಸಲು ತನಿಖೆಯನ್ನು ಪ್ರಾರಂಭಿಸಲಾಗಿದೆ.

''ಆರಂಭಿಕ ವರದಿಗಳ ಪ್ರಕಾರ, ಅಪಘಾತದಲ್ಲಿ 40 ಜನರು ಸಾವನ್ನಪ್ಪಿದ್ದಾರೆ ಮತ್ತು ಎಂಟು ಜನರು ಗಾಯಗೊಂಡಿದ್ದಾರೆ'' ಎಂದು ಬಲೂಚಿಸ್ತಾನ್ ಮುಖ್ಯಮಂತ್ರಿ ಸರ್ಫ್ರಾಜ್ ಬುಗ್ತಿ ಅವರ ಮಾಧ್ಯಮ ಮತ್ತು ರಾಜಕೀಯ ವ್ಯವಹಾರಗಳ ಸಹಾಯಕ ಶಾಹಿದ್ ರಿಂಡ್ ಹೇಳಿದ್ದಾರೆ.

''ಎರಡೂ ಪ್ರಾಂತ್ಯಗಳ ಜಿಲ್ಲಾಡಳಿತಗಳು, ರಕ್ಷಣಾ ಮತ್ತು ಇತರ ಸಂಬಂಧಿತ ಇಲಾಖೆಗಳು ಸಂತ್ರಸ್ತರಿಗೆ ಸಹಾಯ ಮಾಡುತ್ತಿವೆ'' ಎಂದು ಅವರು ತಿಳಿಸಿದರು.

1122 ರಕ್ಷಣಾ ತಂಡದ ಪ್ರಕಾರ, ಘಟನೆ ನಡೆದಾಗ ಬಸ್‌ನಲ್ಲಿ 48 ಜನರಿದ್ದರು. ಡಾನ್ ಪತ್ರಿಕೆ ವರದಿ ಪ್ರಕಾರ, ಬಸ್ ಕ್ವೆಟ್ಟಾದಿಂದ ಹೊರಟಾಗ 36 ಜನರು ಬಸ್‌ನಲ್ಲಿದ್ದರು ಮತ್ತು ಇತರರು ದಾರಿಯಲ್ಲಿ ಹತ್ತಿದರು. ಮೃತರು ಮತ್ತು ಗಾಯಗೊಂಡವರ ಗುರುತಿಸುವಿಕೆ ಪ್ರಗತಿಯಲ್ಲಿದೆ ಎಂದು ಶೆರಾನಿ ಜಿಲ್ಲೆಯ ಉಪ ಆಯುಕ್ತ ವಾಲಿ ಖಾನ್ ಕಾಕರ್ ತಿಳಿಸಿದ್ದಾರೆ.

ಖೈಬರ್‌ಪಖ್ತುನ್ವಾದ ಪರ್ವತ ಪ್ರದೇಶಗಳಲ್ಲಿ ರಸ್ತೆ ಅಪಘಾತಗಳು ಸಾಮಾನ್ಯ ಮತ್ತು ಹೆಚ್ಚಾಗಿ ಮಾರಕವಾಗಿವೆ ಏಕೆಂದರೆ ಅಪಾಯಕಾರಿ ಭೂಪ್ರದೇಶ, ತೀವ್ರ ಹವಾಮಾನ, ಆಗಾಗ್ಗೆ ಸಂಚಾರ ಉಲ್ಲಂಘನೆ, ಕಳಪೆ ರಸ್ತೆ ಪರಿಸ್ಥಿತಿಗಳು, ಕಳಪೆ ವಾಹನ ಪರಿಸ್ಥಿತಿಗಳು ಮತ್ತು ತರಬೇತಿ ಪಡೆಯದ ಚಾಲಕರು ಮುಂತಾದ ಅಂಶಗಳ ಸಂಯೋಜನೆಯಿಂದಾಗಿ. ''ಗಾಯಗೊಂಡವರಿಗೆ ಸಾಧ್ಯವಿರುವ ಎಲ್ಲಾ ಮತ್ತು ಉತ್ತಮ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ'' ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಸಂಬಂಧಿತ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಅವರ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ಈ ದುರಂತ ಘಟನೆಯಲ್ಲಿ ಸಂತ್ರಸ್ತ ಕುಟುಂಬಗಳ ದುಃಖದಲ್ಲಿ ಇಡೀ ರಾಷ್ಟ್ರವು ಸಮಾನವಾಗಿ ಭಾಗಿಯಾಗಿದೆ'' ಎಂದು ತಿಳಿಸಲಾಗಿದೆ.

ಥಾಣೆ: ಹಲ್ಲೆ ಬಳಿಕ ಯುವಕನ ಸಾವು; ಉದ್ವಿಗ್ನ ಪರಿಸ್ಥಿತಿ ನಿರ್ಮಾಣ, ಕಾರ್ಪೊರೇಟರ್ ಕಚೇರಿ ಮೇಲೆ ಕಲ್ಲು ತೂರಾಟ

ಥಾಣೆ, ಜು. 3 - ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಅಂಬರ್‌ನಾಥ್‌ನಲ್ಲಿ ಪ್ರೇಮ ಸಂಬಂಧದ ಆರೋಪದ ಮೇಲೆ 21 ವರ್ಷದ ಯುವಕನೊಬ್ಬನ ಮೇಲೆ ಹಲ್ಲೆ ನಡೆಸಿದ್ದು, ಬಳಿಕ ಆತ ಸಾವನ್ನಪ್ಪಿದ ನಂತರ ಉದ್ವಿಗ್ನತೆ ಉಂಟಾಗಿದೆ. ಆತನ ಸಂಬಂಧಿಕರು ಮತ್ತು ಸ್ಥಳೀಯರು ಕಾರ್ಪೊರೇಟರ್ ಕಚೇರಿಯ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಈ ಆರೋಪಗಳನ್ನು ಕಾರ್ಪೊರೇಟರ್ ನಿರಾಕರಿಸಿದ್ದಾರೆ.

ಜೂನ್ 23ರಂದು ಐದರಿಂದ ಏಳು ವ್ಯಕ್ತಿಗಳಿಂದ ತೀವ್ರವಾಗಿ ಥಳಿಸಲ್ಪಟ್ಟ ಓಂ ಖೋರೆ ಮುಂಬೈನ ಕೆಇಎಂ ಆಸ್ಪತ್ರೆಯಲ್ಲಿ ಗಾಯಗೊಂಡು ಸಾವನ್ನಪ್ಪಿದ ನಂತರ ಬುಧವಾರ ಅಂಬರ್‌ನಾಥ್ ಪೂರ್ವದ ಪಾಲೆಗಾಂವ್ ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿಯೊಬ್ಬರ ಚಿಕ್ಕಪ್ಪ ತನ್ನ ಸೊದರನ ಮಗಳೊಂದಿಗೆ ಪ್ರೇಮ ಸಂಬಂಧ ಹೊಂದಿದ್ದಾರೆಂದು ಶಂಕಿಸಿದ್ದರಿಂದ ಖೋರೆ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಅವರು ಹೇಳಿದರು. ಅಂಬರ್‌ನಾಥ್‌ನ ಶಿವಾಜಿನಗರ ಪೊಲೀಸರು ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನು ಬಂಧಿಸಿದರು.

ಆದಾಗ್ಯೂ, ಬುಧವಾರ ಖೋರೆ ಸಾವಿನ ಸುದ್ದಿ ಹರಡುತ್ತಿದ್ದಂತೆ, ಅವರ ಕುಟುಂಬ ಸದಸ್ಯರು, ಸಂಬಂಧಿಕರು ಮತ್ತು ನೂರಾರು ಕೋಪಗೊಂಡ ಸ್ಥಳೀಯರು ಪೊಲೀಸ್ ಠಾಣೆಯ ಕಡೆಗೆ ಮೆರವಣಿಗೆ ನಡೆಸಿದರು. ಮಾರ್ಗಮಧ್ಯೆ, ಅವರಲ್ಲಿ ಕೆಲವರು ಪಾಲೆಗಾಂವ್‌ನಲ್ಲಿರುವ ರಾಷ್ಟ್ರೀಯ ಪಕ್ಷದ ಕಾರ್ಪೊರೇಟರ್ ಒಬ್ಬರ ಕಚೇರಿಗೆ ಕಲ್ಲು ತೂರಾಟ ನಡೆಸಿ ಧ್ವಂಸ ಮಾಡಿದ್ದಾರೆ.

ಕಾರ್ಪೊರೇಟರ್ ಆರೋಪಿಗಳನ್ನು ರಕ್ಷಿಸಿದ್ದಾರೆ ಮತ್ತು ಕ್ರಮದಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದ್ದಾರೆ ಎಂದು ಸಂಬಂಧಿಕರು ಆರೋಪಿಸಿದ್ದಾರೆ. ಕಾರ್ಪೊರೇಟರ್ ಅಪರಾಧಿಗಳಲ್ಲಿ ಭಾಗಿಯಾಗಿದ್ದಾರೆ ಅಥವಾ ಸಹಾಯ ಮಾಡಿದ್ದಾರೆ ಎಂಬ ಆರೋಪಗಳನ್ನು ತಿರಸ್ಕರಿಸಿದ್ದಾರೆ ಮತ್ತು ತಮ್ಮ ಕಚೇರಿಯ ಮೇಲೆ ದಾಳಿ ಮಾಡಿದವರ ವಿರುದ್ಧ ಕಠಿಣ ಪೊಲೀಸ್ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಪೊಲೀಸ್ ಠಾಣೆಗೆ ತಲುಪಿದ ನಂತರ, ಖೋರೆ ಅವರ ಕುಟುಂಬ ಸದಸ್ಯರು ಭಾಗಿಯಾಗಿರುವ ಎಲ್ಲ ವ್ಯಕ್ತಿಗಳನ್ನು ಬಂಧಿಸುವವರೆಗೆ ಯುವಕನ ಶವವನ್ನು ಪಡೆಯಲು ಅಥವಾ ಸ್ಥಳಾಂತರಿಸಲು ನಿರಾಕರಿಸಿದರು. ಬಲಿಪಶುವಿನ ಸಂಬಂಧಿಕರು ಆರಂಭದಲ್ಲಿ ಪೊಲೀಸರಿಗೆ ಏಳು ಹೆಸರುಗಳನ್ನು ನೀಡಿದ್ದೇವೆ ಎಂದು ಹೇಳಿಕೊಂಡರು, ಆದರೆ ಐವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಸಂದೀಪ್ ಗಾವ್ಲಿ, ರವಿ ಪರ್ಮಾರ್, ನಯನ್ ಮಾದ್ವಿ, ಸಚಿನ್ ಪಾಟೀಲ್ ಮತ್ತು ರಾಜ್ ದೇಸೇಕರ್ ಎಂದು ಗುರುತಿಸಲಾದ ಐದು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ ಮತ್ತು ಇತರರನ್ನು ಪತ್ತೆಹಚ್ಚಲು ಪ್ರಯತ್ನಗಳು ನಡೆಯುತ್ತಿವೆ ಎಂದು ಪೊಲೀಸ್ ಉಪ ಆಯುಕ್ತ ಸಚಿನ್ ಗೋರೆ ತಿಳಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪ್ರದೇಶದಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ, ಈ ವಿಷಯದ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಹೇಳಿದರು.

ವಿಧಾನಸಭೆಯಲ್ಲಿ ಮುಂಬಯಿ ಕುರಿತ ಚರ್ಚೆ ಸಮಯ ಬಿಎಂಸಿ ಅಧಿಕಾರಿಗಳ ಅನುಪಸ್ಥಿತಿಗೆ ವಿಪಕ್ಷ ಸದಸ್ಯರ ಆಕ್ರೋಶ

ಮುಂಬಯಿ, ಜು. 3- ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಹಾನಗರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಇಂದು ನಡೆದ ಚರ್ಚೆಯ ಸಮಯದಲ್ಲಿ ಬಿಎಂಸಿಯ ಹಿರಿಯ ಅಧಿಕಾರಿಗಳ ಅನುಪಸ್ಥಿತಿಯು ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರಿಂದ ಪ್ರತಿಭಟನೆಗೆ ಕಾರಣವಾಯಿತು.

ಬಿಜೆಪಿ ಶಾಸಕ ಅತುಲ್ ಭಟ್ಟಲ್ಕರ್ ಈ ವಿಷಯವನ್ನು ಪ್ರಸ್ತಾಪಿಸಿದರು, ಸಭೆಯು ಮುಂಬಯಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸುತ್ತಿರುವಾಗ ಬೃಹನ್ಮುಂಬೈ ಮಹಾನಗರ ಪಾಲಿಕೆಯ ಯಾವುದೇ ಹಿರಿಯ ಅಧಿಕಾರಿ ಹಾಜರಿಲ್ಲದಿರುವುದು ಸ್ವೀಕಾರಾರ್ಹವಲ್ಲ ಎಂದು ಹೇಳಿದರು.

ನಡೆಯುತ್ತಿರುವ ಅಧಿವೇಶನದಲ್ಲಿ ಈ ಹಿಂದೆ ಎತ್ತಲಾದ ಆಕ್ಷೇಪಣೆಗಳ ಹೊರತಾಗಿಯೂ ಪಾಲಿಕೆ ಅಧಿಕಾರಿಗಳು ಪದೇ ಪದೇ ಕಲಾಪಗಳಿಗೆ ಹಾಜರಾಗಲು ವಿಫಲರಾಗಿದ್ದಾರೆ ಎಂದು ಅವರು ದೂರಿದರು.

ಬಿಜೆಪಿ ಶಾಸಕ ಅಮಿತ್ ಸಾಟಮ್ ಮತ್ತು ಕಾಂಗ್ರೆಸ್ ಶಾಸಕ ಅಸ್ಲಾಂ ಶೇಖ್ ಕೂಡ ಬಿಎಂಸಿ ಅಧಿಕಾರಿಗಳು ಹಾಜರಿಲ್ಲ ಎಂದು ಟೀಕಿಸಿದರು.

ಸದನದ ಎರಡೂ ಕಡೆಯ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿ,ಅಧಿಕಾರಿಗಳು ಪಾಲಿಕೆ ಆಡಳಿತದ ಕುರಿತ ಚರ್ಚೆಗಳ ಸಮಯದಲ್ಲಿ ಹಾಜರಿರಬೇಕು.ಇದರಿಂದಾಗಿ ಪ್ರಶ್ನೆಗಳಿಗೆ ಉತ್ತರಿಸಬಹುದು ಮತ್ತು ಅಗತ್ಯ ಮಾಹಿತಿಯನ್ನು ತಕ್ಷಣವೇ ಒದಗಿಸಬಹುದು ಎಂದು ಹೇಳಿದರು. ಪ್ರತಿಭಟನೆಯಿಂದಾಗಿ ಕಲಾಪಕ್ಕೆ ಸ್ವಲ್ಪ ಸಮಯ ಅಡ್ಡಿಯಾಯಿತು.

ಈ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವ ಶಂಭುರಾಜ್ ದೇಸಾಯಿ, ಮುಂಬಯಿ ಸಂಬಂಧಿತ ವಿಷಯಗಳ ಕುರಿತು ವಿಧಾನಸಭೆಯಲ್ಲಿ ಚರ್ಚೆ ಆರಂಭವಾದಾಗ ಬಿಎಂಸಿ ಅಧಿಕಾರಿಗಳು ವಿಧಾನ ಪರಿಷತ್ತಿನ ಕಲಾಪಗಳಿಗೆ ಹಾಜರಾಗಿದ್ದರು ಎಂದು ಹೇಳಿದರು.

ಅಧಿಕಾರಿಗಳನ್ನು ತಕ್ಷಣ ಕರೆಯಲಾಗುವುದು ಎಂದು ಅವರು ಸದನಕ್ಕೆ ಭರವಸೆ ನೀಡಿದರು. ಸ್ವಲ್ಪ ಸಮಯದ ಬಳಿಕ ಹಿರಿಯ ಬಿಎಂಸಿ ಅಧಿಕಾರಿಗಳು ವಿಧಾನಸಭೆಗೆ ಆಗಮಿಸಿದಾಗ ಕಲಾಪ ಪುನರಾರಂಭಗೊಂಡಿತು.

ಈ ವಾರದ ಆರಂಭದಲ್ಲಿ, ಅಧಿಕಾರಿಗಳ ಗ್ಯಾಲರಿಯಲ್ಲಿ ಪಾಲಿಕೆ ಅಧಿಕಾರಿಗಳ ಅನುಪಸ್ಥಿತಿಗೆ ಸ್ಪೀಕರ್ ರಾಹುಲ್ ನಾರ್ವೇಕರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ,ನಗರಾಭಿವೃದ್ಧಿ ಕಾರ್ಯದರ್ಶಿಗೆ ನೋಟಿಸ್ ನೀಡುತ್ತಿರುವುದಾಗಿ ಹೇಳಿದ್ದರು.

ಆಷಾಢಿ ಏಕಾದಶಿ ಹಿನ್ನೆಲೆ:ಸಚಿವರಿಂದ ಪಂಢರಪುರ ವಾರ್ಕರಿಗಳಿಗೆ ನೀರು ಪೂರೈಕೆ ಯೋಜನೆ ಪರಿಶೀಲನೆ

ಮುಂಬಯಿ,ಜು.3- ಮುಂಬರುವ ಆಷಾಢಿ ಏಕಾದಶಿ ಪಾಲ್ಕಿ ಉತ್ಸವದ ಸಂದರ್ಭದಲ್ಲಿ ವಾರ್ಕರಿ ಭಕ್ತಾದಿಗಳಿಗೆ ಕುಡಿಯುವ ನೀರು ಒದಗಿಸಲು ಜಲಸಂಪನ್ಮೂಲ ಇಲಾಖೆ ಸಿದ್ಧಪಡಿಸಿರುವ ವಿಸ್ತೃತ ಯೋಜನೆಯನ್ನು ಜಲಸಂಪನ್ಮೂಲ ಸಚಿವ ರಾಧಾಕೃಷ್ಣ ವಿಖೆ ಪಾಟೀಲ್ ವಿಧಾನಭವನದಲ್ಲಿ ಪರಿಶೀಲಿಸಿದರು. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರ ಸೂಚನೆಗಳ ಅನ್ವಯ, ಪಾಲ್ಕಿ ಮಾರ್ಗದಲ್ಲಿ ನೀರು ಪೂರೈಕೆ ಮತ್ತು ಕಾಲುವೆಗಳ ಮೂಲಕ ನೀರು ಬಿಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಜು.8 ರಂದು ಆರಂಭವಾಗಲಿರುವ ಸಂತ ಜ್ಞಾನೇಶ್ವರ ಮಹಾರಾಜ್ ಮತ್ತು ಸಂತ ತುಕಾರಾಂ ಮಹಾರಾಜ್ ಅವರ ಪಾಲ್ಕಿ ಉತ್ಸವದ ವಿವಿಧ ತಂಗುದಾಣಗಳಲ್ಲಿ ನೀರಿನ ಸೌಕರ್ಯಕ್ಕಾಗಿ ಇಂದ್ರಾಯಣಿ ನದಿ, ಖಡಕ್ವಾಸ್ಲಾ, ವೀರ್‌ಮತ್ತು ಉಜನಿ ಅಣೆಕಟ್ಟುಗಳ ಕಾಲುವೆಗಳ ಮೂಲಕ ಹಂತ ಹಂತವಾಗಿ ನೀರು ಬಿಡಲು ಯೋಜಿಸಲಾಗಿದೆ.

ಅಲಂದಿ ಮತ್ತು ದೇಹೂ ಪರಿಸರಕ್ಕಾಗಿ ಇಂದ್ರಾಯಣಿ ನದಿಗೆ ಸುಮಾರು 150 ರಿಂದ 200 ಎಂಸಿಎಫ್‌ಟಿ ನೀರನ್ನು ಬಿಡಲಾಗುವುದು.

ಬಾರಾಮತಿ ಮತ್ತು ಇಂದಾಪುರ ತಾಲೂಕುಗಳ ಕುಡಿಯುವ ನೀರಿನ ಅಗತ್ಯಕ್ಕಾಗಿ ಜು.5 ರಿಂದ ನೀರಾ ಎಡದಂಡೆ ಕಾಲುವೆ ಮೂಲಕ ನೀರು ಹರಿಸಲಾಗುವುದು. ಅಲ್ಲದೆ, ಉಜನಿ ಅಣೆಕಟ್ಟಿನಿಂದ ಭೀಮಾ ನದಿಗೆ 4,000 ಕ್ಯೂಸೆಕ್ಸ್ ನೀರು ಬಿಡಲು ಯೋಜಿಸಲಾಗಿದ್ದು, ಪಂಢರಪುರದಲ್ಲಿ ಭಕ್ತರ ಸ್ನಾನ ಮತ್ತು ಧಾರ್ಮಿಕ ವಿಧಿವಿಧಾನಗಳಿಗೆ ಅನುಕೂಲವಾಗಲಿದೆ. ಈ ವರ್ಷ ಮಳೆಯ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ನೀರಿನ ವ್ಯರ್ಥವನ್ನು ತಡೆದು, ಯೋಜಿತ ರೀತಿಯಲ್ಲಿ ನೀರನ್ನು ಬಳಸಲು ಸಚಿವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಏಕರೂಪ ನಾಗರಿಕ ಸಂಹಿತೆ ಶಾಸನ ರೂಪಿಸಲು ಮಹಾರಾಷ್ಟ್ರ ಸರ್ಕಾರದಿಂದ ಎರಡು ವಾರಗಳಲ್ಲಿ ಸಮಿತಿ ರಚನೆ

ಮುಂಬಯಿ, ಜು. 3 - ಏಕರೂಪ ನಾಗರಿಕ ಸಂಹಿತೆಗಾಗಿ ಶಾಸನವನ್ನು ರೂಪಿಸಲು ಮಹಾರಾಷ್ಟ್ರ ಸರ್ಕಾರ ಎರಡು ವಾರಗಳಲ್ಲಿ ಸಮಿತಿಯನ್ನು ರಚಿಸುವ ನಿರೀಕ್ಷೆಯಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.ಸಮಿತಿಯ ರಚನೆ ಮತ್ತು ಉಲ್ಲೇಖದ ನಿಯಮಗಳ ಕುರಿತು ವಿವರಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ ಎಂದು ಅವರು ಹೇಳಿದ್ದಾರೆ.

''ಏಕರೂಪ ನಾಗರಿಕ ಸಂಹಿತೆಗಾಗಿ ಶಾಸನವನ್ನು ರಚಿಸುವ ಸಮಿತಿಯು ಪ್ರಕ್ರಿಯೆಯಲ್ಲಿದೆ ಮತ್ತು ಎರಡು ವಾರಗಳಲ್ಲಿ ಸ್ಥಾಪಿಸಲಾಗುವುದು'' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಏಕರೂಪ ನಾಗರಿಕ ಸಂಹಿತೆಯು ಎಲ್ಲಾ ನಾಗರಿಕರಿಗೆ ಮದುವೆ, ವಿಚ್ಛೇದನ, ಆನುವಂಶಿಕತೆ, ದತ್ತು ಸ್ವೀಕಾರ ಇತ್ಯಾದಿಗಳನ್ನು ನಿಯಂತ್ರಿಸುವ ಸಾಮಾನ್ಯ ಕಾನೂನುಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿರುವ ಸಾಂವಿಧಾನಿಕ ನಿರ್ದೇಶನವಾಗಿದೆ.

ಪುಣೆ:ಕಂದಕದಲ್ಲಿ ಮುಳುಗಿ 2 ವರ್ಷದ ಮಗು ಸಾವು; ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲು

ಪುಣೆ, ಜು. 3 - ಮಹಾರಾಷ್ಟ್ರದ ಪುಣೆ ಜಿಲ್ಲೆಯಲ್ಲಿ ಮಳೆ ನೀರು ಮತ್ತು ಕೊಳಚೆ ನೀರು ತುಂಬಿದ್ದ ಸುಮಾರು ಮೂರು ಅಡಿ ಆಳದ ಕಂದಕಕ್ಕೆ ಬಿದ್ದು ಎರಡು ವರ್ಷದ ಬಾಲಕ ಸಾವನ್ನಪ್ಪಿದ್ದು, ಘಟನೆಗೆ ಸಂಬಂಧಿಸಿ ಪೊಲೀಸರು ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಜೂನ್ 30 ರಂದು ಲೋನಿ ಗ್ರಾಮ ಪಂಚಾಯತ್ ಪ್ರದೇಶದ ಕದವಸ್‌ವಾಕ್ ವಸ್ತಿಯಲ್ಲಿ ಈ ಘಟನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಮಳೆನೀರಿನ ಹರಿವನ್ನು ಸುಗಮಗೊಳಿಸಲು ಚರಂಡಿಯ ಪಕ್ಕದಲ್ಲಿ ಕಂದಕವನ್ನು ಅಗೆಯಲಾಗಿತ್ತು. ಮಳೆನೀರು ಮತ್ತು ಕೊಳಚೆ ನೀರು ಸಂಗ್ರಹವಾಗಿತ್ತು. ಹತ್ತಿರದ ವಸಾಹತು ಪ್ರದೇಶದಲ್ಲಿ ವಾಸಿಸುತ್ತಿದ್ದ ಮಗು ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಅದರಲ್ಲಿ ಬಿದ್ದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಗು ಬಹಳ ದಿನಗಳಿಂದ ಕಾಣೆಯಾಗಿರುವುದನ್ನು ಅರಿತುಕೊಂಡ ನಂತರ ಪೋಷಕರು ಅವನನ್ನು ಹುಡುಕಲು ಪ್ರಾರಂಭಿಸಿದರು. ನಂತರ, ಅವನ ಶವವನ್ನು ಕಂದಕದಿಂದ ಹೊರತೆಗೆಯಲಾಯಿತು.

ಸ್ಥಳದಲ್ಲಿ ಸಾಕಷ್ಟು ಸುರಕ್ಷತಾ ಕ್ರಮಗಳನ್ನು ಒದಗಿಸುವಲ್ಲಿ ವಿಫಲವಾದ ಆರೋಪದ ಮೇಲೆ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಂಧುದುರ್ಗ: ಕಾಣೆಯಾದ ಮಹಿಳೆಯನ್ನು ಕುಟುಂಬದೊಂದಿಗೆ ಮತ್ತೆ ಸೇರಿಸಲು ಸಹಾಯ ಮಾಡಿದ ಗೂಗಲ್ ಹುಡುಕಾಟ

ಥಾಣೆ, ಜು. 3 - ಎರಡು ತಿಂಗಳ ಹಿಂದೆ ಮಹಾರಾಷ್ಟ್ರದ ಸಿಂಧುದುರ್ಗ ಜಿಲ್ಲೆಯಿಂದ ಕಾಣೆಯಾಗಿದ್ದ ಮಾನಸಿಕ ಅಸ್ವಸ್ಥ ಮಹಿಳೆಯೊಬ್ಬರು ಗೂಗಲ್ ಹುಡುಕಾಟ ಮತ್ತು ಮಹಾರಾಷ್ಟ್ರದ ಸಾಮಾಜಿಕ ಸಂಘಟನೆಯ ಪ್ರಯತ್ನಗಳ ಸಹಾಯದಿಂದ ತಮ್ಮ ಕುಟುಂಬದೊಂದಿಗೆ ಯಶಸ್ವಿಯಾಗಿ ಮತ್ತೆ ಒಂದಾಗಿದ್ದಾರೆ ಎಂದು ಅದರ ಪ್ರತಿನಿಧಿಗಳು ಶುಕ್ರವಾರ ತಿಳಿಸಿದ್ದಾರೆ.

ಸಿಂಧುದುರ್ಗ ಜಿಲ್ಲೆಯ ವಜರೆ ಗ್ರಾಮದ ನಿವಾಸಿ ಪೂಜಾ ಭಗವಾನ್ ಗವಾಸ್ ಮೇ ತಿಂಗಳಲ್ಲಿ ತನ್ನ ಮನೆಯಿಂದ ನಾಪತ್ತೆಯಾಗಿದ್ದು, ಸಾವಂತವಾಡಿ ಪಟ್ಟಣದ ಬೀದಿಗಳಲ್ಲಿ ಅಲೆದಾಡುತ್ತಿದ್ದಾಗ ಪತ್ತೆಯಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಪೊಲೀಸರು ಆಕೆಯನ್ನು ಜೀವನ್ ಆನಂದ್ ಸಂಸ್ಥೆ ನಡೆಸುತ್ತಿರುವ ಸನ್ವಿತಾ ಆಶ್ರಮಕ್ಕೆ ದಾಖಲಿಸಿದ್ದಾರೆ.

ಸೀಮಿತ ಮಾಹಿತಿಯ ಆಧಾರದ ಮೇಲೆ, ಜೀವನ್ ಆನಂದ್ ಸಂಸ್ಥೆಯ ಟ್ರಸ್ಟಿ ಕಿಸಾನ್ ಚೌರೆ, ಗೂಗಲ್ ಹುಡುಕಾಟವನ್ನು ಬಳಸಿಕೊಂಡು ಮಹಿಳೆಯ ಕುಟುಂಬಕ್ಕಾಗಿ ಹುಡುಕಾಟವನ್ನು ಪ್ರಾರಂಭಿಸಿದರು ಮತ್ತು ಗ್ರಾಮ ಅಧಿಕಾರಿಗಳ ಸಹಾಯದಿಂದ ಅವರನ್ನು ವಜರೆಯಲ್ಲಿ ಪತ್ತೆಹಚ್ಚಿದರು.

ಮಹಿಳೆಯ ಸಂಬಂಧಿಕರು ಆಕೆಯ ಫೋಟೋವನ್ನು ಗುರುತಿಸಿದರು ಮತ್ತು ಗುರುವಾರ ಆಕೆ ಕುಟುಬದೊಂದಿಗೆ ಮತ್ತೆ ಸೇರಿಕೊಂಡರು ಎಂದು ಅಧಿಕಾರಿ ಹೇಳಿದರು.

ಇಂತಹ ಕಾರ್ಯಾಚರಣೆಗಳಿಗೆ ಅಪಾರ ತಾಳ್ಮೆ ಬೇಕಾಗುತ್ತದೆ ಮತ್ತು ಕುಟುಂಬಗಳನ್ನು ಪತ್ತೆಹಚ್ಚುವಲ್ಲಿ ಗೂಗಲ್‌ನಂತಹ ಡಿಜಿಟಲ್ ಸಾಧನಗಳು ನಿರ್ಣಾಯಕವಾಗಿವೆ ಎಂದು ಚೌರೆ ಹೇಳಿದರು.

11 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಮದರಸಾ ಶಿಕ್ಷಕನಿಗೆ 20 ವರ್ಷ ಜೈಲು ಶಿಕ್ಷೆ

ಹೈದರಾಬಾದ್, ಜು. 3 - 2022 ರಲ್ಲಿ 11 ವರ್ಷದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಇಲ್ಲಿನ ನ್ಯಾಯಾಲಯವು ಮದರಸಾ ಶಿಕ್ಷಕನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ಬಾಲಾಪುರ ಪೊಲೀಸ್ ಠಾಣೆಗೆ ಮಾರ್ಚ್ 23, 2022 ರಂದು ವ್ಯಕ್ತಿಯೊಬ್ಬ ನೀಡಿದ ದೂರಿನ ಪ್ರಕಾರ, ಆತನ 11 ವರ್ಷದ ಮಗ ಶಾಹೀನ್ ನಗರದ ಮದರಸಾ ಜಾಮಿಯಾ ನೂರುಲ್ ಅನ್ವರ್‌ಗೆ ನಿಯಮಿತವಾಗಿ ಹಾಜರಾಗುತ್ತಿದ್ದ. ತನ್ನ ಮಗ ಒಂದು ವಾರದಿಂದ ಮದರಸಾಕ್ಕೆ ಹೋಗುವುದನ್ನು ನಿಲ್ಲಿಸಿದ್ದ ಮತ್ತು ತುಂಬಾ ತೊಂದರೆಗೀಡಾಗಿರುವಂತೆ ಕಂಡುಬಂದಿದ್ದನ್ನು ಗಮನಿಸಿದ ದೂರುದಾರರು ಆತನನ್ನು ಕಾರಣಗಳ ಬಗ್ಗೆ ಕೇಳಿದರು.

ಸುಮಾರು ಒಂದು ತಿಂಗಳ ಹಿಂದೆ, ತನ್ನ ಮದರಸಾ ಶಿಕ್ಷಕ ಸೈಯದ್ ನದೀಮ್ (22) ತನ್ನನ್ನು ಬಲವಂತವಾಗಿ ತನ್ನ ಮನೆಗೆ ಕರೆದೊಯ್ದು, ವಿವಸ್ತ್ರಗೊಳಿಸಿ, ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆಸಿದ್ದಾನೆ ಎಂದು ಬಾಲಕ ಬಹಿರಂಗಪಡಿಸಿದ್ದಾನೆ.ಈ ವಿಷಯವನ್ನು ಯಾರಿಗಾದರೂ ತಿಳಿಸಿದರೆ ಆರೋಪಿ ಬಾಲಕನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಗುರುವಾರ ತಡರಾತ್ರಿ ಪೊಲೀಸ್ ಪ್ರಕಟಣೆ ತಿಳಿಸಿದೆ.

ನಗರ ಪೊಲೀಸರ ತನಿಖೆ ಮತ್ತು ವಿಚಾರಣೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಪೋಕ್ಸೊ ಪ್ರಕರಣಗಳನ್ನು ನಿರ್ವಹಿಸುವ ನ್ಯಾಯಾಲಯವು ಗುರುವಾರ ಆರೋಪಿ ಸೈಯದ್ ನದೀಮ್‌ನನ್ನು ತಪ್ಪಿತಸ್ಥನೆಂದು ಘೋಷಿಸಿ, ಅವನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು 10,000 ರೂ. ದಂಡ ವಿಧಿಸಿತು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಐಪಿಸಿಯ ಸಂಬಂಧಿತ ವಿಭಾಗಗಳ ಅಡಿಯಲ್ಲಿ ಆರೋಪಿಗೆ ಶಿಕ್ಷೆ ವಿಧಿಸಲಾಗಿದೆ.

ಪಂಜಾಬ್: ತನ್ನ ಮೂವರು ಮಕ್ಕಳನ್ನು ಕೊಂದು ಆತ್ಮಹತ್ಯೆಗೆ ಶರಣಾದ ತಾಯಿ

ಚಂಡೀಗಢ, ಜು. 3 - ಪಂಜಾಬ್‌ನ ಮಾನ್ಸಾದಲ್ಲಿ ತಾಯಿಯೊಬ್ಬರು ತನ್ನ ಮೂವರು ಮಕ್ಕಳನ್ನು ಕೊಂದ ನಂತರ ತನ್ನ ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ. ಮಹಿಳೆಯನ್ನು ಸಂದೀಪ್ ಕೌರ್ (36) ಎಂದು ಗುರುತಿಸಲಾಗಿದೆ ಎಂದು ಮಾನ್ಸಾ ನಗರ ಪೊಲೀಸ್ ಠಾಣೆ 2ರ ಸ್ಟೇಷನ್ ಹೌಸ್ ಆಫೀಸರ್ (ಎಸ್‌ಎಚ್‌ಒ) ಕುಲ್ವಂತ್ ಸಿಂಗ್ ಹೇಳಿದ್ದಾರೆ.

ಗುರುವಾರ ಸಂಜೆ ಮಾನ್ಸಾದಲ್ಲಿರುವ ತಮ್ಮ ಬಾಡಿಗೆ ಮನೆಯಲ್ಲಿ ಕೌರ್ ನೇಣು ಬಿಗಿದುಕೊಂಡಿರುವುದು ಕಂಡುಬಂದರೆ, ಅವರ ಮೂವರು ಮಕ್ಕಳಾದ ಖುಷ್‌ಪ್ರೀತ್ ಕೌರ್ (12), ಸಮನ್‌ದೀಪ್ ಕೌರ್ (7) ಮತ್ತು ಅವರ ಎರಡು ವರ್ಷದ ಮಗ ಮೃತಪಟ್ಟಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೌರ್ ತನ್ನ ಹಿರಿಯ ಮಗಳಿಗೆ ವಿಷಕಾರಿ ವಸ್ತುವನ್ನು ನೀಡಿದ್ದರೆ, ಇಬ್ಬರು ಕಿರಿಯ ಮಕ್ಕಳನ್ನು ಕತ್ತು ಹಿಸುಕಿ ಕೊಂದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ನಂತರ ಸಾವಿಗೆ ನಿಖರವಾದ ಕಾರಣವನ್ನು ದೃಢಪಡಿಸಲಾಗುವುದು ಎಂದು ಎಸ್‌ಎಚ್‌ಒ ತಿಳಿಸಿದ್ದಾರೆ.ಗುರುವಾರ ಸಂಜೆ ಮನೆಗೆ ಭೇಟಿ ನೀಡಿದ ಸಂಬಂಧಿಯೊಬ್ಬರು ಘಟನೆಯ ಬಗ್ಗೆ ನೆರೆಹೊರೆಯವರಿಗೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಕೌರ್ ಅವರ ಪತಿ ಕೆಲವು ತಿಂಗಳ ಹಿಂದೆ ಸಾವನ್ನಪ್ಪಿದ್ದರು ಮತ್ತು ಅವರ ತಾಯಿ ಕಾರ್ಮಿಕರಾಗಿದ್ದರು ಎಂದು ಅವರು ಹೇಳಿದರು. ಅವರು ಮರುಮದುವೆಯಾಗಿದ್ದರು ಮತ್ತು ಅವರ ಇಬ್ಬರು ಹೆಣ್ಣುಮಕ್ಕಳು ಆಕೆಯ ಮೊದಲ ಮದುವೆಯಿಂದ ಹುಟ್ಟಿದವರು ಎಂದು ಎಸ್‌ಎಚ್‌ಒ ತಿಳಿಸಿದ್ದಾರೆ.ಶಂಕಿತ ಕೊಲೆ-ಆತ್ಮಹತ್ಯೆಯ ಹಿಂದಿನ ಕಾರಣಗಳನ್ನು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿರಾರ್-ಅಲಿಬಾಗ್ ಕಾರಿಡಾರ್ ಯೋಜನೆಗೆ ಚಾಲನೆ: ಡಹಾಣುವಿನ 30 ಹೆಕ್ಟೇರ್ ಭೂಮಿ ಅರಣ್ಯ ಇಲಾಖೆಗೆ ಹಸ್ತಾಂತರ

ಮುಂಬಯಿ,ಜು.3 - ಮಹಾರಾಷ್ಟ್ರ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ (ಎಂಎಸ್‌ಆರ್‌ಟಿಸಿ) ಹಮ್ಮಿಕೊಂಡಿರುವ ಮಹತ್ವಾಕಾಂಕ್ಷೆಯ ವಿರಾರ್-ಅಲಿಬಾಗ್ ಬಹುಪಯೋಗಿ ಸಾರಿಗೆ ಕಾರಿಡಾರ್ ಯೋಜನೆಗೆ ಇದ್ದ ದೊಡ್ಡ ಅಡಚಣೆಯೊಂದು ನಿವಾರಣೆಯಾಗಿದೆ. ಈ ಯೋಜನೆಯ ಮಾರ್ಗದಲ್ಲಿ ಬರುವ ಅರಣ್ಯ ಭೂಮಿಯ ಸಮಸ್ಯೆಯನ್ನು ಬಗೆಹರಿಸಲು ಪಾಲ್ಘರ್ ಜಿಲ್ಲೆಯ ಡಹಾಣು ತಾಲೂಕಿನ ಚಂಡಿಗಾಂವ್‌ನಲ್ಲಿರುವ 30 ಹೆಕ್ಟೇರ್ ಸರಕಾರಿ ಭೂಮಿಯನ್ನು ಅರಣ್ಯ ಇಲಾಖೆಗೆ ಪರ್ಯಾಯ ಅರಣ್ಯೀಕರಣಕ್ಕಾಗಿ ಹಸ್ತಾಂತರಿಸಲು ಕಂದಾಯ ಇಲಾಖೆ ಅನುಮೋದನೆ ನೀಡಿದೆ. ಮುಖ್ಯಮಂತ್ರಿಗಳ ಸೂಚನೆ ಹಾಗೂ ಕಂದಾಯ ಸಚಿವರ ಮಾರ್ಗದರ್ಶನದಲ್ಲಿ ಈ ಪ್ರಮುಖ ನಿರ್ಧಾರ ಕೈಗೊಳ್ಳಲಾಗಿದ್ದು, ಇದನ್ನು 'ತುರ್ತು ಸಾರ್ವಜನಿಕ ಯೋಜನೆ' ಎಂದು ಸರಕಾರ ಘೋಷಿಸಿದೆ.

ಈ ಯೋಜನೆಯಡಿ ವಸಾಯಿಯ ನವಘರ್‌ನಿಂದ ಉರಾಣ್‌ನ ಚಿರ್ನೇರ್‌ವರೆಗೆ 80 ಕಿಲೋಮೀಟರ್ ಉದ್ದದ ರಸ್ತೆ ನಿರ್ಮಿಸಲಾಗುತ್ತಿದೆ.

ಈ ಭೂಮಿಯನ್ನು ಪ್ರತಿ ಚದರ ಮೀಟರ್‌ಗೆ ಕೇವಲ ಒಂದು ರೂಪಾಯಿಯ ನಾಮಮಾತ್ರ ದರದಲ್ಲಿ ಒದಗಿಸಲಾಗುತ್ತಿದ್ದು, ಮುಂದಿನ ಮೂರು ತಿಂಗಳೊಳಗೆ ಅರಣ್ಯ ಇಲಾಖೆಗೆ ಒಪ್ಪಿಸಬೇಕಿದೆ. ಪಾಲ್ಘರ್ ಮತ್ತು ರಾಯಗಢ ಜಿಲ್ಲೆಗಳನ್ನು ನೇರವಾಗಿ ಸಂಪರ್ಕಿಸುವ ಈ ಕಾರಿಡಾರ್‌ನಿಂದ ಮುಂಬಯಿ ಮಹಾನಗರ ಪ್ರದೇಶದ ಸಂಚಾರ ದಟ್ಟಣೆ ಗಣನೀಯವಾಗಿ ಕಡಿಮೆಯಾಗಲಿದ್ದು, ಕೈಗಾರಿಕಾ ಹಾಗೂ ಆರ್ಥಿಕ ಪ್ರಗತಿಗೆ ಹೊಸ ವೇಗ ಸಿಗಲಿದೆ.

ಅಮರನಾಥಯಾತ್ರೆ ಏಕತೆಯ ಪ್ರತಿಬಿಂಬ : ಪ್ರಧಾನಿ ಮೋದಿ

ಹೊಸದಿಲ್ಲಿ, ಜು.3- ಪ್ರಧಾನಿ ನರೇಂದ್ರ ಮೋದಿ ಅವರು ಅಮರನಾಥ ಯಾತ್ರೆಯ ಭಕ್ತರಿಗೆ ವಿಶೇಷ ಪತ್ರ ಬರೆದಿದ್ದು, ವಾರ್ಷಿಕ ಯಾತ್ರೆಯನ್ನು ಒಂದು ದೊಡ್ಡ ಆಶೀರ್ವಾದ ಎಂದು ಬಣ್ಣಿಸಿದ್ದಾರೆ ಮತ್ತು ಯಾತ್ರಿಕರು ತಮ ಆಧ್ಯಾತಿಕ ಪ್ರಯಾಣವನ್ನು ಸ್ವಚ್ಛತೆ, ಸುರಕ್ಷತೆ, ಸ್ಥಳೀಯ ಜೀವನೋಪಾಯ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರ ನಿರ್ಮಾಣದ ಕಡೆಗೆ ಸಾಮೂಹಿಕ ಬದ್ಧತೆಯಾಗಿ ಪರಿವರ್ತಿಸಿಕೊಳ್ಳುವಂತೆ ಕರೆ ನೀಡಿದ್ದಾರೆ.

ಗೌರವಾನ್ವಿತ ಪ್ರಧಾನ ಮಂತ್ರಿಗಳಿಂದ ಯಾತ್ರಿಕರಿಗೆ ಪತ್ರ ಎಂಬ ಎರಡು ಪುಟಗಳ ಸಂದೇಶದಲ್ಲಿ, ಪ್ರಧಾನಿ ಮೋದಿ ಭಕ್ತರನ್ನು ಹರ ಹರ ಮಹಾದೇವ್ ಮತ್ತು ಜೈ ಬಾಬಾ ಬರ್ಫಾನಿ ಎಂದು ಸ್ವಾಗತಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿರುವ ಅಮರನಾಥ ಗುಹಾ ದೇವಾಲಯಕ್ಕೆ ಪವಿತ್ರ ಯಾತ್ರೆ ಭಾರತದ ಶಾಶ್ವತ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತದೆ ಎಂದು ಹೇಳಿದರು. ಜಮ್ಮು ಮತ್ತು ಕಾಶ್ಮೀರದಲ್ಲಿ ಪವಿತ್ರ ಅಮರನಾಥ ಯಾತ್ರೆಯಲ್ಲಿ ಭಾಗವಹಿಸುವುದು ಸ್ವತಃ ಒಂದು ದೊಡ್ಡ ಆಶೀರ್ವಾದ ಎಂದು ಪ್ರಧಾನಿ ಬರೆದಿದ್ದಾರೆ, ಪ್ರತಿ ವರ್ಷ ದೇಶಾದ್ಯಂತದ ಭಕ್ತರು ಯಾತ್ರೆ ಕೈಗೊಳ್ಳುವ ಅವಕಾಶಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ ಎಂದು ಹೇಳಿದರು.

ಈ ಯಾತ್ರೆಯನ್ನು ಭಾರತದ ಆಧ್ಯಾತ್ಮಿಕ ಸಂಪ್ರದಾಯದಲ್ಲಿ ಶಾಶ್ವತ ಅಧ್ಯಾಯ ಎಂದು ಕರೆದ ಪ್ರಧಾನಿ ಮೋದಿ, ವಿವಿಧ ಪ್ರದೇಶಗಳು, ಭಾಷೆಗಳು ಮತ್ತು ಸಂಪ್ರದಾಯಗಳ ಭಕ್ತರು ಶಿವನ ಮೇಲಿನ ಹಂಚಿಕೆಯ ಭಕ್ತಿಯೊಂದಿಗೆ ಒಟ್ಟುಗೂಡುವುದರಿಂದ ಇದು ದೇಶದ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.ವಿವಿಧ ರಾಜ್ಯಗಳ ಜನರು, ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ವೈವಿಧ್ಯಮಯ ಸಂಪ್ರದಾಯಗಳನ್ನು ಅನುಸರಿಸುತ್ತಾರೆ, ಮಹಾದೇವನ ಮೇಲಿನ ತಮ್ಮ ಭಕ್ತಿಯಿಂದ ಈ ಪ್ರಯಾಣವನ್ನು ಪೂರ್ಣಗೊಳಿಸುತ್ತಾರೆ ಎಂದು ಅವರು ಬರೆದಿದ್ದಾರೆ. ಯಾತ್ರೆಯ ಸುಗಮ ನಡವಳಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಶ್ರೀ ಅಮರನಾಥಜಿ ದೇಗುಲ ಮಂಡಳಿ, ಜಮ್ಮು ಮತ್ತು ಕಾಶ್ಮೀರ ಆಡಳಿತ ಮತ್ತು ಭದ್ರತಾ ಸಂಸ್ಥೆಗಳು ವಹಿಸಿದ ಪಾತ್ರವನ್ನು ಪ್ರಧಾನಿಯವರು ಶ್ಲಾಘಿಸಿದರು.ಹಲವಾರು ದಶಕಗಳಿಂದ, ಶ್ರೀ ಅಮರನಾಥಜಿ ದೇಗುಲ ಮಂಡಳಿ ಮತ್ತು ಜಮ್ಮು ಮತ್ತು ಕಾಶ್ಮೀರ ಆಡಳಿತವು ಈ ತೀರ್ಥಯಾತ್ರೆಯನ್ನು ಉತ್ತಮ ದಕ್ಷತೆ ಮತ್ತು ಸಮರ್ಪಣಾಭಾವದಿಂದ ನಿರ್ವಹಿಸಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಯಾತ್ರಿಕರಿಗೆ ನೀಡಿದ ಸೇವೆಗಾಗಿ ಅವರು ಭಾರತೀಯ ಸೇನೆ, ಸಿಆರ್‌ಪಿಎಫ್, ಜಮ್ಮು ಮತ್ತು ಕಾಶ್ಮೀರ ಪೊಲೀಸ್, ಐಟಿಬಿಪಿ, ಬಿಎಸ್‌ಎಫ್, ಎನ್‌ಡಿಆರ್‌ಎಫ್, ಆರೋಗ್ಯ ಕಾರ್ಯಕರ್ತರು, ವೈದ್ಯರು, ನೈರ್ಮಲ್ಯ ಕಾರ್ಯಕರ್ತರು, ಆಡಳಿತ ಅಧಿಕಾರಿಗಳು ಮತ್ತು ಸ್ವಯಂಸೇವಕರನ್ನು ಮತ್ತಷ್ಟು ಶ್ಲಾಘಿಸಿದರು.

ಈ ವರ್ಷವೂ ಸಾವಿರಾರು ಸಿಬ್ಬಂದಿ ಈ ಜವಾಬ್ದಾರಿಯನ್ನು ಬದ್ಧತೆಯಿಂದ ನಿರ್ವಹಿಸುತ್ತಿದ್ದಾರೆ ಎಂದು ಅವರು ಗಮನಿಸಿದರು. ಸ್ಥಳೀಯ ಸಮುದಾಯಗಳ ಪಾತ್ರವನ್ನು ಎತ್ತಿ ತೋರಿಸಿದ ಪ್ರಧಾನಿ ಮೋದಿ, ಈ ಯಾತ್ರೆಯು ಜಮ್ಮು ಮತ್ತು ಕಾಶ್ಮೀರದ ಜನರ ಆತಿಥ್ಯವನ್ನು ಸಹ ಪ್ರದರ್ಶಿಸುತ್ತದೆ ಎಂದು ಹೇಳಿದರು.

ಡಿಎಸ್‌ಪಿ ಬಳಿ 200 ಕೋಟಿ ರೂ. ಆಸ್ತಿ : ಬೆಚ್ಚಿಬಿದ್ದ ತೆಲಂಗಾಣ ಪೊಲೀಸ್ ಇಲಾಖೆ

ಹೈದರಾಬಾದ್,ಜು.3- ತೆಲಂಗಾಣ ಪೊಲೀಸ್ ಇಲಾಖೆಯನ್ನೇ ಬೆಚ್ಚಿಬೀಳಿಸುವ ಭ್ರಷ್ಟಾಚಾರ ಪ್ರಕರಣವೊಂದು ಬೆಳಕಿಗೆ ಬಂದಿದೆ. ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಆರೋಪದಡಿ ಹೈದರಾಬಾದ್‌ನ ಉಪ ಪೊಲೀಸ್ ವರಿಷ್ಠಾಧಿಕಾರಿ (ಡಿಎಸ್ ಪಿ) ಸಂಕೇತ್ ಭೀಮ್ ರೆಡ್ಡಿ ಅವರ ನಿವಾಸ ಮತ್ತು ಕಚೇರಿಗಳ ಮೇಲೆ ತೆಲಂಗಾಣ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸಿದ ದಾಳಿಯಲ್ಲಿ ಬರೋಬ್ಬರಿ 200 ಕೋಟಿ ರೂ.ಗೂ ಅಧಿಕ ಅಕ್ರಮ ಆಸ್ತಿ ಪತ್ತೆಯಾಗಿದೆ.

ಕಾನೂನು ರಕ್ಷಕರೇ ಕಳ್ಳಮಾರ್ಗದ ಹಾದಿ ಹಿಡಿದಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ವಿವಿಧೆಡೆ ಒಟ್ಟು 16 ಸ್ಥಳಗಳಲ್ಲಿ ಎಸಿಬಿ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ. ದಶಕಗಳ ಕಾಲ ವಿವಿಧ ಪ್ರಮುಖ ಹುದ್ದೆಗಳಲ್ಲಿದ್ದ ಸಂಕೇತ್ ಭೀಮ್ ರೆಡ್ಡಿ, ತಮ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ವ್ಯವಸ್ಥಿತವಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದರು ಎಂಬುದು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿದೆ. ಎಸಿಬಿ ಅಧಿಕಾರಿಗಳ ದಾಳಿಯಲ್ಲಿ ಪತ್ತೆಯಾದ ಆಸ್ತಿಪಾಸ್ತಿಗಳು ಬೆರಗು ಮೂಡಿಸುವಂತಿವೆ.50 ಎಕರೆಗೂ ಅಧಿಕ ಕೃಷಿ ಮತ್ತು ಕೃಷಿಯೇತರ ಭೂಮಿ,ಐಷಾರಾಮಿ ವಿಲ್ಲಾಗಳು.

ನಗರದ ಅತ್ಯಂತ ದುಬಾರಿ ಪ್ರದೇಶಗಳಲ್ಲಿ ನಿರ್ಮಿಸಲಾಗಿರುವ ಐಷಾರಾಮಿ ವಿಲ್ಲಾಗಳು ಮತ್ತು ವಾಣಿಜ್ಯ ಕಟ್ಟಡಗಳು.

ದಾಳಿ ವೇಳೆ ಅಪಾರ ಪ್ರಮಾಣದ ನಗದು, ಕೆಜಿಗಟ್ಟಲೆ ಚಿನ್ನದ ಆಭರಣಗಳು ಮತ್ತು ಬೆಳ್ಳಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ವಿವಿಧ ಖಾಸಗಿ ಕಂಪನಿಗಳು ಹಾಗೂ ಷೇರು ಮಾರುಕಟ್ಟೆಯಲ್ಲಿ ಭಾರೀ ಮೊತ್ತದ ಹೂಡಿಕೆ ಮಾಡಿರುವುದು ದಾಖಲೆಗಳಿಂದ ಸಾಬೀತಾಗಿದೆ.ಪೊಲೀಸ್ ಇಲಾಖೆಯನ್ನು ಭ್ರಷ್ಟಾಚಾರ ಮುಕ್ತವಾಗಿಸಲು ನಾವು ನಿರಂತರವಾಗಿ ಶ್ರಮಿಸುತ್ತಿದ್ದೇವೆ. ಆದರೆ, ಇಂತಹ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಇಂತಹ ಕೃತ್ಯಗಳಲ್ಲಿ ತೊಡಗುವುದು ಇಲಾಖೆಯ ಘನತೆಗೆ ಧಕ್ಕೆ ತರುತ್ತದೆ ಎಂದು ಎಸಿಬಿ ಮೂಲಗಳು ಬೇಸರ ವ್ಯಕ್ತಪಡಿಸಿವೆ.ಅಧಿಕಾರಿಯ ಅಧಿಕೃತ ವೇತನಕ್ಕೂ ಅವರು ಗಳಿಸಿರುವ ಸಂಪತ್ತಿಗೂ ಎಲ್ಲಿಯೂ ಹೊಂದಾಣಿಕೆಯಾಗುತ್ತಿಲ್ಲ ಎಂಬುದು ತನಿಖೆಯಲ್ಲಿ ಸ್ಪಷ್ಟವಾಗಿದೆ. ಸದ್ಯ ಆರೋಪಿಯ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ವಶಪಡಿಸಿಕೊಳ್ಳಲಾದ ಆಸ್ತಿ ದಾಖಲೆಗಳನ್ನು ಎಸಿಬಿ ತಂಡ ಪರಿಶೀಲಿಸುತ್ತಿದೆ.

ಕೇವಲ ಬಂಧನ ಮಾತ್ರವಲ್ಲದೆ, ಅಕ್ರಮವಾಗಿ ಗಳಿಸಿದ ಆಸ್ತಿಯನ್ನು ಸರ್ಕಾರಿ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ಎಸಿಬಿ ಚುರುಕುಗೊಳಿಸಿದೆ. ಮುಂಬರುವ ದಿನಗಳಲ್ಲಿ ತನಿಖೆ ಮತ್ತಷ್ಟು ಆಳವಾಗಿ ನಡೆಯಲಿದ್ದು, ಈ ಹಗರಣದಲ್ಲಿ ಭಾಗಿಯಾಗಿರುವ ಇತರರ ಮಾಹಿತಿಯೂ ಹೊರಬರುವ ಸಾಧ್ಯತೆ ಇದೆ.

ಈ ಪ್ರಕರಣವು ಇದೀಗ ಸಾರ್ವಜನಿಕರಲ್ಲಿ ಹಲವು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ವೇತನದ ಮಿತಿಯ ಹೊರತಾಗಿ ಈ ಮಟ್ಟದ ಸಂಪತ್ತು ಗಳಿಸಿದ್ದು ಹೇಗೆ? ಈ ಅಕ್ರಮ ಸಾಮ್ರಾಜ್ಯದ ಹಿಂದೆ ಬೇರೆ ಯಾರೆಲ್ಲಾ ಪ್ರಭಾವಶಾಲಿಗಳ ಕೈವಾಡವಿದೆ? ಇಲಾಖೆಯ ಆಂತರಿಕ ತಪಾಸಣಾ ವ್ಯವಸ್ಥೆ ಈವರೆಗೆ ಎಲ್ಲಿ ನಿದ್ರಿಸುತ್ತಿತ್ತು? ಈ ದಾಳಿಯು ತೆಲಂಗಾಣ ಎಸಿಬಿಯ ದಕ್ಷತೆಯನ್ನು ಎತ್ತಿ ಹಿಡಿದಿದ್ದರೂ, ಪೊಲೀಸ್ ಇಲಾಖೆಯಂತಹ ಸೂಕ್ಷ್ಮ ವಲಯದಲ್ಲಿ ಭ್ರಷ್ಟಾಚಾರದ ಬೇರುಗಳು ಎಷ್ಟೊಂದು ಆಳವಾಗಿ ವ್ಯಾಪಿಸಿವೆ ಎಂಬುದಕ್ಕೆ ಇದು ನಿದರ್ಶನವಾಗಿದೆ. ಭವಿಷ್ಯದಲ್ಲಿ ಈ ಪ್ರಕರಣವು ರಾಜ್ಯದಲ್ಲಿ ಭ್ರಷ್ಟಾಚಾರದ ವಿರುದ್ಧದ ಹೋರಾಟಕ್ಕೆ ಹೊಸ ತಿರುವು ನೀಡಲಿದೆ ಎನ್ನಲಾಗುತ್ತಿದೆ.

ಕರ್ನಾಟಕ ಮಲ್ಲ

ಸಂಪಾದಕರ ಮಾತು...

ಶನಿವಾರ 04, ಜುಲೈ 2026

ವಿಜಯೇಂದ್ರ ನಾಯಕತ್ವ ಬದಲಾಗಲಿದೆಯೇ?

ಕರ್ನಾಟಕದಲ್ಲಿ ಕಳೆದ ಒಂದು ವಾರದಿಂದ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಾವಣೆ ಮಾಡಲಾಗುತ್ತದೆ ಎಂಬ ಚರ್ಚೆ ನಡೆಯುತ್ತಿದೆ. ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎಂಎಲ್‌ಎಗಳು ಕಾಂಗ್ರೆಸ್ಸಿನ ಐದನೇ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದು ಎರಡೂ ಪಕ್ಷಗಳ ನಾಯಕರನ್ನು ತೀವ್ರ ಮುಜುಗರಕ್ಕೆ ಸಿಲುಕಿಸಿದೆ. ಜೆಡಿಎಸ್ ನಾಯಕ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಅಡ್ಡ ಮತದಾನ ಸಾಮಾನ್ಯ ಆಗಿದ್ದು ತನ್ನ ಪಕ್ಷದಿಂದ ಯಾರು ಅಡ್ಡ ಮತದಾನ ಮಾಡಿದ್ದಾರೆ ಎನ್ನುವುದು ತನಗೆ ಗೊತ್ತಿದೆ ಎಂದು ಹೇಳುವ ಮೂಲಕ ವಿವಾದವನ್ನು ಮುಗಿಸಿದರೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ. ಎಸ್. ವಿಜಯೇಂದ್ರ ಅವರು ಎಲ್ಲಾ ಬಿಜೆಪಿ ಎಂಎಲ್‌ಎಗಳನ್ನು ಧರ್ಮಸ್ಥಳಕ್ಕೆ ಕರೆದೊಯ್ದು ಆಣೆ ಪ್ರಮಾಣ ಮಾಡಿಸುವ ಮೂಲಕ ಪಕ್ಷಕ್ಕೆ ದ್ರೋಹ ಮಾಡಿದವರು ಯಾರೆಂದು ಸಾಬೀತು ಮಾಡುವುದಾಗಿ ಹೇಳಿದ್ದರು. ಆದರೆ ಬಿಜೆಪಿ ಕೇಂದ್ರ ನಾಯಕತ್ವ ಮತ್ತು ರಾಜ್ಯ ಬಿಜೆಪಿಯ ಹಲವು ನಾಯಕರು ರಾಜಕೀಯ ಭ್ರಷ್ಟಾಚಾರವನ್ನು ದೇವರ ಅಂಗಳಕ್ಕೆ ಕೊಂಡೊಯ್ಯುವಂತೆ ಸಲಹೆ ಮಾಡಿದ್ದರಿಂದ ಎಲ್ಲಾ ಎಂಎಲ್‌ಎಗಳನ್ನು ಧರ್ಮಸ್ಥಳಕ್ಕೆ ಕರೆದೊಯ್ಯುವ ವಿಜಯೇಂದ್ರ ನಿರ್ಧಾರಕ್ಕೆ ತೆರೆ ಬಿದ್ದಿತ್ತು. ಆದರೂ ವಿಜಯೇಂದ್ರ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ಸಮ್ಮುಖದಲ್ಲಿಯೇ ವಿಪಕ್ಷ ನಾಯಕ ಆರ್. ಅಶೋಕ್ ಜತೆ ಭೇಟಿ ಮಾಡಿ ಅಡ್ಡ ಮತದಾನ ಕುರಿತು ವಿವರ ನೀಡಿದ ಬಳಿಕ ನೇರವಾಗಿ ಧರ್ಮಸ್ಥಳಕ್ಕೆ ಹಲವು ಬಿಜೆಪಿ ಎಂಎಲ್‌ಎಗಳ ಜತೆಯಲ್ಲಿ ಭೇಟಿ ಮಾಡಿ ದೇವರ ದರ್ಶನ ಮಾಡಿದ್ದರು.

ಮಾಜಿ ಮುಖ್ಯಮಂತ್ರಿ ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರು ಅವರ ಪಕ್ಷದ ನಾಲ್ವರು ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಅಡ್ಡ ಮತದಾನ ಮಾಡಿದ್ದಾರೆ ಎಂದು ಬಹಿರಂಗವಾಗಿ ಹೇಳಿಕೆ ನೀಡಿದ್ದರು. ಆದರೆ ವಿಜಯೇಂದ್ರ ಅವರು ಬಿಜೆಪಿ ಹೈಕಮಾಂಡ್ ನಾಯಕರಿಗೆ ಬಿಜೆಪಿಯ ಮೂರರಿಂದ ನಾಲ್ಕು ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದು ವಿವರ ನೀಡಿದ್ದಾರೆ. ವಾಸ್ತವವಾಗಿ ಜೆಡಿಎಸ್ ಮತ್ತು ಬಿಜೆಪಿಯ ಒಟ್ಟು 11 ಎಂಎಲ್‌ಎಗಳು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದಾರೆ. ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಮತ್ತು ವಿಧಾನಸಭಾ ವಿಪಕ್ಷ ನಾಯಕ ಅಶೋಕ್ ಹೇಳಿದಂತೆ ಬಿಜೆಪಿಯ ಹೆಚ್ಚೆಂದರೆ ನಾಲ್ವರು ಎಂಎಲ್‌ಎಗಳು ಮಾತ್ರ ಅಡ್ಡ ಮತದಾನ ಮಾಡಿದ್ದಲ್ಲಿ ಜೆಡಿಎಸ್ ಪಕ್ಷದ 7 ಎಂಎಲ್‌ಎಗಳು ಅಡ್ಡ ಮತದಾನ ಮಾಡಿದ್ದಾರೆ ಎಂದಾಗುತ್ತದೆ. ಜೆಡಿಎಸ್ ವಲಯದಲ್ಲಿ ಬಿಜೆಪಿ ನಾಯಕರ ಹೇಳಿಕೆಗೆ ತೀವ್ರ ಅಸಮಾಧಾನ ಮತ್ತು ಆಕ್ರೋಶ ವ್ಯಕ್ತ ಆಗಿದ್ದು ಬಿಜೆಪಿ ಜತೆಗಿನ ಮೈತ್ರಿಯೇ ತಪ್ಪು ಎಂಬ ಚರ್ಚೆ ಆರಂಭ ಆಗಿದೆ.

ಬಿಜೆಪಿಯಲ್ಲಿ ಅಡ್ಡ ಮತದಾನ ಮಾಡಿರುವವರು ಎಂದು ವಿಜಯೇಂದ್ರ ಮತ್ತು ಅಶೋಕ್ ಅವರ ಶಂಕಿತರ ಪಟ್ಟಿಯಲ್ಲಿ ಇರುವ ಬೇಲೂರು ಎಂಎಲ್‌ಎ ಎಚ್. ಕೆ. ಸುರೇಶ್ ಅವರು ಧರ್ಮಸ್ಥಳಕ್ಕೆ ಹೋಗಿ ತಾನು ಪಕ್ಷ ದ್ರೋಹ ಮಾಡಿಲ್ಲ, ಬಿಜೆಪಿ ನಾಯಕತ್ವ ಹೇಳಿದ ಅಭ್ಯರ್ಥಿಗೆ ಮತದಾನ ಮಾಡಿರುವುದಾಗಿ ಆಣೆ ಪ್ರಮಾಣ ಮಾಡಿದ್ದಾರೆ. ಸುರೇಶ್ ಅವರ ಆಣೆ ಪ್ರಮಾಣ ಸಹಜವಾಗಿಯೇ ಬಿಜೆಪಿ ನಾಯಕರು ಮತ್ತಷ್ಟು ಮುಜುಗರ ಪಡಲು ಕಾರಣವಾಗಿದೆ. ಅಡ್ಡ ಮತದಾನ ಕುರಿತು ಶೋಧನೆಗೆ ರಚನೆ ಮಾಡಿದ ವಿಧಾನ ಪರಿಷತ್ ಸದಸ್ಯ ಸಿ. ಟಿ. ರವಿ ಅವರ ನೇತೃತ್ವದ ಮೂವರು ಸದಸ್ಯರ ಸಮಿತಿ ಪಕ್ಷದ ಅಧ್ಯಕ್ಷ ವಿಜಯೇಂದ್ರ ಅವರಿಗೆ ಸಲ್ಲಿಸಿರುವ ವರದಿಯಲ್ಲಿ ಅಡ್ಡ ಮತದಾನ ಮಾಡಿದವರು ಯಾರು ಎಂದು ಹೆಸರನ್ನು ಉಲ್ಲೇಖ ಮಾಡದೆ ಶಂಕಿತರು ಎಂದು ಕೆಲವು ಶಾಸಕರ ಹೇಳಿಕೆಗಳನ್ನು ದಾಖಲಿಸಿತ್ತು. ಶಾಸಕರ ಬಗ್ಗೆ ಅಪನಂಬಿಕೆ ಪಡುವುದು ಪಕ್ಷದ ಮೇಲೆ ಪರಿಣಾಮ ಬೀರುತ್ತದೆ ಎಂದು ರವಿ ಅವರು ಬಹಿರಂಗ ಹೇಳಿಕೆಯನ್ನೂ ನೀಡಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿ ಮಾಡಿದ ಬಳಿಕ ವಿಜಯೇಂದ್ರ ಅವರು ಪಕ್ಷಕ್ಕೆ ದ್ರೋಹ ಮಾಡಿದವರ ವಿರುದ್ಧ ಬಿಜೆಪಿ ಕೇಂದ್ರ ನಾಯಕರು ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆ ಎಂದು ಹೇಳಿದ್ದರು. ಆದರೆ ಈ ತನಕ ಅಂತಹ ಯಾವುದೇ ಕ್ರಮವನ್ನು ಬಿಜೆಪಿ ನಾಯಕತ್ವ ತೆಗೆದುಕೊಂಡಿಲ್ಲ.

ಇಂಗು ಮುಖ್ಯವಾಗಿ ಎರಡು ವಿಭಿನ್ನ ರೂಪಗಳಲ್ಲಿ ಲಭ್ಯವಿದೆ. ಇಂಗಿದೆ ಒಂದು ವಿಶಿಷ್ಟವಾದ ವಿನ್ಯಾಸವನ್ನು ನೀಡಲು ಕೆಲವು ಪದಾರ್ಥಗಳೊಂದಿಗೆ ಬೆರೆಸಲಾಗುತ್ತದೆ. ಮೊದಲನೆಯದಾಗಿ, ಇದು ಹಳದಿ ಮಿಶ್ರಿತ ಮಸಾಲೆ ರೂಪದಲ್ಲಿ ಲಭ್ಯವಿದೆ, ಇದನ್ನು ಅರಿಶಿನ ಅಥವಾ ಅಕ್ಕಿ ಹಿಟ್ಟಿನೊಂದಿಗೆ ಬೆರೆಸುವ ಮೂಲಕ ಇದರ ಬಲವಾದ ವಾಸನೆ ಮತ್ತು ಪರಿಮಳವನ್ನು ದುರ್ಬಲಗೊಳಿಸುತ್ತದೆ. ಎರಡನೆಯದಾಗಿ, ಇಂಗಿನ ಶುದ್ಧ ರೂಪವು ಸಾಮಾನ್ಯವಾಗಿ ಜಿಗುಟಾದ ಕಂದು ಬಣ್ಣದ ಉಂಡೆಯಾಗಿ ಲಭ್ಯವಿದೆ. ಜೀರ್ಣಕಾರಿ ಸಮಸ್ಯೆಗಳನ್ನು ಗುಣಪಡಿಸಲು ಶುದ್ಧ ಇಂಗನ್ನು ಯುನಾನಿ, ಸಿಧಾ ಮತ್ತು ಆಯುರ್ವೇದದ ಔಷಧಿಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತದೆ. ಇಂಗು ಒಂದು ದುಬಾರಿ ಮಸಾಲೆ ಪದಾರ್ಥವಾಗಿದೆ.

ಇಂಗಿನ ಆರೋಗ್ಯ ಪ್ರಯೋಜನಗಳು

ಇಂಗು ಆರೋಗ್ಯಕ್ಕೆ ಹೇರಳವಾದ ಪ್ರಯೋಜನಗಳನ್ನು ನೀಡುತ್ತದೆ. ಇದರಲ್ಲಿ ಕಾರ್ಮಿನೇಟಿವ್, ಆಂಟಿ-ವೈರಲ್, ಬ್ಯಾಕ್ಟೀರಿಯಾ ವಿರೋಧಿ, ಉರಿಯೂತ ನಿವಾರಕ, ನಿದ್ರಾಜನಕ ಮತ್ತು ಮೂತ್ರವರ್ಧಕ ಗುಣಲಕ್ಷಣಗಳಿಗೆ. ಜೀರ್ಣಕಾರಿ ಸಮಸ್ಯೆಗಳನ್ನು ಗುಣಪಡಿಸುವುದರ ಜೊತೆಗೆ, ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ, ಮುಟ್ಟಿನ ನೋವನ್ನು ಗುಣಪಡಿಸುತ್ತದೆ, ತಲೆನೋವು ಕಡಿಮೆ ಮಾಡುತ್ತದೆ, ಅಸ್ತಮಾ ನಿವಾರಿಸುತ್ತದೆ ಮತ್ತು ಕೀಟಗಳ ಕಡಿತವನ್ನು ಸಹ ಗುಣಪಡಿಸುತ್ತದೆ. ದೀರ್ಘಕಾಲದ ಉಸಿರಾಟದ ಸಮಸ್ಯೆ ಇದ್ದರೆ ಇಂಗನ್ನು ನೀರಿನಲ್ಲಿ ಹಾಕಿ ಸೇವಿಸುವುದರಿಂದ ಕಫವನ್ನು ನಿವಾರಿಸುತ್ತದೆ. ರಕ್ತದ ತೆಳುವಾಗಲು, ರಕ್ತದೊತ್ತಡದ ಮಟ್ಟವನ್ನು ಸಮತೋಲನಗೊಳಿಸಲು, ಮುಟ್ಟಿನ ಸಮಯದಲ್ಲಿ ರಕ್ತದ ಹರಿವನ್ನು ಸುಲಭಗೊಳಿಸಲು ಮತ್ತು ನೋವನ್ನು ಕಡಿಮೆ ಮಾಡುವ ಪ್ರೊಜೆಸ್ಟರಾನ್ ಸ್ರವಿಸುವಿಕೆಯನ್ನು ಹೆಚ್ಚಿಸುವ ಮೂಲಕ ಮುಟ್ಟಿನ ಸೆಳೆತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಇಂಗನ್ನು ಹೇಗೆ ಬಳಸುವುದು?

ಭಾರತೀಯ ಪಾಕಪದ್ಧತಿಯಲ್ಲಿ ಇಂಗನ್ನು ಹಲವಾರು ವಿಧಗಳಲ್ಲಿ ಬಳಸಲಾಗುತ್ತದೆ. ಇದನ್ನು ಮುಖ್ಯವಾಗಿ ಮಸಾಲೆ ಪದಾರ್ಥವಾಗಿ ಬಳಸಲಾಗುತ್ತದೆ ಮತ್ತು ಇದನ್ನು ಮೇಲೋಗರಗಳು, ದಾಲ್, ಸಾಂಬಾರು, ರಸಂ, ರೈಸ್‌ಬಾತ್ ಮತ್ತು ಇತರ ಭಕ್ಷ್ಯಗಳಿಗೆ ಸೇರಿಸಲಾಗುತ್ತದೆ. ನೀವು ಕಚ್ಚಾ ಇಂಗ್ ಬಳಸುತ್ತಿದ್ದರೆ ಅದನ್ನು ಪುಡಿಮಾಡಿ 3 ನಿಮಿಷಗಳ ಕಾಲ ಕುದಿಯುವ ನೀರಿನಲ್ಲಿ ಕರಗಿಸಿ, ಅದನ್ನು ಭಕ್ಷ್ಯಕ್ಕೆ ಸೇರಿಸಿ.

ಶುದ್ಧ ಇಂಗನ್ನು ಹೇಗೆ ಆಯ್ಕೆ ಮಾಡುವುದು?

ಇಂಗನ್ನು ಹೆಚ್ಚಾಗಿ ಅರಿಶಿನ, ಅಕ್ಕಿ ಹಿಟ್ಟು ಅಥವಾ ಇತರ ಪದಾರ್ಥಗಳೊಂದಿಗೆ ಬೆರೆಸಿ ಅದರಲ್ಲಿರುವ ದೀರ್ಘವಾದ ವಾಸನೆಯನ್ನು ಕಡಿಮೆ ಮಾಡಲಾಗುತ್ತದೆ. ಇಂಥ ಇಂಗನ್ನು ಆಯ್ಕೆ ಮಾಡುವಾಗ ಇಂಗು ಯಾವುದೇ ಕಲ್ಲು ಅಥವಾ ಕಣಗಳನ್ನು ಹೊಂದಿಲ್ಲ ಎಂದು ಖಚಿತಪಡಿಸಿಕೊಳ್ಳಿ. ಇನ್ನು ಶುದ್ಧ ಇಂಗು ಬಲವಾದ ವಾಸನೆ, ಸ್ವಲ್ಪ ಜಿಗುಟಾದ ವಿನ್ಯಾಸ ಮತ್ತು ಕಂದು ಬಣ್ಣವನ್ನು ಹೊಂದಿರುತ್ತದೆ. ಇದರ ಆಯ್ಕೆ ವೇಳೆ ಇದು ಗಾಢವಾದ ಸುವಾಸನೆಯನ್ನು ಹೊಂದಿದೆಯೇ, ಅದರ ಬಣ್ಣವನ್ನು ಸಹ ಪರಿಶೀಲಿಸಿ.

ಈ ಮನೆಮದ್ದು ಟ್ರೈ ಮಾಡಿ, ಜನ್ಮದಲ್ಲೂ ಕೂದಲುದುರುವ ಸಮಸ್ಯೆ ಬರಲ್ಲ!

ಕೂದಲು ಉದುರುವಿಕೆ, ತಲೆಹೊಟ್ಟು ಇತ್ಯಾದಿ ಸಮಸ್ಯೆಗಳು ಮಹಿಳೆಯರನ್ನು ಕಾಡುವುದು ಸಹಜ. ವಾತಾವರಣದಲ್ಲಿ ಧೂಳು, ಕಲ್ಮಶ ಇತ್ಯಾದಿಗಳಿಂದಾಗಿ ಕೂದಲಿಗೆ ಹಾನಿ ಆಗುವುದು. ಅದೇ ರೀತಿಯಲ್ಲಿ ಆಹಾರ ಕ್ರಮ ಹಾಗೂ ಜೀವನಶೈಲಿಯೂ ಕೂದಲಿನ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುವುದು. ಇದರಿಂದಾಗಿ ಕೂದಲು ಉದುರುವುದು. ತಲೆಹೊಟ್ಟು, ಕೂದಲು ತುಂಡಾಗುವುದು ಇತ್ಯಾದಿಗಳು ಕಂಡುಬರುವುದು. ಇಂತಹ ಸಮಸ್ಯೆಗಳನ್ನು ನಿವಾರಣೆ ಮಾಡಲು ಹಲವಾರು ರೀತಿಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಆದರೆ ಇದಕ್ಕೆ ಕೆಲವು ರಾಸಾಯನಿಕಗಳನ್ನು ಬೆರೆಸಿರುವ ಕಾರಣದಿಂದಾಗಿ ದೀರ್ಘಕಾಲಕ್ಕೆ ಇದು ಕೂದಲಿಗೆ ಹಾನಿ ಉಂಟು ಮಾಡಬಹುದು. ಹಾಗಾದರೆ ಕೂದಲಿನ ಸಮಸ್ಯೆಗೆ ಪರಿಹಾರ ಇಲ್ಲವೇ ಎನ್ನುವ ಪ್ರಶ್ನೆಯು ನಿಮ್ಮನ್ನು ಕಾಡಬಹುದು. ಈ ಲೇಖನದಲ್ಲಿ ಕೆಲವೊಂದು ಮನೆಮದ್ದುಗಳು ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ತುಂಬಾ ಸಹಕಾರಿ ಆಗಿರುವುದು. ಅದು ಹೇಗೆ ಎಂದು ನಾವು ನಿಮಗೆ ತಿಳಿಸಿಕೊಡಲಿದ್ದೇವೆ.



ಕೂದಲು ಉದುರುವಿಕೆಗೆ ಕಾರಣಗಳು

ಇತ್ತೀಚಿನ ದಿನಗಳಲ್ಲಿ ಕೂದಲು ಉದುರುವ ಸಮಸ್ಯೆ ಎಲ್ಲರಲ್ಲೂ ಕಾಡುತ್ತಿದೆ. ಆದರೆ ಇದರ ಬಗ್ಗೆ ಚಿಂತೆ ಮಾಡಬೇಕಾಗಿಲ್ಲ ಎಂದು ತಜ್ಞರು ಹೇಳುವರು. ಆದರೆ ಕೂದಲು ಉದುರುವಿಕೆಯು ಇದಕ್ಕಿಂತ ಹೆಚ್ಚಾದರೆ, ಆಗ ತಲೆಬೋಳು ಆಗಬಹುದು. 30ರ ಹರೆಯದಲ್ಲೇ ಕೆಲವರಲ್ಲಿ ಕೂದಲು ಉದುರುವಿಕೆ ಸಮಸ್ಯೆಯು ಅತಿಯಾಗಿ ಇರುವುದು. ಹಾರ್ಮೋನ್ ಬದಲಾವಣೆ, ಒತ್ತಡ ಮತ್ತು ಅನಾರೋಗ್ಯಕರ ಆಹಾರ ಕ್ರಮವು ಇದಕ್ಕೆ ಕಾರಣ.

ಈರುಳ್ಳಿ ಮತ್ತು ಬೆಳ್ಳುಳ್ಳಿ

● ಇದರಲ್ಲಿ ಇರುವ ಸಲ್ಫರ್ ಅಂಶವು ಕಾಲಜನ್ ಉತ್ಪತ್ತಿಯನ್ನು ಹೆಚ್ಚು ಮಾಡುವುದು ಮತ್ತು ಇದರಿಂದ ಕೂದಲಿನ ಬೆಳವಣಿಗೆ ಉತ್ತಮವಾಗುವುದು.

● ಈರುಳ್ಳಿ ಮತ್ತು ಬೆಳ್ಳುಳ್ಳಿಯಲ್ಲಿ ಉತ್ತಮ ಪ್ರಮಾಣದ ಸಲ್ಫರ್ ಅಂಶವಿದೆ ಮತ್ತು ಇದು ಕೂದಲು ಬೆಳೆಯಲು ಬಳಸಬಹುದಾದ ಒಳ್ಳೆಯ ಮನೆಮದ್ದು. ಈರುಳ್ಳಿಯನ್ನು ಕತ್ತರಿಸಿಕೊಂಡು ಅದರ ರಸ ತೆಗೆಯಿರಿ.

● ಇದನ್ನು ತಲೆಬುರುಡೆಗೆ ಹಚ್ಚಿ, 15 ನಿಮಿಷ ಕಾಲ ಹಾಗೆ ಬಿಡಿ. ಇದರ ಬಳಿಕ ಶಾಂಪೂ ಹಾಕಿ ತೊಳೆಯಿರಿ. ಬೆಳ್ಳುಳ್ಳಿ ಎಸಲುಗಳನ್ನು ಜಜ್ಜಿಕೊಳ್ಳಿ ಮತ್ತು ಇದಕ್ಕೆ ಸ್ವಲ್ಪ ತೆಂಗಿನ ಎಣ್ಣೆ ಹಾಕಿ ಮತ್ತು ಕುದಿಸಿ.

● ಇದು ಸ್ವಲ್ಪ ಬಿಸಿಯಾಗಿ ಇರುವಾಗ ಅದನ್ನು ತಲೆಬುರುಡೆಗೆ ಹಚ್ಚಿಕೊಳ್ಳಿ ಮತ್ತು ಸ್ವಲ್ಪ ಹೊತ್ತು ಮಸಾಜ್ ಮಾಡಿ.

● ಇದನ್ನು ವಾರದಲ್ಲಿ ಎರಡರಿಂದ ಮೂರು ಸಲ ಮಾಡಿದರೆ, ಒಳ್ಳೆಯ ಫಲಿತಾಂಶವು ಸಿಗುವುದು.

ಮದರಂಗಿ

● ಕೂದಲಿಗೆ ಬಣ್ಣ ನೀಡುವಂತಹ ಮದರಂಗಿಯು ಕೂದಲನ್ನು ಆಳವಾಗಿ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸವುಉದು. ಇದನ್ನು ಸಾಸಿವೆ ಎಣ್ಣೆಯ ಜತೆಗೆ ಬೆರೆಸಿಕೊಂಡರೆ, ಆಗ ಅದ್ಭುತವಾಗಿ ಕೆಲಸ ಮಾಡುವುದು. 250 ಮಿ.ಲೀ. ಸಾಸಿವೆ ಎಣ್ಣೆಗೆ 60 ಗ್ರಾಂನಷ್ಟು ತೊಳೆದು ಒಣಗಿಸಿದ ಮದರಂಗಿ ಹಾಕಿ. ಎಲೆಗಳು ಸಂಪೂರ್ಣವಾಗಿ ಸುಟ್ಟು ಹೋಗುವ ತನಕ ಇದನ್ನು ಬಿಸಿ ಮಾಡಿ ಮತ್ತು ಇದರ ಬಳಿಕ ಸೋಸಿಕೊಳ್ಳಿ. ಎಣ್ಣೆಯನ್ನು ಹಾಗೆ ತಂಪು ಮಾಡಿ ಮತ್ತು ಅದನ್ನು ಬಾಟಲಿಗೆ ಹಾಕಿಟ್ಟು, ನಿಯಮಿತವಾಗಿ ಬಳಕೆ ಮಾಡಿ.



● ಮದರಂಗಿಯು ಹುಡಿಯು ಇರುವಂತಹ ಕೂದಲಿನ ಪ್ಯಾಕ್‌ನ್ನು ಮೊಸರಿನ ಜತೆಗೆ ಬೆರೆಸಿಕೊಂಡು ಬಳಸಬಹುದು. ಇದನ್ನು ಕೂದಲಿಗೆ ಹಚ್ಚಿಕೊಳ್ಳಿ ಮತ್ತು ಅದನ್ನು ಒಣಗಲು ಬಿಡಿ. ಇದರ ಬಳಿಕ ತಣ್ಣೀರಿನಿಂದ ತೊಳೆಯಿರಿ ಮತ್ತು ಲಘು ಶಾಂಪೂ ಹಾಕಿ.

ದಾಸವಾಳ

ತೆಂಗಿನ ಎಣ್ಣೆ ಮತ್ತು ದಾಸವಾಳವು ಕೂದಲು ದಪ್ಪವಾಗಲು ಪ್ರಮುಖ ಅಂಶವಾಗಿದ್ದು, ಇದನ್ನು ಕೇರಳದಲ್ಲಿ ಮಹಿಳೆಯರು ಹೆಚ್ಚಾಗಿ ಬಳಕೆ ಮಾಡುವರು.

ದಾಸವಾಳದಲ್ಲಿ ಪುನಶ್ಚೇತನಗೊಳಿಸುವ ಅಂಶಗಳಿದ್ದು, ಇದು ಕೂದಲಿಗೆ ಪೋಷಣೆ ನೀಡುವುದು ಮತ್ತು ಅಕಾಲಿಕವಾಗಿ ಕೂದಲು ಬಿಳಿಯಾಗುವುದನ್ನು ತಡೆಯುವುದು. ದಾಸವಾಳದ ಹೂವನ್ನು ನಿಯಮಿತವಾಗಿ ಬಳಕೆ ಮಾಡಿದರೆ, ಕೂದಲು ಉದುರುವಿಕೆ ದೂರ ಮಾಡಬಹುದು. ದಾಸವಾಳದ ಕೆಲವು ಹೂಗಳನ್ನು ಜಜ್ಜಿಕೊಳ್ಳಿ ಮತ್ತು ಇದನ್ನು ಎಳ್ಳೆಣ್ಣೆ ಅಥವಾ ತೆಂಗಿನ ಎಣ್ಣೆಗೆ ಹಾಕಿ. ಇದನ್ನು ತಲೆಬುರುಡೆ ಮತ್ತು ಕೂದಲಿಗೆ ಹಚ್ಚಿಕೊಳ್ಳಿ ಮತ್ತು ಕೆಲವು ಗಂಟೆಗಳ ಕಾಲ ಹಾಗೆ ಬಿಡಿ. ಇದರ ಬಳಿಕ ತಣ್ಣೀರಿನಿಂದ ತೊಳೆಯಿರಿ.





ನೆಲ್ಲಿಕಾಯಿ

● ವಿಟಮಿನ್ ಸಿ ಮತ್ತು ಆಂಟಿಆಕ್ಸಿಡೆಂಟ್ ನಿಂದ ಸಮೃದ್ಧವಾಗಿ ಇರುವಂತಹ ನೆಲ್ಲಿಕಾಯಿಯನ್ನು ಕೂದಲು ಉದುರುವಿಕೆಗೆ ಬಳಕೆ ಮಾಡಬ -ಹುದು. ಇದನ್ನು ತಲೆಬುರುಡೆಗೆ ಹಚ್ಚಿಕೊಂಡರೆ ಆಗ ಇದು ಕೂದಲು ಉದುರುವಿಕೆ ತಡೆಯುವುದು.

● ನೆಲ್ಲಿಕಾಯಿಯನ್ನು ಜಜ್ಜಿಕೊಂಡು ಅದರ ರಸ ತೆಗೆಯಿರಿ. ಎರಡು ಚಮಚ ನೆಲ್ಲಿಕಾಯಿ ರಸಕ್ಕೆ ಎರಡು ಚಮಚ ಲಿಂಬೆರಸ ಹಾಕಿ. ಇದನ್ನು ಸರಿಯಾಗಿ ಮಿಶ್ರಣ ಮಾಡಿಕೊಂಡು ತಲೆಬುರುಡೆಗೆ ಹಚ್ಚಿಕೊಳ್ಳಿ ಮತ್ತು ಹಾಗೆ ಒಣಗಲು ಬಿಡಿ. ಇದರ ಬಳಿಕ ಬಿಸಿ ನೀರಿನಿಂದ ತೊಳೆಯಿರಿ.

ಮೊಟ್ಟೆ

● ಒಂದು ಮೊಟ್ಟೆಯ ಬಿಳಿ ಲೋಳೆ ತೆಗೆದು ಅದನ್ನು ಒಂದು ಚಮಚ ಆಲಿವ್ ತೈಲದ ಜತೆಗೆ ಮಿಶ್ರಣ ಮಾಡಿ. ಇದನ್ನು ಸರಿಯಾಗಿ ಮಿಶ್ರಣ ಮಾಡಿಕೊಂಡು ಕೂದಲು ಮತ್ತು ತಲೆಬುರುಡೆಗೆ ಹಚ್ಚಿ, 15-20 ನಿಮಿಷ ಕಾಲ ಹಾಗೆ ಬಿಡಿ ಮತ್ತು ತಣ್ಣೀರಿನಿಂದ ತೊಳೆಯಿರಿ.

ಅಡುಗೆಗೆ ಬಳಸುವ ಕಾರ್ನ್ ಫ್ಲೋರ್‌ನ್ನು ಸೌಂದರ್ಯ ಸಮಸ್ಯೆಗೂ ಬಳಸಬಹುದು, ಹೇಗೆ ಎಂಬುದು ಇಲ್ಲಿದೆ..



ನಮ್ಮ ದೈನಂದಿನ ಅಡುಗೆಯಲ್ಲಿ ಕೆಲವೊಮ್ಮೆ ಗ್ರೇವಿಯನ್ನು ದಪ್ಪವಾಗಿಸಲು ಅಥವಾ ಚೈನೀಸ್ ಆಹಾರ ತಯಾರಿಸುವಾಗ ಕಾರ್ನ್ ಫ್ಲೋರ್ (ಜೋಳದ ಹಿಟ್ಟು) ಬಳಸುವುದುಂಟು. ಈಗ ಮಳೆಗಾಲವಾಗಿರುವುದರಿಂದ ಪಕೋಡ ಎಲ್ಲರ ಫೇವರೆಟ್, ಈ ಪಕೋಡ ಗರಿಗರಿಯಾಗಿ ಬರಲೆಂದು ಕಾರ್ನ್ ಫ್ಲೋರ್ ಸ್ವಲ್ಪ ಬಳಕೆ ಮಾಡುತ್ತಾರೆ. ಇಂತಹ ಅಡುಗೆ ಸಾಮಾಗ್ರಿಯೊಂದು ಅನೇಕ ಸೌಂದರ್ಯ ಪ್ರಯೋಜನಗಳನ್ನು ಹೊಂದಿದೆ ಎಂಬುದು ನಿಮಗೆ ತಿಳಿದಿದೆಯೇ? ಹಾಗಾದರೆ, ಬನ್ನಿ ಸೌಂದರ್ಯ ಸಮಸ್ಯೆಗಳಿಗೆ ಕಾರ್ನ್ ಫ್ಲೋರ್ ಬಳಸುವುದು ಹೇಗೆ ಎಂಬುದನ್ನು ನೋಡಿಕೊಂಡು ಬರೋಣ. ನೀವು ಮನೆಯಲ್ಲಿ ಅಡುಗೆಗೆ ಬಳಸುವ ಕಾರ್ನ್ ಫ್ಲೋರ್‌ನ್ನು ಸೌಂದರ್ಯ ಸಮಸ್ಯೆಗೆ ಬಳಸುವ ವಿಧಾನಗಳನ್ನು ಈ ಕೆಳಗೆ ನೀಡಲಾಗಿದೆ:

ಅತೀ ಬೆವರುವಿಕೆಗೆ

ಬೆವರುವ ಪಾದಗಳು, ಕೈಗಳು ಮತ್ತು ಅಂಡರ್‌ಆರ್ಮ್ ಗಳಿಂದ ಹೆಚ್ಚುವರಿ ಬೆವರನ್ನು ಹೀರಿಕೊಳ್ಳಲು ನೀವು ಕಾರ್ನ್ ಫ್ಲೋರ್ ವನ್ನು ಸಹ ಬಳಸಬಹುದು. ನಿಮ್ಮ ಕೈಕಾಲು ಮತ್ತು ಕೈಯಡಿಗೆ ಸ್ವಲ್ಪ ಕಾರ್ನ್ ಫ್ಲೋರ್‌ನ್ನು ಹಚ್ಚಿ, ಇದರಿಂದ ನಿಮ್ಮ ಅತೀ ಬೆವರುವಿಕೆ ಸಮಸ್ಯೆ ನಿವಾರಣೆಯಾ -ಗುವುದು.

■ **ಕೂದಲಿನ ಜಿಗುಟುತನಕ್ಕಾಗಿ:** ಕೂದಲಿನ ಜಿಗುಟುತನವನ್ನು ಕಡಿಮೆ ಮಾಡಲು ಅಗ್ಗದ ಮತ್ತು ನೈಸರ್ಗಿಕ ವಿಧಾನವೆಂದರೆ ಈ ಕಾರ್ನ್ ಫ್ಲೋರ್. ನಿಮ್ಮ ಕೂದಲಿನ ಬೇರುಗಳು ಮತ್ತು ಬಾಚಣಿಗೆಗೆ ಸ್ವಲ್ಪ ಕಾರ್ನ್ ಫ್ಲೋರ್ ಅನ್ನು ಉದುರಿಸಿ. ಕಾರ್ನ್ ಪಿಷ್ಟವು ಕೂದಲಿನಿಂದ ಹೆಚ್ಚುವರಿ ಎಣ್ಣೆಯನ್ನು ಹೀರಿಕೊಳ್ಳುತ್ತದೆ ಮತ್ತು ಇದರಿಂದ ಜಿಗುಟುತನ ದೂರವಾಗಿ ನಿಮ್ಮ ಕೂದಲು ದಪ್ಪವಾಗಿರುತ್ತದೆ.

■ **ಲಿಪ್ ಸ್ಟಿಕ್‌ಗೆ ಮ್ಯಾಟ್ ಫಿನಿಶ್ ನೀಡಲು:** ನೀವು ಮ್ಯಾಟ್ ಫಿನಿಶ್ ಲಿಪ್ ಸ್ಟಿಕ್‌ನ್ನು ಇಷ್ಟಪಡುತ್ತಿದ್ದರೆ, ಈ ಕಾರ್ನ್ ಫ್ಲೋರ್ ನಿಂದ ಮ್ಯಾಟ್ ಫಿನಿಶ್ ನೀಡಬಹುದು. ಲಿಪ್ಸ್ಟಿಕ್ ಅನ್ನು ಹಚ್ಚುವ ಮೊದಲು ನಿಮ್ಮ ತುಟಿಗಳಿಗೆ ಸ್ವಲ್ಪ ಕಾರ್ನ್ ಫ್ಲೋರ್ ವನ್ನು ಹಚ್ಚಿಕೊಳ್ಳಿ, ನಂತರ ಅದರ ಮೇಲೆ ನಿಮ್ಮ ಲಿಪ್ ಸ್ಟಿಕ್‌ನ್ನು ಹಚ್ಚಿಕೊಳ್ಳಿ. ನೀವು ಕಾರ್ನ್ ಫ್ಲೋರ್ ಮತ್ತು ಲಿಪ್ಸ್ಟಿಕ್ ಮಿಶ್ರಣವನ್ನು ಲಿಪ್ ಬ್ರಷ್ನೊಂದಿಗೆ ಹಚ್ಚಿಕೊಳ್ಳಬಹುದು.

■ **ಬಿಸಿಲಿನಿಂದಾದ ಟ್ಯಾನ್ ನಿವಾರಣೆಗೆ:** ಬಿಸಿಲಿನಿಂದ ಆದ ತ್ವಚೆಯ ಟ್ಯಾನ್‌ನ್ನು ಗುಣಪಡಿಸುವ ಲಕ್ಷಣವನ್ನು ಕಾರ್ನ್ ಫ್ಲೋರ್ ಹೊಂದಿದೆ. ಇದಕ್ಕಾಗಿ ಕಾರ್ನ್ ಫ್ಲೋರ್‌ನ್ನು ನೀರಿನೊಂದಿಗೆ ಬೆರೆಸಿ ಮತ್ತು ಬಿಸಿಲಿನಿಂದ ಸುಟ್ಟ ತ್ವಚೆಯ ಮೇಲೆ ಹಚ್ಚಿ, 20 ನಿಮಿಷಗಳ ಕಾಲ ಬಿಡಿ. ಅದರ ನಂತರ ಮುಖವನ್ನು ತಣ್ಣೀರಿನಿಂದ ತೊಳೆಯಿರಿ. ನೀವು ಕಡಿಮೆ ಸಮಯದಲ್ಲಿ ಫಲಿತಾಂಶವನ್ನು ಪಡೆಯುತ್ತೀರಿ.

ನೈಲ್ ಪಾಲಿಶ್‌ಗೆ ಮ್ಯಾಟ್ ಫಿನಿಶ್ ನೀಡಲು

ಉಗುರು ಬಣ್ಣಕ್ಕೆ ಮ್ಯಾಟ್ ಫಿನಿಶ್ ನೀಡಲು ಸುಲಭವಾದ ಮಾರ್ಗವೆಂದರೆ ಕಾರ್ನ್ ಫ್ಲೋರ್‌ನ್ನು ಬಳಸುವುದು. ನಿಮ್ಮ ನೆಚ್ಚಿನ ಉಗುರು ಬಣ್ಣವನ್ನು ಕಾರ್ನ್ ಫ್ಲೋರ್ ನೊಂದಿಗೆ ಬೆರೆಸಿ ಮತ್ತು ನಿಮ್ಮ ಉಗುರುಗಳ ಮೇಲೆ ಹಚ್ಚಿ, ಇದರಿಂದ ನಿಗೆ ಉತ್ತಮವಾದ ಫಿನಿಶಿಂಗ್ ಲುಕ್ ಸಿಗುವುದು.



■ **ಫೇಸ್ ಲಿಫ್ಟಿಂಗ್ ಮಾಸ್ಕ:** ಜೋಳದ ಪಿಷ್ಟದ ಸಹಾಯದಿಂದ ನಿಮ್ಮ ಚರ್ಮ ಸಡಿಲಗೊಳ್ಳದಂತೆ ತಡೆಯಬಹುದು. ವಯಸ್ಸಾದಂತೆ ನಿಮ್ಮ ಚರ್ಮ ಸ್ಥಿರತೆ ಕಳೆದುಕೊಂಡು, ಜೋತು ಬೀಳಲು ಕಾರಣವಾಗಬಹುದು. ಆದರೆ ಈ ಮಾಸ್ಕ್ ಬಳಸುವುದರಿಂದ ನಿಮ್ಮ ಚರ್ಮ ಬಿಗಿಯಾಗುವುದಲ್ಲದೇ, ಕಲ್ಮಶಗಳನ್ನು ತೆಗೆದು, ತೇವಾಂಶದಿಂದ ಕೂಡಿರುವಂತೆ ಮಾಡುವುದು. ಇದಕ್ಕಾಗಿ ಮೊಟ್ಟೆಯ ಬಿಳಿಭಾಗವನ್ನು ಕಾರ್ನ್ ಫ್ಲೋರ್ ನೊಗೆ ಬೆರೆಸಿ ಮುಖಕ್ಕೆ ಹಚ್ಚಿ, 20 ನಿಮಿಷಗಳ ನಂತರ ಮುಖವನ್ನು ತೊಳೆದು ಉತ್ತಮ ಮಾಯಿಶ್ಚರೈರ್ಸ ಹಚ್ಚಿ. ಉತ್ತಮ ಫಲಿತಾಂಶಕ್ಕಾಗಿ ವಾರಕ್ಕೆ ಮೂರು ಬಾರಿಯಾದರೂ ಇದನ್ನು ಹಚ್ಚಿ.

■ **ಗಮನಿಸಿ:** ಕಾರ್ನ್ ಫ್ಲೋರ್ ಮತ್ತು ಕಾರ್ನ್ ಸ್ಟಾರ್ಚ್‌ಗಳನ್ನು ದೈನಂದಿನ ಜೀವನದಲ್ಲಿ ಬಳಕೆ ಮಾಡುತ್ತೇವೆ. ಮೇಲೆ ಹೇಳಿರುವುದು, ಹೆಚ್ಚಾಗಿ ಗ್ರೇವಿ ದಪ್ಪವಾಗಿಸಲು ಬಳಸುವ ಬಿಳಿ ಬಣ್ಣದ ಕಾರ್ನ್ ಫ್ಲೋರ್ ಬಗ್ಗೆ.

ನವೋದಯ ಇಂಗ್ಲೀಷ್ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಿನ ಮುಖ್ಯೋಪಾಧ್ಯಾಯಿನಿ ಕುಸುಮಾ ಸಾಲ್ಯಾನ್ ಬೀಳ್ಕೊಡುಗೆ ಸಮಾರಂಭ

ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯ ವಾತಾವರಣವನ್ನು ನಿರ್ಮಿಸಿರುವ ಕುಸುಮಾ ಸಾಲ್ಯಾನ್‌ರವರ ನಾಯಕತ್ವ ಶ್ಲಾಘನೀಯ - ಎಳತ್ತೂರು ಗುತ್ತು ದಯಾನಂದ ಎಸ್. ಶೆಟ್ಟಿ





ಥಾಣೆ, ಜು. 3- ನವೋದಯ ಕನ್ನಡ ಸೇವಾ ಸಂಘ (ರಿ.), ಥಾಣೆ ಸಂಚಾಲಿತ ನವೋದಯ ಇಂಗ್ಲೀಷ್ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಿನಲ್ಲಿ ಕಳೆದ 32 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸಿದ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಕುಸುಮಾ ಆರ್. ಸಾಲ್ಯಾನ್‌ರವರ ಸೇವಾ ನಿವೃತ್ತಿ ಅಂಗವಾಗಿ ಬೀಳ್ಕೊಡುಗೆ ಸಮಾರಂಭವು ಜೂ. 27ರ ಶನಿವಾರದಂದು ನವೋದಯ ಜೂನಿಯರ್ ಕಾಲೇಜಿನ ಸಭಾಂಗಣದಲ್ಲಿ ವಿಜೃಂಭಣೆಯಿಂದ ಜರಗಿತು.

ನವೋದಯ ಕನ್ನಡ ಸೇವಾ ಸಂಘದ ಅಧ್ಯಕ್ಷ ಹಾಗೂ ನವೋದಯ ಇಂಗ್ಲೀಷ್ ಹೈಸ್ಕೂಲ್ ಮತ್ತು ಜೂನಿಯರ್ ಕಾಲೇಜಿನ ಕಾರ್ಯಾಧ್ಯಕ್ಷ ಎಳತ್ತೂರು ಗುತ್ತು ದಯಾನಂದ ಎಸ್. ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು, ಮಹಿಳಾ ವಿಭಾಗ, ಯುವ ವಿಭಾಗ, ಮಾಧ್ಯಮ ಮತ್ತು ಸಂವಹನ ವಿಭಾಗದ ಸದಸ್ಯರು ಹಾಗೂ ಶಾಲೆಯ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷ ದಯಾನಂದ ಎಸ್. ಶೆಟ್ಟಿ ಮಾತನಾಡಿ, ಕುಸುಮಾ ಸಾಲ್ಯಾನ್ ಅವರ ಸಮಯಪ್ರಜ್ಞೆ, ಉತ್ತಮ ನಾಯಕತ್ವ, ಪ್ರಾಮಾಣಿಕತೆ ಹಾಗೂ ವಿದ್ಯಾರ್ಥಿಗಳ ಬಗ್ಗೆ ಇರುವ ಅಪಾರ ಕಾಳಜಿಯನ್ನು ಹೃತ್ಪೂರ್ವಕವಾಗಿ ಶ್ಲಾಘಿಸಿದರು. ಶಾಲೆಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಅವರ ಕೊಡುಗೆ ಅನನ್ಯವಾಗಿದ್ದು, ಅವರ ಸೇವೆ ಎಲ್ಲರಿಗೂ ಸದಾ ಮಾದರಿಯಾಗಿರುತ್ತದೆ. ತಮ್ಮ ಸುದೀರ್ಘ ಸೇವಾ ಅವಧಿಯಲ್ಲಿ ಕುಸುಮಾ ಸಾಲ್ಯಾನ್, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ವಿಶೇಷ ಒತ್ತು ನೀಡಿ ಶಿಸ್ತು, ಮಾನವೀಯ ಮೌಲ್ಯಗಳು ಹಾಗೂ ಉತ್ತಮ ಸಂಸ್ಕಾರಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಶಿಕ್ಷಕ ವೃಂದವನ್ನು ಒಗ್ಗೂಡಿಸಿಕೊಂಡು, ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯ ವಾತಾವರಣವನ್ನು ನಿರ್ಮಿಸಿರುವ ಅವರ ನಾಯಕತ್ವ ಶ್ಲಾಘನೀಯವಾಗಿದೆ. ಕುಸುಮಾ ಸಾಲ್ಯಾನ್ ಅವರ ಸರಳತೆ, ಕರ್ತವ್ಯನಿಷ್ಠೆ, ಸಮಯಪಾಲನೆ ಹಾಗೂ ಎಲ್ಲರೊಂದಿಗೆ ಬೆಳೆಸಿಕೊಂಡಿರುವ ಆತ್ಮೀಯ ಸಂಬಂಧಗಳು ಸದಾ ಸ್ಮರಣೀಯವಾಗಿರಲಿವೆ. ನಿವೃತ್ತಿಯು ಸೇವೆಯ ಅಂತ್ಯವಲ್ಲ, ಅದು ಜೀವನದ ಹೊಸ ಅಧ್ಯಾಯದ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಅವರು ಉತ್ತಮ ಆರೋಗ್ಯ, ನೆಮ್ಮದಿ ಹಾಗೂ ಸಂತೋಷದಿಂದ ಕುಟುಂಬದವರೊಂದಿಗೆ ಸುಖಮಯ ಜೀವನ ನಡೆಸಲಿ ಎಂದೆನ್ನುತ್ತಾ ಅವರಿಗೆ ಹಾರೈಸಿದರು.

ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಶಶಿಧರ್ ಕೆ. ಶೆಟ್ಟಿ ಮಾತನಾಡಿ, ಶಾಲೆ ಮತ್ತು ಸಂಘದ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸಿದ ಕುಸುಮಾ ಸಾಲ್ಯಾನ್ ಶಾಂತ ಸ್ವಭಾವ, ಕರ್ತವ್ಯನಿಷ್ಠೆ ಹಾಗೂ ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವ ಮೂಲಕ ಸಂಸ್ಥೆಯ ಗೌರವ ಹೆಚ್ಚಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಘದ ಗೌರವ ಪ್ರಧಾನ ಕೋಶಾಧಿಕಾರಿ ಸುನಿಲ್ ಎಸ್. ಶೆಟ್ಟಿ, ಕುಸುಮಾ ಸಾಲ್ಯಾನ್‌ರವರ ಸೇವಾ ಮನೋಭಾವ, ಸರಳತೆ ಹಾಗೂ ಪ್ರಾಮಾಣಿಕತೆಯನ್ನು ಸ್ಮರಿಸಿ ನಿವೃತ್ತಿ ಜೀವನಕ್ಕೆ ಶುಭ ಹಾರೈಸಿದರು.

ಮುಖ್ಯೋಪಾಧ್ಯಾಯಿನಿ ಲತಾ ಮುರಳಿ, ಕುಸುಮಾ ಸಾಲ್ಯಾನ್ ಅವರ 32 ವರ್ಷಗಳ ಸೇವೆ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ ಎಂದು ತಿಳಿಸಿ, ಅವರು ನೀಡಿದ ಮಾರ್ಗದರ್ಶನವನ್ನು ಮುಂದುವರಿಸುವ ಭರವಸೆ ವ್ಯಕ್ತಪಡಿಸಿದರು.

ಉಪಮುಖ್ಯೋಪಾಧ್ಯಾಯಿನಿ ಜಾಸ್ಮಿನ್ ಜೇಕಬ್, ಸಹ ಮುಖ್ಯೋಪಾಧ್ಯಾಯಿನಿ ಅಮೃತಾ ಶೆಟ್ಟಿ, ಮೇಲ್ವಿಚಾರಕಿಯರಾದ ಮಲ್ಲಿಕಾ ಸಾಲ್ಯಾನ್, ಶಾರ್ಮಿನ್ ಸಯ್ಯದ್, ಶರ್ಮಿಳಾ ಶಿವದಾಸ್, ಸೀಮಾ ತಿವಾರಿ, ಮಾಜಿ ಮುಖ್ಯೋಪಾಧ್ಯಾಯಿನಿಯರಾದ ಅನುರಾಧ ಅರ್ಜುನ್ ವಾಡ್ಕರ್ ಹಾಗೂ ಅಜಿತ ಪ್ರದೀಪ್ ಕುಮಾರ್, ಕುಸುಮಾ ಸಾಲ್ಯಾನ್ ಅವರೊಂದಿಗೆ ಕಳೆದ ಅನುಭವಗಳನ್ನು ಹಂಚಿಕೊಂಡು ಶುಭ ಹಾರೈಸಿದರು.

ಕುಟುಂಬದ ಸದಸ್ಯರು ಮಾತನಾಡಿ, ಅವರ ಸೇವಾ ಮನೋಭಾವ, ಸರಳತೆ ಹಾಗೂ ಶಾಲೆಯ ಮೇಲಿನ ಅಪಾರ ಗೌರವವನ್ನು ಸ್ಮರಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ದಯಾನಂದ ಎಸ್. ಶೆಟ್ಟಿ, ಗೌರವ ಪ್ರಧಾನ ಕಾರ್ಯದರ್ಶಿ ಶಶಿಧರ್ ಕೆ. ಶೆಟ್ಟಿ, ಗೌರವ ಪ್ರಧಾನ ಕೋಶಾಧಿಕಾರಿ ಸುನಿಲ್ ಎಸ್. ಶೆಟ್ಟಿ, ಉಪಾಧ್ಯಕ್ಷರಾದ ರವಿ ಎಸ್. ಹೆಗ್ಡೆ, ಮುಖ್ಯೋಪಾಧ್ಯಾಯಿನಿ ಲತಾ ಮುರಳಿ, ಸಹ ಮುಖ್ಯೋಪಾಧ್ಯಾಯಿನಿಯರಾದ ಜಾಸ್ಮಿನ್ ಜೇಕಬ್ ಹಾಗೂ ಅಮೃತಾ ಶೆಟ್ಟಿ ಸೇರಿದಂತೆ ಸಂಘದ ಪದಾಧಿಕಾರಿಗಳು ಸೇರಿ 32 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಕುಸುಮಾ ಸಾಲ್ಯಾನ್ ಹಾಗೂ ಅವರ ಪತಿಯನ್ನು ಶಾಲು ಹೊದಿಸಿ, ಫಲ-ಪುಷ್ಪ ಮತ್ತು ಸ್ಮರಣಿಕೆ ನೀಡಿ ಗೌರವಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕುಸುಮಾ ಸಾಲ್ಯಾನ್, 32 ವರ್ಷಗಳ ಸೇವಾ ಪಯಣದಲ್ಲಿ ಬೆಂಬಲ ನೀಡಿದ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಹಾಗೂ ಸಹೋದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು. 1994ರಲ್ಲಿ ಶಿಕ್ಷಕಿಯಾಗಿ ಸೇವೆ ಆರಂಭಿಸಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ದೊರೆತಿದ್ದು, ಎಲ್ಲಾ ಜವಾಬ್ದಾರಿಗಳನ್ನು ಪ್ರಾಮಾಣಿಕತೆಯಿಂದ ನಿರ್ವಹಿಸಲು ಎಲ್ಲರ ಸಹಕಾರವೇ ಕಾರಣ ಎಂದು ತಿಳಿಸಿದರು.

ಮಾಧ್ಯಮಿಕ ವಿಭಾಗದ ಶಿಕ್ಷಕಿಯರ ಪ್ರಾರ್ಥನೆ ಹಾಗೂ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮಾಧ್ಯಮಿಕ ವಿಭಾಗದ ಮೇಲ್ವಿಚಾರಕಿ ಬಾಬಮ್ಮ ಕೋಲಿ ಗಣ್ಯರನ್ನು ಹಾಗೂ ಅತಿಥಿಗಳನ್ನು ಸ್ವಾಗತಿಸಿದರು. ಪ್ರಾಥಮಿಕ ವಿಭಾಗದ ಮೇಲ್ವಿಚಾರಕಿ ಸುಪ್ರೀತಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಾಥಮಿಕ ವಿಭಾಗದ ಸಹ ಮೇಲ್ವಿಚಾರಕಿ ಪ್ರಿಯಾ ಬರ್ಡೆಸ್ಕರ್ ಧನ್ಯವಾದಗೈದರು. ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕಿಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ಕೊನೆಯಲ್ಲಿ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಯಲ್ಲಿ ಪಾಲಕರು-ಶಿಕ್ಷಕರು ಪ್ರತಿಮರೂಪದ ಕೇಂದ್ರಬಿಂದು - ಅಪರ್ಣಾ ಲೋನಕಡಿ







ವಿ. ಪಿ. ಎಮ್ ಕನ್ನಡ ಶಾಲೆಗಳಲ್ಲಿ ಪಾಲಕ-ಶಿಕ್ಷಕ ವಾರ್ಷಿಕ ಮಹಾಸಭೆ

ಮುಂಬಯಿ, ಜು. 3- ಪ್ರತಿ ವರ್ಷದಂತೆ ಈ ವರ್ಷವೂ ಸಹ ಪಾಲಕ ಶಿಕ್ಷಕ ವಾರ್ಷಿಕ ಮಹಾಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಶಾಲೆಯ ಮುಖ್ಯೋಪಾಧ್ಯಾಯಿನಿ ಅಪರ್ಣಾ ಲೋನಕಡಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಪಾಲಕರ ಹಾಗೂ ಶಿಕ್ಷಕರ ಸುಸಂಸ್ಕೃತತೆ, ನಯ-ವಿನಯ ವಿನಮ್ರತೆ ಶಿಸ್ತು ಸಂಯಮ ಭಕ್ತಿ ಶ್ರದ್ಧೆ ಕಲಿಕೆಯ ಜೊತೆಗೆ ಸರಾಗವಾಗಿ ನಡೆದಾಗ ಮಾತ್ರ ಆದರ್ಶ ವಿದ್ಯಾರ್ಥಿಗಳ ನಿರ್ಮಾಣವಾಗುತ್ತದೆ. ಕೇವಲ ಶಿಕ್ಷಕರಿಂದ ಮಗುವಿನ ಸರ್ವಾಂಗೀಣ ವಿಕಾಸವಾಗಲು ಸಾಧ್ಯವಿಲ್ಲ. ಪ್ರತಿಯೊಂದು ಮಗುವಿನ ಪಾಲಕರ ಪಾತ್ರ ಅತ್ಯವಶ್ಯಕವಾಗಿದೆ. ಒಂದೊಂದು ಮಗು ನಮ್ಮ ದೇಶದ ಅಮೂಲ್ಯ ರತ್ನ. ಮಗುವಿನ ಭವ್ಯವಾದ ಭವಿಷ್ಯ ಪಾಲಕ ಶಿಕ್ಷಕರ ಮೇಲಿದೆ. ಪಾಲಕರು ಶಾಲೆಯ ಹಾಗೂ ಶಿಕ್ಷಕರ ಜೊತೆ ಯಾವಾಗಲೂ ಸಂಪರ್ಕದಿಂದ ಇದ್ದು ಸಹಕಾರವನ್ನು ಕೊಡಬೇಕೆಂದು ಹೇಳಿದ ಅವರು ಪಾಲಕ ಶಿಕ್ಷಕ ಸಭೆಗೆ ತಪ್ಪದೆ ಬನ್ನಿರೆಂದು ತಿಳಿಸಿದರು.

ಶಾಲಾ ಪರಿವೀಕ್ಷಕಿ ರತ್ನಾ ಕುಲಕರ್ಣಿ ಮಕ್ಕಳನ್ನು ಶಾಲೆಯ ಸೌಲಭ್ಯಗಳನ್ನು ಶಾಲೆಯ ಶಿಕ್ಷಣ ಮತ್ತು ಶಾಲಾ ಬಸ್ಸಿನ ಕುರಿತು ಮಾತನಾಡಿದರು. ವಿದ್ಯಾ ಪ್ರಸಾರಕ ಮಂಡಲದವರು ಕನ್ನಡ ಮಾಧ್ಯಮದ ಮಕ್ಕಳು ವಿದ್ಯೆಯಿಂದ ವಂಚಿತರಾಗಬಾರದೆಂದು ಬಸ್ಸಿನ ದರದಲ್ಲಿ ರಿಯಾಯಿತಿಯನ್ನು ಕಲ್ಪಿಸಿಕೊಟ್ಟಿದೆ. ತಾಂತ್ರಿಕ ಶಿಕ್ಷಣದಿಂದ ವಂಚಿತರಾಗಬಾರದೆಂದು ಎಲ್ಲಾ ವರ್ಗಕೋಣೆಗಳಲ್ಲಿ ಸ್ಮಾರ್ಟ್ ಬೋರ್ಡ್‌ಗಳ ಬೋಧನೆಯ ಮೂಲಕ ಅಧ್ಯಯನಕ್ಕೆ ಒತ್ತು ನೀಡಿದೆ. ಅಷ್ಟೇ ಅಲ್ಲದೇ ಅವರಿಗೆ ವಿಶೇಷ ಕಂಪ್ಯೂಟರ್ ಕಲಿಕೆಗೆ ಪ್ರೋತ್ಸಾಹ ನೀಡುತ್ತಿದೆ. ಇದರ ಮಹತ್ವವನ್ನು ಅರಿತ ಕನ್ನಡ ಬಾಂಧವರು ಸದುಪಯೋಗ ಮಾಡಿಕೊಳ್ಳಬೇಕೆಂಬುದೇ ನಮ್ಮೆಲ್ಲರ ಮಹದಾಸೆಯಾಗಿದೆ ಎಂದು ಕೇಳಿಕೊಂಡರು.

ಜ್ಯೋತಿ ಕುಲಕರ್ಣಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಅಪಾರವಾದ ಜ್ಞಾನ ಸಂಪತ್ತಿರುತ್ತದೆ. ಅದನ್ನು ಹೊರಳೆಯುವ ತಂತ್ರಗಾರಿಕೆ ಪಾಲಕರಲ್ಲಿ ಇರುತ್ತದೆ. ದಿನನಿತ್ಯದ ಮನೆಗೆಲಸವನ್ನು ಮಾಡಿಸಿ ಕಳಿಸಬೇಕು. ಮಕ್ಕಳ ಮೇಲೆ ಸದಾ ನಿಗಾವಹಿಸಬೇಕು. ಶಿಸ್ತು ಪ್ರಯತ್ನ ಪ್ರಮಾಣಿಕೆ ಸಂಯಮ ಸುಸಂಸ್ಕೃತತೆಯನ್ನು ಬೆಳೆಸುವಲ್ಲಿ ಪಾಲಕರ ಶ್ರಮವಹಿಸಬೇಕು. ಶಾಲೆಯಲ್ಲಿ ಕೊಡುವ ಮಾರ್ಗದರ್ಶನದಿಂದ ಮತ್ತು ತಂದೆ-ತಾಯಿಗಳು ಕೊಡುವ ಸಂಸ್ಕಾರದಿಂದ ಅವರು ಗುರಿಯನ್ನು ಹಾಗೂ ಸಾಧನೆಯನ್ನು ಮಾಡಲು ಸಾಧ್ಯವಿದೆ ಎಂದು ಹೇಳಿದರು.

ದೂರ ದೂರದ ಪ್ರದೇಶಗಳಾದ ರಬಾಳೆ, ಐರೋಲಿ, ಕಲ್ವಾ, ಥಾಣೆ ಮತ್ತು ವಿಕ್ರೋಲಿಯಿಂದ ಹಾಗೂ ಇನ್ನಿತರ ಪ್ರದೇಶಗಳಿಂದ ನಮ್ಮ ಶಾಲೆಗೆ ಬರುವ ವಿದ್ಯಾರ್ಥಿ ಪಾಲಕರು ನಮ್ಮ ಶಾಲೆಯ ಶಿಕ್ಷಕರು ಹೊಸ ವಿದ್ಯಾರ್ಥಿಗಳ ಶೋಧನೆಗೆ ಭೇಟಿ ನೀಡಿದಾಗ ಅವರು ನಮ್ಮ ಮೇಲೆ ತೋರಿಸುತ್ತಿರುವ ಪ್ರೀತಿ ಕಾಳಜಿ ಸಹಕಾರವನ್ನು ಮರೆಯುವಂತಿಲ್ಲ ಅವರಿಗೆ ಮುಖ್ಯೋಪಾಧ್ಯಾಯಿನಿ ಪುಷ್ಪ ನೀಡಿ ಗೌರವಿಸಿದರು.

ವಿದ್ಯಾರ್ಥಿಗಳ ಪ್ರಾರ್ಥನೆಯಿಂದ ಪ್ರಾರಂಭವಾದ ಈ ಕಾರ್ಯಕ್ರಮದ ವೇದಿಕೆಯಲ್ಲಿ ಜ್ಯೋತಿ ಕುಲಕರ್ಣಿ, ರಮೇಶ್ ಚಾನ ಕೋಟೆ, ಅಂಬಾಜೆಪ್ಪ ಕಾಟಗಾಂವ್, ಸುನೀತಾ ಮಠ ವರದಿ ವಾಚನಮಾಡಿ ಅನಿಸಿಕೆಯನ್ನು ಹಂಚಿಕೊಂಡರು. ಲಕ್ಷ್ಮೀ ಕೆಂಗನಾಳ, ವಿಶ್ವನಾಥ್ ಧನಶೆಟ್ಟಿ, ಗುರುಸಿದ್ದಪ್ಪ ರಬ್ಬಾ, ಸದಾನಂದ ವರಕೋಟೆ, ಮಲ್ಲಿಕಾರ್ಜುನ ಚೌಗಲೆ ಉಪಸ್ಥಿತರಿದ್ದರೆ, ಕಾರ್ಯಕ್ರಮದಲ್ಲಿ ಪಾಲಕರು ಶಿಕ್ಷಕೇತರ ಸಿಬ್ಬಂದಿಗಳು ಸಮಾವೇಶವಾಗಿದ್ದರು. ಸ್ವಾಗತ ನಿರೂಪಣೆ ವರದಿ ವಾಚನ ಹಾಗೂ ಧನ್ಯವಾದವನ್ನು ಸುನೀತಾ ಮಠ ಹಾಗೂ ಅಂಬಾಜೆಪ್ಪ ಕಾಟಗಾಂವ ನಿರ್ವಹಿಸಿದರು. ಇದರ ಮಧ್ಯೆ ತಾರಾಮತಿ ಗೌಡ ಮತ್ತು ಶ್ರವಣಕುಮಾರ ಕಾಂಬ್ಳೆ ಪಾಲಕರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಶನಿಮಹಾತ್ಮಾ ಪೂಜಾ ಸಮಿತಿ : ಶನಿಮಹಾತ್ಮಾ ಚಾರಿಟೇಬಲ್ ಸೊಸ್ಯಾಟಿ ವತಿಯಿಂದ ಶಾಲಾ ಪರಿಕರಗಳ ವಿತರಣೆ

ಶೈಕ್ಷಣಿಕ ಪ್ರೋತ್ಸಾಹ ಮಕ್ಕಳ ಬದುಕಿನ ಪ್ರಗತಿಯ ಮೆಟ್ಟಿಲು - ಇನ್ನಂಜೆ ಪ್ರಭಾಕರ ಶೆಟ್ಟಿ







ಶೈಕ್ಷಣಿಕ ಸಹಾಯ ಅಂದರೆ ಅದು ದೇವರ ಸೇವೆಗಿಂತ ದೊಡ್ಡದು - ಶ್ರೀನಿವಾಸ ಸಾಫಲ



ಪೂಜಾ ಸಮಿತಿಯ ಅಧ್ಯಕ್ಷ ಶ್ರೀನಿವಾಸ ಸಾಫಲ್ಯ ಮಾತನಾಡುತ್ತಾ, ಶ್ರೀ ಶನಿ ಮಹಾತ್ಮ ಚಾರಿಟೇಬಲ್ ಟ್ರಸ್ಟ್ ಮುಖಾಂತರ ವರ್ಷಂಪ್ರತಿ ಹಲವಾರು ಸಾಮಾಜಿಕ ಕಾರ್ಯಗಳು ನಿರಂತರ ನಡೆಯುತ್ತಾ ಬರುತ್ತಿವೆ. ಅದರಲ್ಲಿ ಪ್ರಮುಖವಾದ ಕಾರ್ಯಕ್ರಮ ಅಂದರೆ ಪರಿಸರದ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಶಾಲಾ ಪರಿಕರಗಳನ್ನು ಹಂಚುವುದು. ಬಡ ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುವುದು ಅಂದರೆ ಅದು ದೇವರ ಸೇವೆಗಿಂತ ದೊಡ್ಡದು. ಭಾರತದ ಭವಿಷ್ಯವು ಈ ವಿದ್ಯಾರ್ಥಿಗಳ ಕೈಯಲ್ಲಿದೆ. ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಪ್ರಭಾಕರ ಶೆಟ್ಟಿ ಇನ್ನಂಜೆಯವರ ಮುಂದಾಳತ್ವದಲ್ಲಿ ವರ್ಷಂಪ್ರತಿ ನಡೆಯುವ ಮಹತ್ಕಾರ್ಯಕ್ಕೆ ಪ್ರತಿಯೊಬ್ಬ ಸದಸ್ಯರ ಸಹಾಯ ಇರುತ್ತದೆ ಎಂದರು.

ಮುಂಬಯಿ, ಜು. 3- ಕಳೆದ 32 ವರ್ಷಗಳಿಂದ ಸಂಸ್ಥೆಯು ಪ್ರತಿವರ್ಷ ಸುಮಾರು 800 ರಿಂದ 900 ವಿದ್ಯಾರ್ಥಿಗಳಿಗೆ ಪುಸ್ತಕಗಳು, ಶಾಲಾ ಚೀಲಗಳು ಹಾಗೂ ಇತರ ಅಗತ್ಯ ಶಾಲಾ ಸಾಮಗ್ರಿಗಳನ್ನು ವಿತರಿಸುತ್ತಾ ಬರುತ್ತಿದೆ. ಸಂಸ್ಥೆಯು ಶಿಕ್ಷಣ ಸೇವೆಯ ಜೊತೆಗೆ ಉಚಿತ ವೈದ್ಯಕೀಯ ತಪಾಸಣೆ, ಕ್ರೀಡಾಕೂಟಗಳು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಉಪನ್ಯಾಸಗಳು ಹಾಗೂ ವಿವಿಧ ಧಾರ್ಮಿಕ ಕ್ಷೇತ್ರಗಳ ಪ್ರವಾಸಗಳನ್ನು ಆಯೋಜಿಸುತ್ತಿದೆ. ವೈಷ್ಣೋದೇವಿ, ಸ್ವರ್ಣ ಮಂದಿರ (ಪಂಜಾಬ್), ಮಧುರೈ, ರಾಮೇಶ್ವರಂ, ತಿರುಪತಿ, ಹರಿದ್ವಾರ, ಋಷಿಕೇಶ, ಬದ್ರಿನಾಥ, ಕಾಶಿ, ಅಯೋಧ್ಯೆ, ತ್ರಿವೇಣಿ ಸಂಗಮ ಹಾಗೂ ಕೊಲ್ಹಾಪುರ ಮಹಾಲಕ್ಷ್ಮೀ ದೇವಸ್ಥಾನ ಮೊದಲಾದ ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡುವ ಮೂಲಕ ಸದಸ್ಯರಲ್ಲಿ ಆಧ್ಯಾತ್ಮಿಕ ಚಿಂತನೆ ಬೆಳೆಸಲು ಸಂಸ್ಥೆ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

ಮಲಾಡ್ ಪೂರ್ವದ ಕುರಾರ್ ವಿಲೇಜಿನ ಲಕ್ಷ್ಮಣ ನಗರದ ಶನಿ ಮಹಾತ್ಮಾ ಪೂಜಾ ಸಮಿತಿಯ ಅಂಗಸಂಸ್ಥೆಯಾದ ಶನಿ ಮಹಾತ್ಮಾ ಚಾರಿಟೇಬಲ್ ಸೊಸ್ಯಾಟಿಯ ವತಿಯಿಂದ ಜೂನ್ 21ರ ಆದಿತ್ಯವಾರದಂದು ಬೆಳಿಗ್ಗೆ ಸುಮಾರು 970 ವಿದ್ಯಾರ್ಥಿಗಳಿಗೆ ಶಾಲಾ ಸಾಮಗ್ರಿಗಳನ್ನು ವಿತರಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಚಾರಿಟೇಬಲ್ ಸೊಸ್ಯಾಟಿಯ ಅಧ್ಯಕ್ಷ ಇನ್ನಂಜೆ ಪ್ರಭಾಕರ ಶೆಟ್ಟಿ ಮಾತನಾಡಿದರು.

ಅವರು ಮುಂದುವರಿಯುತ್ತಾ, ದಾನ-ಧರ್ಮಗಳಿಂದ ದೊರೆಯುವ ಸಂತೃಪ್ತಿ ಮತ್ತು ಪುಣ್ಯಫಲಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿದ್ದು, ಮಕ್ಕಳ ಶಿಕ್ಷಣ ಹಾಗೂ ಅವರ ಬದುಕಿನ ಪ್ರಗತಿಗೆ ಶೈಕ್ಷಣಿಕ ಪ್ರೋತ್ಸಾಹವು ಮಹತ್ವದ ಮೆಟ್ಟಿಲಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪಂಚಗಂಗಾವಳಿ ಕೋ-ಆಪರೇಟಿವ್ ಕ್ರೆಡಿಟ್ ಸೊಸ್ಯಾಟಿಯ ನಿರ್ದೇಶಕ ಹಾಗೂ ಪೇಂಟ್ ಮೀಡಿಯಾ ಕಂಪನಿಯ ಉಪಾಧ್ಯಕ್ಷ ಉದಯ ಮೊಗವೀರ ಮಾತನಾಡುತ್ತಾ, ಇಂತಹ ಪುಣ್ಯ ಕಾರ್ಯದಲ್ಲಿ ಭಾಗವಹಿಸುವ ಅವಕಾಶ ದೊರೆತಿರುವುದು ಸಂತಸದ ಸಂಗತಿ. ದೀರ್ಘಕಾಲದಿಂದ ಸಮಾಜ ಸೇವೆ ಮಾಡುತ್ತಿರುವ ಈ ಸಂಸ್ಥೆಯ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಇನ್ನೋರ್ವ ಅತಿಥಿ ನರೇಶ್ ಮಾತನಾಡಿ, ಈ ಸಮಾಜಸೇವಾ ಕಾರ್ಯದಲ್ಲಿ ಭಾಗಿಯಾಗುವ ಅವಕಾಶ ನೀಡಿದ ಎಲ್ಲರಿಗೂ ನಾನು ಚಿರಋಣಿ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಹಿರಿಯರಾದ ನಾರಾಯಣ ಶೆಟ್ಟಿ ಮಾತನಾಡಿ, ಆಧ್ಯಾತ್ಮಿಕ ಬೆಳವಣಿಗೆಯೊಂದಿಗೆ ಶೈಕ್ಷಣಿಕ ಪ್ರೋತ್ಸಾಹವೂ ಮನುಷ್ಯನ ಬದುಕಿನ ಏಳಿಗೆಗೆ ಅತ್ಯಂತ ಪೂರಕವಾಗಿದೆ ಎಂದು ಹೇಳಿದರು.

ಕಾರ್ಯಕ್ರಮವನ್ನು ರಾಜಶ್ರೀ ನಿರೂಪಿಸಿದರು. ಕಾರ್ಯದರ್ಶಿ ಮಹೇಶ್ ಸಾಲ್ಯಾನ್ ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿಗಳಿಗೆ ಶಾಲಾ ಸಾಮಗ್ರಿಗಳನ್ನು ಕಡಿಮೆ ದರದಲ್ಲಿ ಒದಗಿಸಲು ಸಹಕರಿಸಿದ ರವಿ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮಕ್ಕೆ ಸಹಾಯ ಮಾಡಿದ ಎಲ್ಲಾ ದಾನಿಗಳು ಹಾಗೂ ಸಹಕಾರಿಗಳನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸದಸ್ಯರಾದ ಭರತ್ ಕೋಟ್ಯಾನ್, ಚಂದ್ರಕುಮಾರ್ ಶೆಟ್ಟಿ, ಜಯೇಶ್ ಸಾಲ್ಯಾನ್, ಶೀತಲ್ ಕೋಟ್ಯಾನ್, ಹರೀಶ್ ಸಾಲ್ಯಾನ್, ನಿತ್ಯಾನಂದ ಕೋಟ್ಯಾನ್, ಉದಯ್ ಕೋಟ್ಯಾನ್, ಸುರೇಶ್ ಸಾಲ್ಯಾನ್, ಮನೋಹರ್ ಶೆಟ್ಟಿ, ಪ್ರಭಾಕರ್ ಬಿ. ಶೆಟ್ಟಿ ಉಪಸ್ಥಿತರಿದ್ದರು. ಶನಿ ಮಹಾತ್ಮಾ ಪೂಜಾ ಸಮಿತಿಯ ಅಧ್ಯಕ್ಷರು, ಮಹಿಳಾ ವಿಭಾಗ ಹಾಗೂ ಯುವ ವಿಭಾಗದ ಪದಾಧಿಕಾರಿಗಳು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು.

ವಾಲಿಬಾಲ್ ಆಟಗಾರ್ತಿ ರಿಷ್ಮಾ ರಮೇಶ್ ಶೆಟ್ಟಿ ಪುಣೆ ಅಂತಾರಾಷ್ಟ್ರೀಯ ಐ.ಎಸ್.ಎಫ್. ವರ್ಲ್ಡ್ ಸ್ಕೂಲ್ ಗೇಮ್ಸ್‌ಗೆ ಆಯ್ಕೆ



ಪುಣೆ, ಜು. 3- ಇಲ್ಲಿಯ ರಿಷ್ಮಾ ರಮೇಶ್ ಶೆಟ್ಟಿ ರಾಷ್ಟ್ರೀಯ ಮಟ್ಟದ ವಾಲಿಬಾಲ್ ಪಂದ್ಯಾಟದಲ್ಲಿ ಹೆಸರನ್ನು ಗಳಿಸಿ ಪ್ರಶಸ್ತಿಯನ್ನು ಪಡೆದವರಾಗಿದ್ದಾರೆ. ಇದೀಗ ಚೀನಾದಲ್ಲಿ ಜುಲೈ 1ರಿಂದ 11ರ ವರೆಗೆ ನಡೆಯುತ್ತಿರುವ ಅಂತಾರಾಷ್ಟ್ರೀಯ ಮಟ್ಟದ ಐ.ಎಸ್. ಎಫ್. ವರ್ಲ್ಡ್ ಸ್ಕೂಲ್ ಗೇಮ್ಸ್‌ನ ವಾಲಿಬಾಲ್ ಚಾಂಪಿಯನ್ ಶಿಪ್‌ನಲ್ಲಿ ಭಾರತ ತಂಡದಿಂದ ಆಯ್ಕೆಯಾಗಿದ್ದಾರೆ.

ಮಹಾರಾಷ್ಟ್ರದ ಪುಣ್ಯ ನಗರಿ ಪುಣೆಯಲ್ಲಿ ನೆಲೆಸಿರುವ ರಮೇಶ್ ಶೆಟ್ಟಿ ಎಣ್ಣೆಹೊಳೆ ಮತ್ತು ರಂಜಿತಾ ರಮೇಶ್ ಶೆಟ್ಟಿ ದಂಪತಿಯ ಮಗಳಾದ ರೀಷ್ಮಾ ಶೆಟ್ಟಿ, ಪುಣೆಯಲ್ಲಿ ಬೆಳೆದು, ಶಿಕ್ಷಣದ ಜೊತೆಯಲ್ಲಿ ನಿರಂತರ ಕ್ರೀಡೆಯಲ್ಲಿ ತೊಡಗಿಸಿಕೊಂಡು, ಕಠಿಣ ಅಭ್ಯಾಸ, ಹಠ ಸಾಧನೆಯಿಂದ ಯಶಸ್ಸನ್ನು ಪಡೆದಿದ್ದಾರೆ.

ಜಿಲ್ಲಾ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ವಾಲಿಬಾಲ್ ಪಂದ್ಯಾಟದಲ್ಲಿ ಸಾಧನೆ ಗೈದಿದ್ದಾರೆ. ಅವರ ಸಾಧನೆಗೆ ಪೂರಕವಾಗಿ ಇದೀಗ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುವ ಸದಾವಕಾಶ ಒದಗಿ ಬಂದಿದೆ. ವಾಲಿಬಾಲ್‌ನಲ್ಲಿ ಅವರ ಸಾಧನೆಯನ್ನು ಪರಿಗಣಿಸಿ ಪುಣೆಯ ಹಲವಾರು ವಿದ್ಯಾಸಂಸ್ಥೆ, ಸೇವಾ ಸಂಸ್ಥೆಗಳು ಗೌರವಿಸಿದೆ. ಅವರ ಕ್ರೀಡಾ ಜೀವನದಲ್ಲಿ ಇನ್ನಷ್ಟು ಸಾಧನೆ ಮಾಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಯನ್ನು ಪಡೆದು ಬರಲಿ.

ಡೀಪ್‌ಫೇಕ್, ಎಐ-ರಚಿತ ಫೋಟೋ ವಿರುದ್ಧ ನಟಿ ಪ್ರೀತಿ ಜಿಂಟಾ ಹೈಕೋರ್ಟ್‌ಗೆ

ಮುಂಬಯಿ, ಜು.3 -ಹಲವಾರು ಸಾಮಾಜಿಕ ಮಾಧ್ಯಮಗಳು ಮತ್ತು ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಲ್ಲಿ ಎಐ-ರಚಿತ ಡೀಪ್‌ಫೇಕ್ ಚಿತ್ರಗಳು ಮತ್ತು ಮಾರ್ಫ್ ಮಾಡಿದ ವಿಷಯವನ್ನು ತೆಗೆದುಹಾಕುವಂತೆ ಕೋರಿ ನಟಿ ಪ್ರೀತಿ ಜಿಂಟಾ ಬಾಂಬೇ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ತಮ್ಮನ್ನು ಒಳಗೊಂಡ ಅಂತಹ ಅನಧಿಕೃತ ವಿಷಯವನ್ನು ಪೋಸ್ಟ್ ಮಾಡುವುದರ ವಿರುದ್ಧ ನ್ಯಾಯಾಲಯದ ತಡೆಯಾಜ್ಞೆಗಾಗಿ ಕೂಡ ಆಕೆ ಕೋರಿದ್ದಾರೆ. ಪ್ರಕರಣದಲ್ಲಿ ಸಂಕ್ಷಿಪ್ತ ಸಲ್ಲಿಕೆಗಳನ್ನು ಆಲಿಸಿದ ಬಳಿಕ ನ್ಯಾಯಮೂರ್ತಿ ಮಾಧವ್ ಜಾಮ್ದಾರ್ ನೇತೃತ್ವದ ಏಕ ಪೀಠವು ಶುಕ್ರವಾರ, ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳು ಸೇರಿದಂತೆ ಪಕ್ಷಗಳು ವೆಬ್‌ಸೈಟ್‌ಗಳಿಂದ ಆಕ್ಷೇಪಾರ್ಹ ವಿಷಯವನ್ನು ತೆಗೆದುಹಾಕಲು ಕಾರ್ಯವಿಧಾನವನ್ನು ರೂಪಿಸುವಂತೆ ಸೂಚಿಸಿ, ಈ ಪ್ರಕರಣವನ್ನು ಜು.6 ರಂದು ಹೆಚ್ಚಿನ ವಿಚಾರಣೆಗೆ ನಿಗದಿಪಡಿಸಿದೆ.

ಮಾಧವ ತಿಂಗಳಾಯರ 113ನೇ ಜನ್ಮದಿನಾಚರಣೆಯ ಸಂಸ್ಮರಣಾ ಕಾರ್ಯಕ್ರಮ

ನಾಟಕ, ಸ್ವಾತಂತ್ರ್ಯ ಹೋರಾಟಕ್ಕೆ ಮಾಧವ ತಿಂಗಳಾಯರ ಕೊಡುಗೆ ಅನನ್ಯ - ತಾರಾನಾಥ ಗಟ್ಟಿ



ಮಂಗಳೂರು, ಜು. 3- ತುಳುವಿನ ಮೊದಲ ಪ್ರಕಟಿತ ನಾಟಕ ಕೃತಿ 'ಜನ ಮರ್ಲ್' ನಾಟಕದ ಲೇಖಕ ಮಾಧವ ತಿಂಗಳಾಯರು, 30 ನಾಟಕಗಳನ್ನು ಬರೆದು ಸಾಹಿತ್ಯ ಸೇವೆಯ ಜೊತೆಗೆ ಸ್ವಾತಂತ್ರ್ಯ ಹೋರಾಟ ಹಾಗೂ ಸಾಮಾಜಿಕ ಸುಧಾರಣೆಗೂ ಅನನ್ಯ ಸೇವೆ ಸಲ್ಲಿಸಿದವರು ಎಂದು ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಲ್ಲಿ ಆಯೋಜಿಸಿದ್ದ ಮಾಧವ ತಿಂಗಳಾಯರ 113ನೇ ಜನ್ಮದಿನಾಚರಣೆಯ ಸಂಸ್ಮರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಿವೃತ್ತ ಪ್ರಾಂಶುಪಾಲ ಪ್ರೊ. ಪಿ. ಕೃಷ್ಣಮೂರ್ತಿ ಮಾತನಾಡಿ, ತಿಂಗಳಾಯರ ಎಲ್ಲಾ ತುಳು ನಾಟಕಗಳು ವೈಚಾರಿಕ ಪ್ರಖರತೆಗಳಿಂದ ಕೂಡಿದ್ದವು. ಕನ್ನಡ ಸಾಹಿತ್ಯ ಲೋಕವು ಪ್ರಗತಿಶೀಲ ಕಾಲಘಟ್ಟದಲ್ಲಿ ಮುನ್ನಡೆಯುವ ಸಂದರ್ಭದಲ್ಲಿ ಪ್ರಗತಿಶೀಲ ಆಶಯದ ಕನ್ನಡ ನಾಟಕವನ್ನು ಕೂಡ ಮಾಧವ ತಿಂಗಳಾಯರು ರಚಿಸಿದ್ದರು ಎಂದು ಹೇಳಿದರು.

ರಂಗ ನಿರ್ದೇಶಕ ಜಗನ್ ಪವಾರ್ ಬೇಕಲ್ ಮಾತನಾಡಿ, ಮಾಧವ ತಿಂಗಳಾಯರ ಮಾವ, ಅಜ್ಜ ಸೇರಿದಂತೆ ಪೂರ್ತಿ ಕುಟುಂಬ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದರು ಎಂದು ನೆನಪಿಸಿದರು.

ಹಿರಿಯ ರಂಗ ನಿರ್ದೇಶಕ ತಮ್ಮ ಲಕ್ಷ್ಮಣ ಮಾತನಾಡಿ, ತುಳು ನಾಟಕದ ಆದ್ಯ ಪ್ರವರ್ತಕರಾದ ಮಾಧವ ತಿಂಗಳಾಯರ ನೆನಪಿನಲ್ಲಿ 'ತುಳು ರಂಗಭೂಮಿ ದಿನಾಚರಣೆ' ಮಾಡುವ ನಿಟ್ಟಿನಲ್ಲಿ ಚಿಂತಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಿಂಗಳಾಯರ ಕುಟುಂಬಸ್ಥರಾದ ಪ್ರೇಮಚಂದ್ರ ತಿಂಗಳಾಯರು ಭಾಗವಹಿಸಿ ಮಾಧವ ತಿಂಗಳಾಯರ ಸಾಮಾಜಿಕ ಮತ್ತು ಸಾಹಿತ್ಯಿಕ ಕೆಲಸಗಳನ್ನು ಸ್ಮರಿಸಿಕೊಂಡರು.

ಕಾರ್ಯಕ್ರಮದಲ್ಲಿ ತುಳು ಪರಿಷತ್ತಿನ ಅಧ್ಯಕ್ಷ ಶುಭೋದಯ ಆಳ್ವ, ದುರ್ಗಾ ಪ್ರಸಾದ್, ಹೊನ್ನಯ್ಯ, ಪತ್ರಕರ್ತರಾದ ರಮೇಶ್ ಮಂಜೇಶ್ವರ, ಪ್ರಕಾಶ್ ಪುತ್ತೂರು, ಸಂಗೀತ ಕಲಾವಿದರಾದ ರತ್ನಾವತಿ ಜೆ. ಬೈಕಾಡಿ, ನಾದ ಮಣಿನಾಲ್ಕೂರು, ಲೇಖಕಿ ರೂಪಕಲಾ ಆಳ್ವ, ಸಂಕೇತದ ಅಧ್ಯಕ್ಷ ಹರೀಶ್ ಶಕ್ತಿ ನಗರ ಮೊದಲಾದವರು ಉಪಸ್ಥಿತರಿದ್ದರು. ಉಪನ್ಯಾಸಕ ರಘು ಇಡ್ಕಿದು ವಂದಿಸಿದರು.

ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ ತೋಕೂರು ಹಳೆಯಂಗಡಿ : ವಾರ್ಷಿಕ ಮಹಾಸಭೆ

ಅಧ್ಯಕ್ಷರಾಗಿ ಸುರೇಶ್ ಶೆಟ್ಟಿ ಮತ್ತು ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆಯಾಗಿ ನೀಮಾ ಸನಿಲ್ ಆಯ್ಕೆ


ಸುರೇಶ್ ಶೆಟ್ಟಿ


ನೀಮಾ ಸನಿಲ್

ಹಳೆಯಂಗಡಿ, ಜು. 3- ಶ್ರೀ ಸುಬ್ರಹ್ಮಣ್ಯ ಮಹಾಗಣಪತಿ ಸ್ಪೋರ್ಟ್ಸ್ ಕ್ಲಬ್ (ರಿ.) ತೋಕೂರು ಹಳೆಯಂಗಡಿ ಇದರ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಕ್ಲಬ್‌ನ ಸಭಾಂಗಣದಲ್ಲಿ ಜರಗಿತು.

ಈ ವಾರ್ಷಿಕ ಮಹಾಸಭೆಯಲ್ಲಿ 2026-2027ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯು ಜರಗಿತು.

ಅದರಂತೆ ಗೌರವ ಅಧ್ಯಕ್ಷರಾಗಿ ಲೀಲಾಧರ್ ಕಡಂಬೋಡಿ, ಅಧ್ಯಕ್ಷರಾಗಿ ಸುರೇಶ್ ಶೆಟ್ಟಿ, ಉಪಾಧ್ಯಕ್ಷರಾಗಿ ಜಗದೀಶ್ ಕೋಟ್ಯಾನ್, ಗೌ. ಪ್ರ. ಕಾರ್ಯದರ್ಶಿ ಸಂತೋಷ್ ದೇವಾಡಿಗ, ಗೌ. ಕೋಶಾಧಿಕಾರಿ ಜಗದೀಶ್ ಕುಲಾಲ್, ಜೊತೆ ಕೋಶಾಧಿಕಾರಿ ರವಿರಾಜ್ ಶೆಟ್ಟಿಗಾರ್, ಜತೆ ಕಾರ್ಯದರ್ಶಿ ಗಣೇಶ್ ಆಚಾರ್ಯ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆಯಾಗಿ ನೀಮಾ ಸನಿಲ್, ಜೊತೆ ಕಾರ್ಯಾಧ್ಯಕ್ಷೆಯಾಗಿ ಶೈಲಾ ಶೆಟ್ಟಿಗಾರ್, ಮಹಿಳಾ ಜೊತೆ ಕಾರ್ಯದರ್ಶಿಯಾಗಿ ಕವಿತಾ ನಾಗೇಶ್, ಸಾಂಸ್ಕೃತಿಕ ಕಾರ್ಯದರ್ಶಿಗಳಾಗಿ ಚಂದ್ರ ಸುವರ್ಣ, ಹರ್ಷಿತಾ ದೇವಾಡಿಗ, ಆರೋಗ್ಯ ನಿಧಿ ಕಾರ್ಯದರ್ಶಿ ಅರ್ಫಾಜ್, ಲೆಕ್ಕ ಪರಿಶೋಧಕ ಸುಭಾಶ್ ಅಮೀನ್, ಕ್ರೀಡಾ ಕಾರ್ಯದರ್ಶಿ ಗೌತಮ್ ಬೆಳ್ಳಡ, ತಂಡದ ನಾಯಕ ಸಚಿನ್ ಆಚಾರ್ಯ, ಉಪ ನಾಯಕ ಪ್ರಥಮ್ ಅಮೀನ್ ಅವರನ್ನು ಮಹಾಸಭೆಯು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಇಂದು ಇಂಗ್ಲೆಂಡ್ ವಿರುದ್ಧದ 2ನೇ ಟಿ20: ಸ್ಯಾಮ್ಸನ್ ಫಾರ್ಮ್, ಸೂರ್ಯವಂಶಿ ಅವರ ಚೊಚ್ಚಲ ಪಂದ್ಯದ ಮೇಲೆ ಚಿತ್ತ



ಮ್ಯಾಂಚೆಸ್ಟರ್, ಜು.3 - ವೈಭವ್ ಸೂರ್ಯವಂಶಿ ಅವರ ಚೊಚ್ಚಲ ಪಂದ್ಯಕ್ಕಾಗಿ ಚಿಟ್ಟಿತ್ತಿರುವ ಬೆಡಿತೆಯ ನಡುವೆ ನಾಳೆ ಇಂಗ್ಲೆಂಡ್ ವಿರುದ್ಧ ಎರಡನೇ ಟಿ20ಐನಲ್ಲಿ ನಿರಂತರವಾಗಿ ವಿಫಲರಾದ ಸಂಜು ಸ್ಯಾಮ್ಸನ್ ಉತ್ತಮ ಪ್ರದರ್ಶನ ನೀಡುವ ಒತ್ತಡದಲ್ಲಿದ್ದಾರೆ.

ಈ ಸರಣಿಯ ಮೊದಲ ಪಂದ್ಯದಲ್ಲಿ ಟೀಮ್ ಇಂಡಿಯಾ ಮೊದಲು ಬ್ಯಾಟ್ ಮಾಡಿ 190 ರನ್‌ಗಳ ಗುರಿಯನ್ನು ಇಂಗ್ಲೆಂಡ್ ತಂಡಕ್ಕೆ ನೀಡಿತ್ತು. ಆದರೆ ಇಂಗ್ಲೆಂಡ್ ಬ್ಯಾಟಿಂಗ್ ಆರಂಭ ಮಾಡುವ ಮುನ್ನ ಮಳೆ ಆರಂಭವಾದ ಕಾರಣ ಪಂದ್ಯ ಫಲಿತಾಂಶ ರಹಿತವಾಯಿತು.

ಚೆಸ್ಟರ್ ಲಿ ಸ್ಟ್ರೀಟ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಹಾಗೂ ನಾಯಕ ಶ್ರೇಯಸ್ ಅಯ್ಯರ್ ಅವರ ಅರ್ಧಶತಕಗಳ ಬಲದಿಂದ ಪ್ರವಾಸಿ ಭಾರತ ತಂಡವು ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೊದಲ ಪಂದ್ಯದಲ್ಲಿ 7 ವಿಕೆಟ್‌ಗೆ 189 ರನ್‌ಗಳ ಸವಾಲಿನ ಮೊತ್ತ ಗಳಿಸಿತು. ಆದರೆ ಇಂಗ್ಲೆಂಡ್ ಬ್ಯಾಟಿಂಗ್ ಆರಂಭಕ್ಕೂ ಮುನ್ನ ಭಾರೀ ಮಳೆ ಸುರಿದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು.

ಸಂಜು ಸ್ಯಾಮ್ಸನ್ (1) ಮತ್ತೆ ವಿಫಲರಾದರು. ಇಶಾನ್ ಕಿಶನ್ (0) ರನೌಟ್ ಆದರು. ಅಭಿಷೇಕ್ 24 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಸಹಿತ 59 ರನ್ ಗಳಿಸಿ ಮಿಂಚಿದರು. ಶ್ರೇಯಸ್ (68) ಅಭಿಷೇಕ್ ಜೊತೆಗೆ 38 ಎಸೆತಗಳಲ್ಲಿ 82 ರನ್ ಸೇರಿಸಿದರು. ಕೊನೆಯಲ್ಲಿ ಶಿವಂ ದುಬೆ (42) ಅಬ್ಬರದ ಬ್ಯಾಟಿಂಗ್ ಮೂಲಕ ತಂಡವನ್ನು 180 ಗಡಿ ದಾಟಿಸಿದರು. ಪಂದ್ಯ ರದ್ದಾದ ಕಾರಣ ಇವರ ಬ್ಯಾಟಿಂಗ್ ವ್ಯರ್ಥವಾಯಿತು.

ಉಭಯ ತಂಡಗಳಿಗೂ ಈ ಪಂದ್ಯ ಮಹತ್ವದ್ದಾಗಿದೆ. ಈ ಪಂದ್ಯದಲ್ಲಿ ಗೆಲುವು ದಾಖಲಿಸಿ ಸರಣಿಯಲ್ಲಿ ಮುನ್ನಡೆ ಕಾಯ್ದುಕೊಳ್ಳುವ ಕನಸು ಎರಡೂ ತಂಡಗಳದ್ದಾಗಿದೆ. ಈಗಾಗಲೇ ಒಂದು ಪಂದ್ಯ ಫಲಿತಾಂಶ ರಹಿತವಾಗಿದ್ದು, ಉಳಿದ ನಾಲ್ಕು ಪಂದ್ಯಗಳಲ್ಲಿ ಮೂರು ಗೆಲುವು ಸಾಧಿಸುವ ತಂಡ ಸರಣಿಯನ್ನು ತನ್ನದಾಗಿಸಿಕೊಳ್ಳಲಿದೆ. ಹೀಗಾಗಿ ಎರಡನೇ ಪಂದ್ಯದಲ್ಲಿ ಗೆಲುವು ಭಾರತ, ಇಂಗ್ಲೆಂಡ್ ತಂಡಗಳಿಗೆ ಅನಿವಾರ್ಯವಾಗಿದೆ.

ವೈಭವ್‌ಗೆ ಸಿಗುತ್ತಾ ಅವಕಾಶ?.... ಐರ್ಲೆಂಡ್ ಪ್ರವಾಸದಲ್ಲಿ ವೈಭವ್ ಸೂರ್ಯವಂಶಿ ಅವರಿಗೆ ಕನಸು ಲಭಿಸುತ್ತದೆ ಎಂದು ಎಲ್ಲರೂ ಭಾವಿಸಿದ್ದರು. ಆದರೆ ವೈಭವ್ ಸೂರ್ಯವಂಶಿ ಅವರಿಗೆ ಐರ್ಲೆಂಡ್ ಪ್ರವಾಸದಲ್ಲಿ ಅವಕಾಶ ಲಭಿಸಲಿಲ್ಲ. ಇದೀಗ ಇಂಗ್ಲೆಂಡ್ ಪ್ರವಾಸದಲ್ಲಿ ಅವಕಾಶ ಸಿಗಬಹುದು ಎಂದು ಎಲ್ಲರೂ ಲೆಕ್ಕಾಚಾರ ಹಾಕಿಕೊಳ್ಳಲಾಗಿತ್ತು. ಆದರೆ ಅಭಿಮಾನಿಗಳಿಗೆ ನಿರಾಸೆ ಕಾದಿತ್ತು. ಟೀಮ್ ಇಂಡಿಯಾದ ಮಾಜಿ ಆಟಗಾರರು ಹಾಗೂ ವಿದೇಶಿ ಆಟಗಾರರು ವೈಭವ್ ಸೂರ್ಯವಂಶಿ ಅವರನ್ನು ಆಡಿಸುವಂತೆ ಬೇಡಿಕೆ ಹೆಚ್ಚಿದೆ. ಇಂಗ್ಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಾದರೂ ಅವರಿಗೆ ಅವಕಾಶ ಲಭಿಸುತ್ತದಾ ಎಂಬ ಪ್ರಶ್ನೆಗಳು ಹೆಚ್ಚಿವೆ. ರನ್ ಕಲೆ ಹಾಕುವಲ್ಲಿ ಪರದಾಟ ನಡೆಸಿರುವ ಸಂಜು ಸ್ಯಾಮ್ಸನ್ ಬದಲಿಗೆ ಇವರಿಗೆ ಅವಕಾಶ ನೀಡುವಂತೆ ಕೂಗು ಕೇಳುತ್ತಿದೆ.

ಓಲ್ಡ್ ಟ್ರಾಫರ್ಡ್ ಪಿಚ್ ರಿಪೋರ್ಟ್: ಪಂದ್ಯದ ಪವರ್‌ಪ್ಲೇನಲ್ಲಿ ವೇಗದ ಬೌಲರ್‌ಗಳಿಗೆ ಪಿಚ್ ಸೀಮ್ ಹಾಗೂ ಸ್ವಿಂಗ್‌ಗೆ ಹೆಚ್ಚು ನೆರವು ನೀಡಲಿದೆ. ಒಮ್ಮೆ ಪಂದ್ಯ ಸಾಗುತ್ತಿದ್ದಂತೆ ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡಲಿದೆ. ಬ್ಯಾಟ್ಸ್‌ಮನ್‌ಗಳು ಪಿಚ್‌ನಲ್ಲಿ ಸ್ವಲ್ಪ ಹೊತ್ತು ಸಮಯ ಕಳೆದ ಬಳಿಕ ಪಂದ್ಯದಲ್ಲಿ ಹೆಚ್ಚಿನ ರನ್‌ಗಳನ್ನು ಸ್ಕೋರ್ ಮಾಡಬಹುದು. ಆದರೆ, ಈ ಅಂಗಣದಲ್ಲಿ ಹೊಸ ಬ್ಯಾಟ್ಸ್‌ಮನ್ ಕ್ರೀಸ್‌ಗೆ ಬಂದ ತಕ್ಷಣ ಸಿಕ್ಸರ್ ಅಥವಾ ಬೌಂಡರಿಯನ್ನು ತ್ವರಿತವಾಗಿ ಹಿಡಿಸಲು ಸಾಧ್ಯವಾಗುವುದಿಲ್ಲ.

ತಂಡಗಳು:

ಭಾರತ: ಶ್ರೇಯಸ್ ಅಯ್ಯರ್ (ನಾಯಕ), ತಿಲಕ್ ವರ್ಮಾ, ರವಿ ಬಿಷ್ಣೋಯ್, ಅಭಿಷೇಕ್ ಶರ್ಮಾ, ಸೂರ್ಯಾಂಶ್ ಶೆಡ್ಗೆ, ಪ್ರಸಿದ್ಧ್ ಕೃಷ್ಣ, ಸಂಜು ಸ್ಯಾಮ್ಸನ್, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಶಿವಂ ದುಬೆ, ಪ್ರಿನ್ಸ್ ಯಾದವ್, ವೈಭವ್ ಸೂರ್ಯವಂಶಿ.

ಇಂಗ್ಲೆಂಡ್: ಹ್ಯಾರಿ ಬ್ರೂಕ್ (ನಾಯಕ), ರೆಹಾನ್ ಅಹ್ಮದ್, ಜೋಫ್ರಾ ಆರ್ಚರ್, ಸನ್ನಿ ಬೇಕರ್, ಟಾಮ್ ಬ್ಯಾಂಟನ್, ಜಾಕೋಬ್ ಬೆಥೆಲ್, ಜೋಸ್ ಬಟ್ಲರ್, ಜೇಮ್ಸ್ ಕೋಲ್ಸ್, ಜೋರ್ಡಾನ್ ಕಾಕ್ಸ್, ಸ್ಯಾಮ್ ಕುರಾನ್, ಲಿಯಾಮ್ ಡಾಸನ್, ವಿಲ್ ಜಾಕ್ಸ್, ಸಾಕಿಬ್ ಮಹಮೂದ್, ಆದಿಲ್ ರಶೀದ್, ಫಿಲ್ ಸಾಲ್ಟ್, ಜೋಶ್ ಟಂಗ್ ಮತ್ತು ಲ್ಯೂಕ್ ವುಡ್.

ಪಂದ್ಯಾರಂಭ : ಸಂಜೆ 7.00ಕ್ಕೆ (ಭಾರತೀಯ ಕಾಲಮಾನ)

ಮೊದಲನೇ ಟಿ20 ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನಿರ್ಧಾರ ಅಚ್ಚರಿ ತಂದಿತ್ತು: ದಿನೇಶ್ ಕಾರ್ತಿಕ್



ಹೊಸದಿಲ್ಲಿ, ಜು.3 - ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವಣ ಐದು ಪಂದ್ಯಗಳ ಟಿ20ಐ ಸರಣಿಯಲ್ಲಿ ಕಾದಾಟ ನಡೆಸುತ್ತಿವೆ. ಮೊದಲನೇ ಪಂದ್ಯ ಮಳೆಗೆ ಬಲಿಯಾಗಿತ್ತು. ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಿಸಿಕೊಂಡಿದ್ದ ಭಾರತ ತಂಡ, ತನ್ನ ಪಾಲಿನ 20 ಓವರ್‌ಗಳಿಗೆ 189 ರನ್‌ಗಳನ್ನು ಕಲೆ ಹಾಕಿತ್ತು. ನಂತರ ಇಂಗ್ಲೆಂಡ್ ತಂಡದ ಚೇಸಿಂಗ್‌ಗೆ ಮಳೆ ಅವಕಾಶ ನೀಡಿಲಿಲ್ಲ. ಅಂತಿಮವಾಗಿ ಪಂದ್ಯ ಫಲಿತಾಂಶವಿಲ್ಲದೆ ಅಂತ್ಯವಾಗಿತ್ತು. ಅಂದ ಹಾಗೆ ಮೊದಲನೇ ಟಿ20 ಪಂದ್ಯದಲ್ಲಿ ಭಾರತ ತಂಡದ ನಾಯಕ ಶ್ರೇಯಸ್ ಅಯ್ಯರ್ ಎಸಗಿದ್ದ ತಪ್ಪನ್ನು ಮಾಜಿ ವಿಕೆಟ್ ಕೀಪರ್ ದಿನೇಶ್ ಕಾರ್ತಿಕ್ ರಿವೀಲ್ ಮಾಡಿದ್ದಾರೆ.

ಶ್ರೇಯಸ್ ಅಯ್ಯರ್ ನೇತೃತ್ವದ ಭಾರತ ತಂಡ ಎರಡು ಪಂದ್ಯಗಳ ಟಿ20 ಸರಣಿಯಲ್ಲಿ ಐರ್ಲೆಂಡ್ ವಿರುದ್ಧ ವೈಟ್‌ವಾಶ್ ಆಘಾತ ಅನುಭವಿಸಿತ್ತು. ಎರಡೂ ಪಂದ್ಯಗಳಲ್ಲಿ ಗುರಿ ಬೆನ್ನಟ್ಟುವಲ್ಲಿ ವಿಫಲವಾದ ಭಾರತ, ಮೊದಲ ಪಂದ್ಯವನ್ನು 34 ರನ್‌ಗಳಿಂದ ಹಾಗೂ ಎರಡನೇ ಪಂದ್ಯವನ್ನು ಕೇವಲ ಒಂದು ರನ್‌ನಿಂದ ಸೋತಿತ್ತು. ಈ ಸರಣಿಯಲ್ಲಿನ ಫಲಿತಾಂಶದ ಪರಿಣಾಮ ಶ್ರೇಯಸ್ ಅಯ್ಯರ್ ಇಂಗ್ಲೆಂಡ್ ಎದುರು ಮೊದಲನೇ ಟಿ20ಐ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಿಸಿಕೊಳ್ಳಲು ಕಾರಣ ಎಂದು ದಿನೇಶ್ ಕಾರ್ತಿಕ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕ್ರಿಕ್‌ಬಝ್ ಜೊತೆ ಮಾತನಾಡಿದ ದಿನೇಶ್ ಕಾರ್ತಿಕ್, ಭಾರತ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದು ಉತ್ತಮ ನಿರ್ಧಾರ. ಹವಾಮಾನ ಅಡ್ಡಿಯಾಗುವ ಸಾಧ್ಯತೆ ಇದ್ದರೂ, ಸಾಮಾನ್ಯವಾಗಿ ತಂಡಗಳು ಗುರಿ ಬೆನ್ನಟ್ಟಲು ಹೆಚ್ಚು ಒಲವು ತೋರುತ್ತವೆ ಎಂದು ಕಾರ್ತಿಕ್ ಕ್ರಿಕ್‌ಬಜ್‌ಗೆ ತಿಳಿಸಿದ್ದಾರೆ.ಇಲ್ಲಿ ಮಳೆಯ ಭೀತಿ ನಿರಂತರವಾಗಿ ಕಾಡುತ್ತಿತ್ತು. ಆದರೆ ಐರ್ಲೆಂಡ್ ವಿರುದ್ಧದ ಸರಣಿಯ ಸೋಲಿನ ಪರಿಣಾಮ ತಂಡದ ಮನಸ್ಥಿತಿಯ ಮೇಲೆ ಇನ್ನೂ ಇತ್ತು ಎಂದು ನಾನು ಭಾವಿಸುತ್ತೇನೆ. ಅದಕ್ಕಾಗಿಯೇ ಭಾರತ 'ಈ ಬಾರಿ ಗುರಿ ಬೆನ್ನಟ್ಟುವುದಕ್ಕಿಂತ ಮೊದಲು ಬ್ಯಾಟಿಂಗ್ ಮಾಡೋಣ' ಎಂಬ ನಿರ್ಧಾರ ಕೈಗೊಂಡಿರಬಹುದು ಎಂದು ಅವರು ಹೇಳಿದ್ದಾರೆ.

ಇಂಗ್ಲೆಂಡ್ ವಿರುದ್ಧದ ಮೊದಲ ಟಿ20ಐ ಪಂದ್ಯದ ಟಾಸ್ ಗೆದ್ದ ಬಳಿಕ ಮಾತನಾಡಿದ ಶ್ರೇಯಸ್ ಅಯ್ಯರ್, ಐರ್ಲೆಂಡ್ ಸರಣಿಯ ಬಗ್ಗೆ ಮಾತನಾಡಿದರು. ಆ ಸರಣಿಯನ್ನು ಹಿಂದಿನ ಅಧ್ಯಾಯವೆಂದು ಪರಿಗಣಿಸಿ ಇದೀಗ ಇಂಗ್ಲೆಂಡ್ ಸರಣಿಯ ಮೇಲೆ ಹೆಚ್ಚಿನ ಗಮನ ನೀಡಲಿದ್ದೇನೆಂದು ತಿಳಿಸಿದ್ದಾರೆ. ಐರ್ಲೆಂಡ್ ಸರಣಿ ಈಗ ಇತಿಹಾಸ. ಇದು ಹೊಸ ಸರಣಿ. ಐದು ಪಂದ್ಯಗಳಿವೆ ಮತ್ತು ನಮ್ಮ ಮುಂದೆ ಸಾಕಷ್ಟು ಅವಕಾಶಗಳಿವೆ. ಇದು ನಮ್ಮ ಪಾಲಿಗೆ ಅತ್ಯುತ್ತಮ ಅವಕಾಶ. ನಾಯಕನಾಗಿ ಇದು ನನ್ನ ಮೊದಲ... ಇಲ್ಲ, ಎರಡನೇ ಸರಣಿ. ಹೀಗಾಗಿ ಸಾಕಷ್ಟು ಉತ್ಸಾಹದಲ್ಲಿದ್ದೇನೆ. ನಾವು ಬಯಸಿದ್ದನ್ನೇ ಪಡೆದಿದ್ದೇವೆ. ನಿನ್ನೆ ಇಲ್ಲಿ ಉತ್ತಮ ಅಭ್ಯಾಸ ನಡೆಸಿದ್ದೇವೆ ಮತ್ತು ಇಲ್ಲಿನ ಪರಿಸ್ಥಿತಿಗೂ ಹೊಂದಿಕೊಂಡಿದ್ದೇವೆ. ರೋಚಕ ಸರಣಿಗಾಗಿ ಎದುರು ನೋಡುತ್ತಿದ್ದೇವೆ ಎಂದು ಅಯ್ಯರ್‌ಹೇಳಿದ್ದರು.

ಐರ್ಲೆಂಡ್ ಸರಣಿಯಿಂದ ನಾವು ಸಾಕಷ್ಟು ಪಾಠಗಳನ್ನು ಕಲಿತಿದ್ದೇವೆ. ಇಲ್ಲಿ ಬಂದ ಬಳಿಕ ಇಂಗ್ಲೆಂಡ್ ಯಾವ ರೀತಿಯ ಕ್ರಿಕೆಟ್ ಆಡುತ್ತದೆ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಅವರ ಬಲ ಮತ್ತು ದುರ್ಬಲತೆಗಳ ಬಗ್ಗೆ ಸ್ಪಷ್ಟ ಅರಿವು ಇದೆ. ಅದಕ್ಕೆ ತಕ್ಕಂತೆ ಉತ್ತಮ ಪ್ರದರ್ಶನ ನೀಡುವ ವಿಶ್ವಾಸ ನಮ್ಮಲ್ಲಿದೆ ಎಂದು ಅವರು ಹೇಳಿದರು.

ಟಿ20 ವಿಶ್ವಕಪ್: ಆಫ್ರಿಕಾ ತಂಡಕ್ಕೆ ಮತ್ತೆ ನಿರಾಸೆ; ಫೈನಲ್‌ಗೇರಿದ ಇಂಗ್ಲೆಂಡ್



ಲಂಡನ್, ಜು.3 - ಜುಲೈ 2 ರಂದು ನಡೆದ 2026 ರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಎರಡನೇ ಸೆಮಿಫೈನಲ್‌ನಲ್ಲಿ, ಆತಿಥೇಯ ಇಂಗ್ಲೆಂಡ್, ದಕ್ಷಿಣ ಆಫ್ರಿಕಾವನ್ನು 40 ರನ್‌ಗಳಿಂದ ಸೋಲಿಸುವ ಮೂಲಕ ಫೈನಲ್‌ಗೆ ಟಿಕೆಟ್ ಪಡೆದುಕೊಂಡಿದೆ.

ಲಂಡನ್‌ನ ದಿ ಓವಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 5 ವಿಕೆಟ್‌ಗಳನ್ನು ಕಳೆದುಕೊಂಡು 169 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ 129 ರನ್ ಕಲೆಹಾಕಲಷ್ಟೇ ಶಕ್ತವಾಯಿತು. ಹೀಗಾಗಿ ಆಫ್ರಿಕಾ ತಂಡಕ್ಕೆ ಮತ್ತೊಂದು ಫೈನಲ್ ಆಡುವ ಅವಕಾಶವೂ ಕೈತಪ್ಪಿತು. ಇತ್ತ ಅಫ್ರಿಕಾ ತಂಡವನ್ನು ಏಕಪಕ್ಷೀಯವಾಗಿ ಮಣಿಸಿ ಫೈನಲ್‌ಗೇರಿರುವ ಇಂಗ್ಲೆಂಡ್ ತಂಡ ಭಾನುವಾರ ಲಾರ್ಡ್ಸ್‌ನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಆರು ಬಾರಿ ಚಾಂಪಿಯನ್ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಇಂಗ್ಲೆಂಡ್‌ಗೆ ಕಳಪೆ ಆರಂಭ: ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡಕ್ಕೆ ಕಳಪೆ ಆರಂಭ ಸಿಕ್ಕಿತು. ದಕ್ಷಿಣ ಆಫ್ರಿಕಾದ ವೇಗಿಗಳಾದ ಶಬ್ನಿಮ್ ಇಸ್ಮಾಯಿಲ್ ಮತ್ತು ಮರಿಜಾನ್ನೆ ಕಪ್ಪ್ ತಮ್ಮ ಮಾರಕ ಬೌಲಿಂಗ್ ಮೂಲಕ ಇಂಗ್ಲೆಂಡ್ ತಂಡದ ಅಗ್ರ ಕ್ರಮಾಂಕವನ್ನು ಧ್ವಂಸಗೊಳಿಸಿದರು. ಆರಂಭಿಕ ಆಟಗಾರ್ತಿ ಆಮಿ ಜೋನ್ಸ್ 2 ರನ್‌ಗಳಿಗೆ ಔಟಾದರೆ, ಅದ್ಭುತ ಫಾರ್ಮ್‌ನಲ್ಲಿದ್ದ ಬ್ಯಾಟ್ಸ್‌ಮನ್ ಡ್ಯಾನಿ ವ್ಯಾಟ್-ಹಾಡ್ಜ್ ಕೂಡ ಕೇವಲ 12 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಇದರಿಂದಾಗಿ ಇಂಗ್ಲೆಂಡ್ 3.2 ಓವರ್‌ಗಳಲ್ಲಿ 23 ರನ್‌ಗಳನ್ನು ಕಲೆಹಾಕಿ 3 ವಿಕೆಟ್‌ಗಳನ್ನು ಕಳೆದುಕೊಂಡಿತು.

133 ರನ್‌ಗಳ ಪಾಲುದಾರಿಕೆ: ಆದರೆ ಈ ಆರಂಭಿಕ ಆಘಾತದಿಂದ ತಂಡವನ್ನು ಹೊರತಂದ ನಾಯಕಿ ನ್ಯಾಟ್ ಸಿವರ್‌ಬ್ರಂಟ್ ಮತ್ತು ಅನುಭವಿ ಹೀದರ್‌ನೈಟ್ ನಿರ್ಣಾಯಕ ಸಮಯದಲ್ಲಿ ಉತ್ತಮ ಜೊತೆಯಾಟ ಕಟ್ಟಿದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 133 ರನ್‌ಗಳ ಪಾಲುದಾರಿಕೆಯನ್ನು ನಿರ್ಮಿಸಿದರು, ಇದು ಪಂದ್ಯಾವಳಿಯ ನಾಕೌಟ್ ಇತಿಹಾಸದಲ್ಲಿ ಅತ್ಯಧಿಕ ಜೊತೆಯಾಟವೆಂಬ ದಾಖಲೆಯನ್ನೂ ಬರೆಯಿತು. ನ್ಯಾಟ್ ಸಿವರ್‌ಬ್ರಂಟ್ ಕೇವಲ 47 ಎಸೆತಗಳಲ್ಲಿ 11 ಬೌಂಡರಿ ಮತ್ತು 1 ಸಿಕ್ಸರ್‌ಸೇರಿದಂತೆ 75 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದರೆ, ಹೀದರ್‌ನೈಟ್ 47 ಎಸೆತಗಳಲ್ಲಿ 6 ಬೌಂಡರಿಗಳು ಮತ್ತು 1 ಸಿಕ್ಸರ್‌ಸೇರಿದಂತೆ 58 ರನ್ ಬಾರಿಸಿದರು. ಇವರಿಬ್ಬರ ಇನ್ನಿಂಗ್ಸ್‌ನಿಂದಾಗಿ ಇಂಗ್ಲೆಂಡ್ 20 ಓವರ್‌ಗಳಲ್ಲಿ ಒಟ್ಟು 169 ರನ್ ಕಲೆಹಾಕಿತು.

ದಕ್ಷಿಣ ಆಫ್ರಿಕಾದ ಬ್ಯಾಟಿಂಗ್ ವೈಫಲ್ಯ: 170 ರನ್‌ಗಳ ಗುರಿಯನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ಉತ್ತಮ ಆರಂಭ ಪಡೆಯಿತು. ನಾಯಕಿ ಲಾರಾ ವೋಲ್ವಾರ್ಡ್ ಮತ್ತು ಟಾಜ್ಮಿನ್ ಬ್ರಿಟ್ಸ್ ಮೊದಲ ವಿಕೆಟ್‌ಗೆ 43 ರನ್‌ಗಳನ್ನು ಸೇರಿಸಿದರು. ಆದಾಗ್ಯೂ, ಸೋಫಿ ಎಕ್ಲೆಸ್ಟೋನ್, ವೋಲ್ವಾರ್ಡ್ ನೀಡಿದ ಅದ್ಭುತ ಕ್ಯಾಚ್ ಹಿಡಿಯುವ ಮೂಲಕ ಈ ಪಾಲುದಾರಿಕೆಯನ್ನು ಮುರಿದರು. ಇದರ ನಂತರ, ಇಂಗ್ಲೆಂಡ್‌ನ ಬೌಲರ್‌ಗಳು ಪಂದ್ಯವನ್ನು ಸಂಪೂರ್ಣವಾಗಿ ನಿಯಂತ್ರಣಕ್ಕೆ ತೆಗೆದುಕೊಂಡರು. ಆದಾಗ್ಯೂ ಆರಂಭಿಕ ಬ್ಯಾಟರ್‌ಟಾಜ್ಮಿನ್ ಬ್ರಿಟ್ಸ್ 45 ಎಸೆತಗಳಲ್ಲಿ 51 ರನ್‌ಗಳ ಹೋರಾಟದ ಇನ್ನಿಂಗ್ಸ್ ಆಡಿದರು, ಆದರೆ ಇನ್ನೊಂದು ತುದಿಯಿಂದ ಅವರಿಗೆ ಬೆಂಬಲ ಸಿಗಲಿಲ್ಲ. ಪರಿಣಾಮವಾಗಿ, ಆಫ್ರಿಕಾ ತಂಡ 20 ಓವರ್‌ಗಳಲ್ಲಿ 8 ವಿಕೆಟ್‌ಗಳ ನಷ್ಟಕ್ಕೆ 129 ರನ್‌ಗಳನ್ನು ಮಾತ್ರ ಗಳಿಸಲಷ್ಟೇ ಶಕ್ತವಾಗಿ ಪಂದ್ಯವನ್ನು 40 ರನ್‌ಗಳಿಂದ ಸೋತಿತು.

ಸೂರ್ಯವಂಶಿಗೆ ಅವಕಾಶ ಸಿಗದಿರುವುದು ದುರದೃಷ್ಟಕರ: ಟೀಂ ಇಂಡಿಯಾ ನಿಲುವಿಗೆ ಎಬಿ ಡಿ ವಿಲಿಯರ್ಸ್ ಕಿಡಿ



ಹೊಸದಿಲ್ಲಿ, ಜು.3 - ಭಾರತೀಯ ಕ್ರಿಕೆಟ್ ತಂಡಕ್ಕೆ 15 ವರ್ಷದ ಬ್ಯಾಟಿಂಗ್ ಸೆನ್ಸೇಷನ್ ವೈಭವ್ ಸೂರ್ಯವಂಶಿ ಆಯ್ಕೆಯಾಗಿದ್ದರೂ, ಐರ್ಲೆಂಡ್ ಮತ್ತು ಸದ್ಯ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಟಿ20ಐ ಸರಣಿಗೆ ತಂಡದ ಪ್ಲೇಯಿಂಗ್ ಇಲೆವೆನ್‌ನಲ್ಲಿ ಸ್ಥಾನ ಪಡೆದಿಲ್ಲ. ಇದೀಗ ಕ್ರಿಕೆಟ್ ಜಗತ್ತಿನಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ. 2026ರ ಟಿ20 ವಿಶ್ವಕಪ್ ಹೀರೋ ಸಂಜು ಸ್ಯಾಮ್ಸನ್ ಸತತ ಮೂರು ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲರಾಗಿದ್ದಾರೆ. ಇದೀಗ ರವಿಶಾಸ್ತ್ರಿ, ಮೈಕೆಲ್ ವಾಘನ್ ಮತ್ತು ಅಲಸ್ಟೈರ್‌ಕುಕ್ ಅವರಂತಹ ಆಟಗಾರರು ವೈಭವ್ ಸೂರ್ಯವಂಶಿ ಐರ್ಲೆಂಡ್ ವಿರುದ್ಧದ ಎರಡು ಟಿ20ಐ ಸರಣಿಯಲ್ಲಿಯೇ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಚೊಚ್ಚಲ ಪ್ರವೇಶ ಮಾಡಬೇಕಿತ್ತು ಎಂದು ಹೇಳಿದ್ದಾರೆ. ಚೇತೇಶ್ವರ ಪೂಜಾರ ಮತ್ತು ಸಬಾ ಕರೀಮ್ ಅವರಂತಹವರು ಈಗಲೇ ಸೂರ್ಯವಂಶಿ ಸೇರ್ಪಡೆ ಬೇಡ ಎಂದಿದ್ದಾರೆ.

ವೈಭವ್ ಸೂರ್ಯವಂಶಿ ಅವರು ಹಂತ ಹಂತವಾಗಿ ಪ್ರಗತಿ ಸಾಧಿಸಬೇಕೆಂಬುದು ಭಾರತದ ಆಡಳಿತ ಮಂಡಳಿಯ ಅಭಿಪ್ರಾಯ ಾಗಿದೆ. ಅವರು (ಸೂರ್ಯವಂಶಿ) ಅಂತಾರಾಷ್ಟ್ರೀಯ ಕ್ರಿಕೆಟ್ ಆಡಲು ಸಂಪೂರ್ಣ ಸಿದ್ಧರಾಗಿದ್ದಾರೆ; ಅದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ, ಮೂರು ತಿಂಗಳ ಹಿಂದೆ ನಾವು ವಿಶ್ವಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಸಂಜು ಸ್ಯಾಮ್ಸನ್ ಎಂದು ಭಾರತದ ಸಹಾಯಕ ಕೋಚ್ ರಯಾನ್ ಟೆನ್ ಡೋಸ್ಚೇಟ್ ಹೇಳಿದ್ದಾರೆ.

ವೈಭವ್ ಸೂರ್ಯವಂಶಿ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದರು; ಆಟಗಾರರಿಗೆ ಆತ್ಮವಿಶ್ವಾಸ ತುಂಬುವುದು ಹಾಗೂ ತಂಡದಲ್ಲಿ ಅವರಿಗೆ ದೀರ್ಘಕಾಲದವರೆಗೆ ಅವಕಾಶ ನೀಡಲು ನಾವು ಬಯಸುತ್ತೇವೆ ಎಂಬ ಸಂದೇಶವನ್ನು ರವಾನಿಸುವುದು ಮುಖ್ಯ. ವೈಭವ್ ಆಡುವುದನ್ನು ನೋಡಲು ನಾವೆಲ್ಲರೂ ಉತ್ಸುಕರಾಗಿದ್ದೇವೆ, ಆದರೆ ಅವರು ಕೂಡ ಪ್ರಕ್ರಿಯೆಯನ್ನು ಪೂರೈಸಬೇಕಾಗುತ್ತದೆ. ಅವರ ಸಾಮರ್ಥ್ಯದ ಬಗ್ಗೆ ಖಂಡಿತವಾಗಿಯೂ ಯಾವುದೇ ಸಂಶಯವಿಲ್ಲ ಎಂದಿದ್ದರು.

ದಕ್ಷಿಣ ಆಫ್ರಿಕಾದ ದಂತಕತೆ ಎಬಿ ಡಿವಿಲಿಯರ್ಸ್ ರಯಾನ್ ಟೆನ್ ಡೋಸ್ಚೇಟ್ ಅವರ ಹೇಳಿಕೆಗಿಂತ ಭಿನ್ನರಾಗಿದ್ದಾರೆ. ಅವರನ್ನು ಯಾವಾಗ ಬೆಂಚ್‌ನಿಂದ ಬಿಡುಗಡೆ ಮಾಡಲಾಗುತ್ತದೆ? ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅನುಭವ ಪಡೆಯಲು ಐರ್ಲೆಂಡ್ ಸರಣಿ ಅವರಿಗೆ ಸೂಕ್ತ ಅವಕಾಶವಾಗಿತ್ತು. ಆದರೆ, ಅವರಿಗೆ ಅವಕಾಶ ಸಿಗದಿರುವುದು ದುರದೃಷ್ಟಕರ. ಸೂರ್ಯವಂಶಿ ಇತರ ಆಟಗಾರರಂತೆ ಈ ಪ್ರಕ್ರಿಯೆಯ ಮೂಲಕ ಹೋಗಬೇಕು ಎಂದು ರಯಾನ್ ಟೆನ್ ಡೋಸ್ಚೇಟ್ ಹೇಳುವುದು ನನಗೆ ಸರಿ ಎನಿಸಲಿಲ್ಲ. ಅತ್ಯುತ್ತಮ ಐಪಿಎಲ್ ಆವೃತ್ತಿ ನಂತರ, ಸ್ವಲ್ಪ ಅನುಭವವನ್ನು ಪಡೆಯಲು ಅವರನ್ನು ಆಡಿಸುವ ಸಮಯ ಬಂದಿದೆ. ವಿಶೇಷವಾಗಿ ಐರ್ಲೆಂಡ್‌ನಂತಹ ಕೆಳ ಶ್ರೇಯಾಂಕದ ತಂಡದ ವಿರುದ್ಧ ಆಡಿಸಬೇಕಿತ್ತು ಎಂದು ಎಬಿ ಡಿವಿಲಿಯರ್ಸ್ ತಮ್ಮ ಯೂಟ್ಯೂಬ್ ಚಾನೆಲ್‌ನಲ್ಲಿ ಹೇಳಿದ್ದಾರೆ. ಐರ್ಲೆಂಡ್ ವಿರುದ್ಧದ ಸರಣಿಯನ್ನು 2-0 ಅಂತರದಿಂದ ಸೋತ ನಂತರ, ಭಾರತ ತಂಡ ಇಂಗ್ಲೆಂಡ್ ಪ್ರವಾಸದಲ್ಲಿ ಇನ್ನೂ ಗೆಲುವಿನ ರುಚಿ ನೋಡಿಲ್ಲ. ಅವರ ಮೊದಲ ಟಿ20ಐ ಮಳೆಯಿಂದ ರದ್ದಾಗಿದೆ.

'ಟೀಂ ಇಂಡಿಯಾಗೆ ಸ್ವಲ್ಪ ಕೆಲಸವಿದೆ. ಅವರು ಮತ್ತೆ ಒಗ್ಗೂಡಬೇಕು, ಪುನರ್ರಚಿಸಬೇಕು ಮತ್ತು ಯುಕೆಯಲ್ಲಿ ಆಡಲು ಒಂದು ವಿಧಾನವನ್ನು ಕಂಡುಹಿಡಿಯಬೇಕು. ಐಪಿಎಲ್‌ನಂತೆ ಹೈ ಸ್ಕೋರ್‌ಗಳು ಇಲ್ಲದ ಪರಿಸ್ಥಿತಿಗಳಲ್ಲಿ ಇದು ಸುಲಭವಲ್ಲ. ನೀವು ಅಲ್ಲಿ 250 ಮತ್ತು 260 ರನ್‌ಗಳನ್ನು ತಲುಪಲು ಸಾಧ್ಯವಿಲ್ಲ. ಅಲ್ಲಿ ಇದು ಹೆಚ್ಚು ಕಾರ್ಯತಂತ್ರ ಮತ್ತು ಯುದ್ಧತಂತ್ರದದ್ದಾಗಿದೆ. ಅಲ್ಲಿ ಕೆಲವೊಮ್ಮೆ 140 ಅಥವಾ 160 ರನ್‌ಗಳು ಸಾಕು' ಎಂದು ಡಿವಿಲಿಯರ್ಸ್ ಹೇಳಿದರು.

ಪತ್ನಿ ವಿಜೇತಾ ಜೊತೆ ಅಂಜನಾದ್ರಿಗೆ ಭೇಟಿ ನೀಡಿ ದೇವರ ದರ್ಶನ ಪಡೆದ ದ್ರಾವಿಡ್



ಗಂಗಾವತಿ, ಜು. 3 - ರಾಜ್ಯದ ಪ್ರಮುಖ ಧಾರ್ಮಿಕ ತಾಣಗಳಲ್ಲೊಂದಾಗಿರುವ ತಾಲ್ಲೂಕಿನ ಚಿಕ್ಕರಾಂಪೂರದ ಬಳಿ ಇರುವ ಅಂಜನಾದ್ರಿ ದೇಗುಲಕ್ಕೆ ಶುಕ್ರವಾರ ಟೀಮ್ ಇಂಡಿಯಾ ಮಾಜಿ ತರಬೇತಿದಾರ ರಾಹುಲ್ ದ್ರಾವಿಡ್ ಭೇಟಿ ನೀಡಿ ಆಂಜನೇಯನ ದರ್ಶನ ಪಡೆದುಕೊಂಡರು.

ಗುರುವಾರ ಸಂಜೆಯೇ ಆಗಮಿಸಿದ್ದ ರಾಹುಲ್ ದ್ರಾವಿಡ್, ಹೊಸಪೇಟೆ ತಾಲ್ಲೂಕಿನ ಕಮಲಾಪುರದ ಬಳಿ ಇರುವ ಆರೇಂಜ್ ಕೌಂಟಿಯಲ್ಲಿ ತಂಗಿದ್ದರು. ಶುಕ್ರವಾರ ಬೆಳಗ್ಗೆ ಪತ್ನಿ ವಿಜೇತಾ ಪೆಂಡಾಲ್ಕರ್‌ಜೊತೆ ದೇಗುಲಕ್ಕೆ ಆಗಮಿಸಿ ದೇವರ ದರ್ಶನ ಪಡೆದುಕೊಂಡರು. ಮೊದಲಿಗೆ ಹನುಮಪ್ಪನ ಪಾದಗಟ್ಟೆಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ದ್ರಾವಿಡ್, ಬಳಿಕ ಪತ್ನಿಯೊಂದಿಗೆ 575 ಮೆಟ್ಟಿಲುಗಳನ್ನು ಹತ್ತಿದರು. ದಾರಿ ಮಧ್ಯೆ ದ್ರಾವಿಡ್ ರೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಜನ ಮುಗಿ ಬಿದ್ದರು.

ವಿಶೇಷ ಸಂಕಲ್ಪ: ದೇವಸ್ಥಾನದಲ್ಲಿ ಗರ್ಭಗುಡಿವರೆಗೂ ಹೋಗಲು ದಂಪತಿಗೆ ಅವಕಾಶ ನೀಡಿದ ಆಡಳಿತ ಮಂಡಳಿ, ಬಳಿಕ ಅಲ್ಲಿನ ಅರ್ಚಕ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ದ್ರಾವಿಡ್ ಹಾಗೂ ವಿಜೇತ ಅವರೊಂದಿಗೆ ಅರ್ಚಕರು ಸಂಕಲ್ಪ ಮಾಡಿಸಿದರು. ಬಳಿಕ ದೇಗುಲದ ಆಡಳಿತ ಮಂಡಳಿಯಿಂದ ದಂಪತಿಗೆ ಶಾಲು ಹೊದಿಸಿ ಅಂಜನಾದ್ರಿ ಹನುಮಪ್ಪನ ಭಾವಚಿತ್ರ ನೀಡಿ ಸನ್ಮಾನಿಸಲಾಯಿತು. ಬೆಟ್ಟದ ಮೇಲಿಂದ ಹಂಪೆ, ತುಂಗಭದ್ರಾ ನದಿಯ ವಿಹಂಗಮ ನೋಟವನ್ನು ದ್ರಾವಿಡ್ ಕಣ್ತುಂಬಿಕೊಂಡರು.

ಅನಧಿಕೃತ ಟೆಸ್ಟ್: ಸತತ ಎರಡನೇ ಶತಕ ಬಾರಿಸಿದ ಸಾಯಿ ಸುದರ್ಶನ್



ಕೊಲಂಬೊ, ಜು. 3 - ಭಾರತ ಎ ಹಾಗೂ ಶ್ರೀಲಂಕಾ ಎ ತಂಡಗಳ ನಡುವೆ ನಡೆಯುತ್ತಿರುವ ಎರಡು ಪಂದ್ಯಗಳ ಅನಧಿಕೃತ ಟೆಸ್ಟ್ ಸರಣಿಯ ಎರಡನೇ ಪಂದ್ಯದಲ್ಲೂ ಭಾರತ ಎ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಸಾಯಿ ಸುದರ್ಶನ್ ಅಮೋಘ ಶತಕ ಸಿಡಿಸಿ ಮಿಂಚಿದ್ದಾರೆ. ಇದಕ್ಕೂ ಮುಂಚೆ ನಡೆದಿದ್ದ ಮೊದಲ ಅನಧಿಕೃತ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲೂ ಸುದರ್ಶನ್ ಶತಕದ ಇನ್ನಿಂಗ್ಸ್ ಆಡಿದ್ದರು. ಇದೀಗ ಗಾಲೆ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಎರಡನೇ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಸಾಯಿ ಸುದರ್ಶನ್ 166 ಎಸೆತಗಳಲ್ಲಿ ಶತಕ ಪೂರೈಸಿದರು. ಇದು ಸಾಯಿ ಸುದರ್ಶನ್ ಅವರ ಸತತ ಎರಡನೇ ಶತಕವಾಗಿದೆ. ಮೊದಲ ಅನಧಿಕೃತ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿಯೂ ಸಾಯಿ 132 ರನ್‌ಗಳ ಇನ್ನಿಂಗ್ಸ್ ಆಡಿದ್ದರು.

ಸಾಯಿ ಸುದರ್ಶನ್‌ಗೆ ಸತತ 2ನೇ ಶತಕ: ಸಾಯಿ ಸುದರ್ಶನ್ ಐಪಿಎಲ್‌ನಿಂದಲೂ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಅವರು ತಮ್ಮ ಕೊನೆಯ 11 ಪಂದ್ಯಗಳ ಒಂಬತ್ತು ಪಂದ್ಯಗಳಲ್ಲಿ ಎರಡು ಶತಕಗಳು ಸೇರಿದಂತೆ ಐವತ್ತಕ್ಕೂ ಹೆಚ್ಚು ಸ್ಕೋರ್‌ಗಳನ್ನು ದಾಖಲಿಸಿದ್ದಾರೆ. ಸಾಯಿ ಸುದರ್ಶನ್ ಅವರನ್ನು ಸಾಮಾನ್ಯವಾಗಿ ಉತ್ತಮ ವೈಟ್-ಬಾಲ್ ಕ್ರಿಕೆಟಿಗ ಎಂದು ಪರಿಗಣಿಸಲಾಗುತ್ತದೆ, ಆದರೆ ಅವರು ಈಗ ರೆಡ್-ಬಾಲ್ ಕ್ರಿಕೆಟ್‌ನಲ್ಲೂ ತಮ್ಮ ಪರಾಕ್ರಮವನ್ನು ತೋರಿಸುತ್ತಿದ್ದಾರೆ. ಇತ್ತೀಚಿನ ಅಫ್ಘಾನಿಸ್ತಾನ ವಿರುದ್ಧದ ಟೆಸ್ಟ್ ಪಂದ್ಯದಲ್ಲಿಯೂ ಸಾಯಿ ಸುದರ್ಶನ್ 81 ರನ್‌ಗಳ ಇನ್ನಿಂಗ್ಸ್ ಆಡಿದ್ದರು. ಈಗ, ಅವರು ಶ್ರೀಲಂಕಾ ಪ್ರವಾಸದಲ್ಲಿ ಸತತ ಎರಡು ಶತಕಗಳನ್ನು ಸಿಡಿಸಿದ್ದಾರೆ.

10ನೇ ಶತಕ ಬಾರಿಸಿದ ಸಾಯಿ: ಸಾಯಿ ಸುದರ್ಶನ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಒಟ್ಟು 10 ಶತಕಗಳನ್ನು ಸಿಡಿಸಿದ್ದು, ಸುಮಾರು 3,000 ಪ್ರಥಮ ದರ್ಜೆ ರನ್‌ಗಳನ್ನು ಕಲೆಹಾಕಿದ್ದಾರೆ. ಆದಾಗ್ಯೂ, ಅವರು ಇಲ್ಲಿಯವರೆಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ವಿಶೇಷವಾಗಿ ಉತ್ತಮ ಪ್ರದರ್ಶನ ನೀಡಿಲ್ಲ. ಆಡಿರುವ ಏಳು ಪಂದ್ಯಗಳಲ್ಲಿ 31.91 ರ ಸರಾಸರಿಯಲ್ಲಿ 383 ರನ್‌ಗಳನ್ನು ಗಳಿಸಿದ್ದಾರೆ. ಆದಾಗ್ಯೂ ಆಯ್ಕೆ ಮಂಡಳಿ ಅವರ ಮೇಲೆ ಭರವಸೆಗಳನ್ನು ಇಟ್ಟಿದ್ದು, ಅವರಿಗೆ ಭಾರತ ಟೆಸ್ಟ್ ತಂಡದಲ್ಲಿ ಖಾಯಂ ಸ್ಥಾನ ಸಿಗುವ ಕಾಲ ದೂರವಿಲ್ಲ ಎನ್ನಬಹುದು.

366 ರನ್ ಕಲೆಹಾಕಿದ ಲಂಕಾ: ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಎ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 366 ರನ್ ಕಲೆಹಾಕಿತು. ತಂಡದ ಪರ ನಾಯಕ ಅರಿಚಿಗೆ ಶತಕದ ಇನ್ನಿಂಗ್ಸ್ ಆಡಿದರು. ಇತ್ತ ಟೀಂ ಇಂಡಿಯಾ ಪರ ಗುರ್ನೂರ್‌ಬ್ರಾರ್77 ರನ್‌ಗಳಿಗೆ 4 ವಿಕೆಟ್‌ಗಳನ್ನು ಪಡೆದರೆ, ಆಫ್-ಸ್ಪಿನ್ನರ್‌ಸರಾಂಶ್ ಜೈನ್ 92 ರನ್‌ಗಳಿಗೆ 4 ವಿಕೆಟ್‌ಗಳನ್ನು ಪಡೆದರು.

ಪೋರ್ಚುಗಲ್ - ಕ್ರೊಯೇಷ್ಯಾ ಪಂದ್ಯದ ವೇಳೆ ಮೈದಾನಕ್ಕೆ ಬಾಟಲ್‌ಗಳನ್ನು ಎಸೆದ ಕ್ರೊಯೇಷ್ಯಾ ಫ್ಯಾನ್ಸ್



ಹೊಸದಿಲ್ಲಿ, ಜು.3 - ಫಿಫಾ ವಿಶ್ವಕಪ್ ಟೂರ್ನಿಯ ಪೋರ್ಚುಗಲ್ ಮತ್ತು ಕ್ರೊಯೇಷ್ಯಾ ನಡುವಿನ 32ನೇ ಸುತ್ತಿನ ಪಂದ್ಯವು ಫುಟ್‌ಬಾಲ್ ಇತಿಹಾಸದಲ್ಲಿ ಅತಿದೊಡ್ಡ ವಿವಾದಗಳಲ್ಲಿ ಒಂದಾಗಿದೆ. ಟೊರೊಂಟೊದಲ್ಲಿ ನಡೆದ ಪಂದ್ಯದ ಕೊನೆಯ ಸೆಕೆಂಡುಗಳಲ್ಲಿ ಮ್ಯಾಂಚೆಸ್ಟರ್ ಸಿಟಿಯ ಸ್ಟಾರ್ ಡಿಫೆಂಡರ್‌ಜೊಸ್ಕೊ ಗ್ವಾರ್ಡಿಯೋಲ್ ಗಳಿಸಿದ ಗೋಲು ಕ್ರೊಯೇಷಿಯಾ ಪರ 2-2 ಅಂತರದ ಸಮಬಲಕ್ಕೆ ಕಾರಣವಾಗಿತ್ತು. ಆ ಮೂಲಕ ಪಂದ್ಯವು ಹೆಚ್ಚುವರಿ ಸಮಯದತ್ತ ಸಾಗುತ್ತಿರುವಂತೆ ತೋರುತ್ತಿತ್ತು. ಆದರೆ ವಿಎಆರ್(ವಿಡಿಯೊ ಅಸಿಸ್ಟಂಟ್ ರೆಫರಿ) ಮಧ್ಯಪ್ರವೇಶಿಸಿದ ಬಳಿಕ ಭಾರಿ ಕೋಲಾಹಲಕ್ಕೆ ಕಾರಣವಾಯಿತು. ಕೆಲವು ಅಭಿಮಾನಿಗಳು ತಮ್ಮ ತಂಡವನ್ನು ಮೋಸ ಮಾಡಲಾಗಿದೆ ಎಂದು ಆರೋಪ ವ್ಯಕ್ತಪಡಿಸಿದ್ದಾರೆ.

ರಿವ್ಯೂವ್ ನಂತರ ಮುಖ್ಯ ರೆಫರಿ ಎಸ್ಪೆನ್ ಎಸ್ಕಾಸ್ ಕ್ರೊಯೇಷ್ಯಾದ ಸಮಬಲ ಗೋಲನ್ನು ನಿರಾಕರಿಸಿ ಅದನ್ನು ಆಫ್‌ಸೈಡ್ ಎಂದು ತೀರ್ಪು ನೀಡಿದರು. ಈ ನಿರ್ಧಾರವು ಕ್ರೊಯೇಷಿಯಾದ ಅಭಿಮಾನಿಗಳನ್ನು ಕೆರಳಿಸಿತು, ಅವರು ನೀರಿನ ಬಾಟಲಿಗಳು ಮತ್ತು ಕ್ಯಾನ್‌ಗಳನ್ನು ಸ್ಟ್ಯಾಂಡ್‌ಗಳಿಂದ ಮೈದಾನಕ್ಕೆ ಎಸೆಯಲು ಪ್ರಾರಂಭಿಸಿದರು, ಇದು ಆಟದ ಕೊನೆಯ ಸೆಕೆಂಡುಗಳಲ್ಲಿ ದೀರ್ಘ ವಿಳಂಬಕ್ಕೆ ಕಾರಣವಾಯಿತು. ಈ ಸೋಲಿನೊಂದಿಗೆ, ಕ್ರೊಯೇಷಿಯಾ ಟೂರ್ನಿಯಿಂದ ಅಧಿಕೃತವಾಗಿ ಹೊರಬಿತ್ತು. ಆದರೆ ಪೋರ್ಚುಗಲ್ ಪಂದ್ಯವನ್ನು 2-1 ಅಂತರದಿಂದ ಗೆದ್ದು 16ನೇ ಸುತ್ತಿಗೆ ಅರ್ಹತೆ ಪಡೆಯಿತು. ಕ್ರಿಸ್ಟಿಯಾನೊ ರೊನಾಲ್ಡೊ ಅವರ ಪೋರ್ಚುಗಲ್ ತಂಡ, ಸ್ಪೇನ್ ವಿರುದ್ಧ ಕಾದಾಟ ನಡೆಸಲಿದೆ.

ಪಂದ್ಯದ ಕೊನೆಯ ಕ್ಷಣಗಳಲ್ಲಿ ಚೆಂಡು ಪೋರ್ಚುಗಲ್‌ನ ಪೆನಾಲ್ಟಿ ಬಾಕ್ಸ್‌ಗೆ ಪ್ರವೇಶಿಸುತ್ತಿದ್ದಂತೆ, ಕ್ರೊಯೇಷ್ಯಾದ ಮಾರಿಯೋ ಪಸಾಲಿಕ್ ಪೋರ್ಚುಗೀಸ್ ಡಿಫೆಂಡರ್‌ರೆನಾಟೊ ವೀಗಾ ಅವರ ಎಡವಟ್ಟನ್ನು ಲಾಭ ಮಾಡಿಕೊಂಡು ಚೆಂಡನ್ನು ಗ್ವಾರ್ಡಿಯೋಲ್‌ಗೆ ಪಾಸ್ ಮಾಡಿದರು, ಅವರು ಅದನ್ನು ನೆಟ್‌ಗೆ ಸ್ಲಾಟ್ ಮಾಡಿದರು. ವೀಗಾ ಅದನ್ನು ಮುಟ್ಟುವ ಮೊದಲು ಚೆಂಡು ಕ್ರೊಯೇಷಿಯಾದ ಇಗೊರ್‌ಮಟಾನೋವಿಕ್ ಅವರ ತಲೆಗೆ ತಗುಲಿತು ಎಂದು ಪೋರ್ಚುಗೀಸ್ ಆಟಗಾರರು ಹೇಳಿಕೊಂಡರು. ಮಟಾನೋವಿಕ್ ನಿಜವಾಗಿಯೂ ಚೆಂಡನ್ನು ಮುಟ್ಟಿದ್ದರೆ, ಆ ಕ್ಷಣದಲ್ಲಿ ಪಸಾಲಿಕ್ ಆಫ್‌ಸೈಡ್ ಸ್ಥಾನದಲ್ಲಿರುತ್ತಿದ್ದರು. ಇದನ್ನು ಪರಿಶೀಲಿಸಲು, ಕ್ರಿಕೆಟ್‌ನಲ್ಲಿ ಬಳಸುವ ವ್ಯವಸ್ಥೆಯಂತೆಯೇ ಫುಟ್‌ಬಾಲ್‌ನಲ್ಲಿ ಅಳವಡಿಸಲಾದ 'ಸ್ನಿಕೊ' ಮೈಕ್ರೋಚಿಪ್ ತಂತ್ರಜ್ಞಾನವನ್ನು ಬಳಸಲಾಯಿತು. ಚೆಂಡು ಮತ್ತು ಮಟಾನೋವಿಕ್ ಅವರ ಕೂದಲು ಅಥವಾ ತಲೆಯ ನಡುವೆ ಅತ್ಯಂತ ಕಡಿಮೆ ಸಂಪರ್ಕವಿತ್ತು ಎಂದು ಸ್ನಿಕೊ ಗ್ರಾಫ್ ಬಹಿರಂಗಪಡಿಸಿತು.

ರೊನಾಲ್ಡೊ ಮತ್ತು ರಾಮೋಸ್ ಮಿಂಚು:

ಈ ವಿವಾದಕ್ಕೂ ಮುನ್ನ ಪಂದ್ಯ ಅದ್ಭುತ ಫುಟ್‌ಬಾಲ್‌ಗೆ ಸಾಕ್ಷಿಯಾಯಿತು. ಕ್ರೊಯೇಷಿಯಾದ ಇವಾನ್ ಪೆರಿಸಿಕ್ 53ನೇ ನಿಮಿಷದಲ್ಲಿ ಅದ್ಭುತ ಗೋಲು ಗಳಿಸುವ ಮೂಲಕ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಬಳಿಕ ಪೋರ್ಚುಗೀಸ್ ಸೂಪರ್‌ಸ್ಟಾರ್‌ಕ್ರಿಸ್ಟಿಯಾನೊ ರೊನಾಲ್ಡೊ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸುವ ಮೂಲಕ ಸ್ಕೋರ್‌ಅನ್ನು 1-1 ಸಮಬಲಗೊಳಿಸಿದರು. ಇದು ರೊನಾಲ್ಡೊ ಅವರ ವೃತ್ತಿಜೀವನದ ಮೊದಲ ವಿಶ್ವಕಪ್ ನಾಕೌಟ್ ಹಂತದ ಗೋಲು ಎಂದು ಗುರುತಿಸಲ್ಪಟ್ಟಿತು.

ಇದಾದ ಬಳಿಕ 94ನೇ ನಿಮಿಷದಲ್ಲಿ ಗೊನ್ಸಾಲೊ ರಾಮೋಸ್, ರಾಫೆಲ್ ಲಿಯೊ ಅವರ ಮಾಂತ್ರಿಕ ಕ್ರಾಸ್‌ನಲ್ಲಿ ಅದ್ಭುತ ಹೆಡರ್ ಮೂಲಕ ಪೋರ್ಚುಗಲ್ ತಂಡವನ್ನು 2-1 ಮುನ್ನಡೆಸಿದರು. ಈ ಗೋಲು ಅಂತಿಮವಾಗಿ ನಿರ್ಣಾಯಕವೆಂದು ಸಾಬೀತಾಯಿತು.

ಹತ್ತಿರದಲ್ಲಿವೆ ಫುಟ್ಬಾಲ್ ಪಯಣದ ಅಂತಿಮ ದಿನಗಳು: ನಿವೃತ್ತಿ ಬಗ್ಗೆ ರೊನಾಲ್ಡೊ ಹೇಳಿಕೆ



ಟೊರಾಂಟೊ (ಕೆನಡಾ), ಜು.3 - ಪ್ರಸ್ತುತ ನಡೆಯುತ್ತಿರುವ ಫಿಫಾ ವಿಶ್ವಕಪ್ ಮುಕ್ತಾಯದ ನಂತರ, ಪೋರ್ಚುಗಲ್‌ನ ಖ್ಯಾತ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ತಮ್ಮ ಸುದೀರ್ಘ ವೃತ್ತಿ ಜೀವನಕ್ಕೆ ವಿದಾಯ ಹೇಳಲಿದ್ದಾರೆ ಎಂದು ಅವರ ಸಹೋದರಿ ತಿಳಿಸಿದ್ದಾರೆ.

ಸಹೋದರಿ ಕಟಿಯಾ ಅಲ್ವೇರೊ ನೀಡಿರುವ ಈ ಹೇಳಿಕೆಯು ರೊನಾಲ್ಡೊ ಅವರ ಅಂತಾರಾಷ್ಟ್ರೀಯ ನಿವೃತ್ತಿ ಕುರಿತಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗಳನ್ನು ಹುಟ್ಟುಹಾಕಿದೆ.

ಇಂತಹ ಮಾತುಕತೆಗಳ ನಡುವೆ 41 ವರ್ಷದ ರೊನಾಲ್ಡೊ, ವಿಶ್ವಕಪ್‌ನ ನಾಕೌಟ್ ಹಂತದ ಪಂದ್ಯವೊಂದರಲ್ಲಿ ಕಣಕ್ಕಿಳಿದು ಗೋಲು ಗಳಿಸಿದ ವಿಶ್ವದ ಅತ್ಯಂತ ಹಿರಿಯ ಆಟಗಾರ ಎಂಬ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಕ್ರೊಯೇಷಿಯಾ ವಿರುದ್ಧದ ಪಂದ್ಯಕ್ಕೂ ಮುನ್ನ 'ಸ್ಪೋರ್ಟ್ ಟಿವಿ' ವಾಹಿನಿಯೊಂದಿಗೆ ಮಾತನಾಡಿದ ರೊನಾಲ್ಡೊ ಕಟಿಯಾ, ಈ ವಿಶ್ವಕಪ್‌ನಲ್ಲಿ ಪೋರ್ಚುಗಲ್ ರಾಷ್ಟ್ರೀಯ ತಂಡದ ಪರ ರೊನಾಲ್ಡೊ ಆಡುತ್ತಿರುವುದು ಕೊನೆ ಪಂದ್ಯವಾಗಿರಲಿದೆ ಎಂದು ಹೇಳಿದ್ದಾರೆ.

ಅವರ ಆಟವನ್ನು ಕಣ್ಣೆದುರಿಗಿರುವಾಗಲೇ ಆನಂದಿಸಿ. ಏಕೆಂದರೆ ಈ ಆಟ ಶೀಘ್ರದಲ್ಲೇ ಮುಕ್ತಾಯಗೊಳ್ಳಲಿದೆ. ಅತ್ಯಂತ ನಂಬಿಕಸ್ಥ ಮೂಲಗಳಿಂದ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ, ಇದು ಅವರ ಕೊನೆಯ ವಿಶ್ವಕಪ್. ಅವರು ಇಂದೇ ವಿದಾಯ ಹೇಳುತ್ತಿಲ್ಲ ನಿಜ, ಆದರೆ ಆ ಕ್ಷಣ ಬಹಳ ಹತ್ತಿರದಲ್ಲಿದೆ. ಇದು ಅವರ ವಿದಾಯದ ಪಂದ್ಯಾವಳಿ ಎಂದು ನಾನು ಬಲವಾಗಿ ನಂಬುತ್ತೇನೆ ಎಂದು ಕಟಿಯಾ ಭಾವುಕರಾಗಿ ನುಡಿದಿದ್ದಾರೆ.

ನಾಕೌಟ್ ಪಂದ್ಯ ಮುಗಿದ ತಕ್ಷಣವೇ ರೊನಾಲ್ಡೊ ವಿದಾಯ ಹೇಳುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆದಾಗ್ಯೂ, ನನ್ನ ಸುದೀರ್ಘ ಪಯಣದ ಅಂತ್ಯ ದಿನಗಳು ಹತ್ತಿರದಲ್ಲಿವೆ ಎಂದು ಮಾರ್ಮಿಕವಾಗಿ ನುಡಿದರು.

ವಿಶ್ವಕಪ್ ಇತಿಹಾಸದ ದಂತಕಥೆ ರೊನಾಲ್ಡೊ ಅವರು ಇಲ್ಲಿಯವರೆಗೂ 232 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ. ಈ ಮೂಲಕ ತಮ್ಮ ಗೋಲುಗಳ ಸಂಖ್ಯೆಯನ್ನು 146ಕ್ಕೆ ಏರಿಸಿಕೊಂಡಿದ್ದಾರೆ. ಅಂತಿಮವಾಗಿ ಕ್ರೊಯೇಷಿಯಾ ವಿರುದ್ಧ 2-1 ಗೋಲುಗಳ ಮುನ್ನಡೆ ಸಾಧಿಸಿದ ಪೋರ್ಚುಗಲ್ ಮುಂದಿನ ಹಂತಕ್ಕೆ ಲಗ್ಗೆ ಇಟ್ಟಿದ್ದು, ರೊನಾಲ್ಡೊ ಅವರ ವಿಶ್ವ ಕಪ್ ಕನಸಿನ ವಿಜಯಯಾತ್ರೆ ಮುಂದುವರಿದಿದೆ.